ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಪ್ರಶ್ನೋತ್ತರ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಬೀದರ್‌ನಲ್ಲಿ.....

ಅಧ್ಯಕ್ಷರು: ಈಗ ಶೂನ್ಯ ವೇಳೆಯಲ್ಲಿ .....

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶ್ರೀ ವಿಜಯಕುಮಾರ ನಾಗಮಾರಪಲ್ಲಿಯವರು ಗಲಭೆಯಲ್ಲಿ ಮರಣ ಹೊಂದಿದ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಇಲ್ಲ ಅದನ್ನು ಪ್ರಸ್ತಾಪ ಮಾಡಲೇಬೇಕು. ಇದಕ್ಕೆ ಸರ್ಕಾರ ಹೇಳಿಕೆ ಕೊಡಬೇಕಾಗಿದೆ. ಇದರ ಬಗ್ಗೆ ನಾನು ಗುರುಪಾದಪ್ಪ ನಾಗಮಾರಪಲ್ಲಿ ಅವರ ಪುತ್ರ ಎಂದು ಕೇಳುತ್ತಿಲ್ಲ. ಇದು ಬಹಳ important ಇದೆ.

(ಗೊಂದಲ)

ಅಧ್ಯಕ್ಷರು: ಇದಕ್ಕೆ ನಿಯಮಾವಳಿಗಳು ಇಲ್ಲವೇ? ಕೊಡುತ್ತೇನೆ, ದಯಮಾಡಿ Question Hour ಆದತಕ್ಷಣ.....

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಇವತ್ತು ಗೃಹಮಂತ್ರಿಗಳು ಸದನಕ್ಕೆ ಬರಬೇಕು, ರಾಜೀನಾಮೆ ಕೊಡಬೇಕು. ಗೃಹ ಮಂತ್ರಿಗಳು ಇವತ್ತಿನ ದಿವಸ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಇಲ್ಲದಿದ್ದರೆ ನಾವು allowನೇ ಮಾಡುವುದಿಲ್ಲ. ಮೊದಲನೆ ದಿವಸ ಬಹಳಷ್ಟು ಗಂಭೀರವಾದಂತಹ ರಾಜ್ಯದ ಸಮಸ್ಯೆಗಳು ಇದ್ದರೂ ಕೂಡ ನಿಮಗೆ ನಾವು Co-operate ಮಾಡಿದ್ದೇವೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಪ್ರಸ್ತಾಪ ಮಾಡಿ, ನಾನು ಅವಕಾಶ ಕೊಡುತ್ತೇನೆ. ದಯಮಾಡಿ ಪ್ರಶ್ನೋತ್ತರ ಆದಮೇಲೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ, ಶೂನ್ಯವೇಳೆ ಯಾವಾಗ ಬರುತ್ತದೆ? ದಯಮಾಡಿ, ಕೇಳಿ ಪ್ರಶ್ನೋತ್ತರ ಆದಮೇಲೆ ಅವಕಾಶ ಮಾಡಿಕೊಡುತ್ತೇನೆ. ನೀವು ಏನು ಹೇಳಬೇಕೊ ಹೇಳಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು: ಏನು ಅವಕಾಶ ಮಾಡುವುದು, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎನ್. ಧರ್ಮಸಿಂಗ್: ವಿಜಯಕುಮಾರ್‌ಗೆ 45 years age ಆಗಿತ್ತು. ಅಲ್ಲಿ ಹೋಗುತ್ತಾರೆ. ಕೋರ್ಟಿನ ತೀರ್ಪನ್ನು ಕೊಡುತ್ತಾರೆ. ಅವರು ಹೇಳುತ್ತಾರೆ ನಾವು ಆ ಸ್ಥಳಕ್ಕೆ ಹೋಗುತ್ತಿದ್ದೇವೆ, you have to give me protection, Circle Inspector, police ಎಲ್ಲಾ ಅಲ್ಲೇ ಇರುತ್ತಾರೆ.

ಅಧ್ಯಕ್ಷರು: ನಾನು ಅವಕಾಶ ಕೊಡುತ್ತೇನೆ, question hour ಆಗಲಿ.

ಶ್ರೀ ಎನ್. ಧರ್ಮಸಿಂಗ್: ಯಾವಾಗ ಕೊಡುವುದು? ಈಗ ಚರ್ಚೆಯಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು suo–motu statement ಕೊಡುತ್ತೇನೆಂದು ಮೊನ್ನೆ ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಇವತ್ತಿಗೆ ಘಟನೆ ನಡೆದು ಮೂರು ದಿನವಾಯಿತು. ನೀವು ಆ ಸ್ಥಳಕ್ಕೆ ಹೋಗಲಿಲ್ಲ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಹೋದರೂ ಅಲ್ಲಿ ಭೇಟಿಯಾಗಿಲ್ಲ. ಈ ರೀತಿಯಾಗಿ ರಾಜ್ಯದಲ್ಲಿ ಇವತ್ತು ವ್ಯವಸ್ಥೆ ಇದೆ, ಮಾಜಿ ಮಂತ್ರಿಗಳ ಪುತ್ರ ಹಾಗೂ ಈಗಿನ ಶಾಸಕರ ಪುತ್ರ ಹೇಗಿದ್ದನೆಂದು ಕೇಳಿ. ಅಲ್ಲಿ ಪೋಲೀಸ್ ಎದುರುಗಡೆ ಕತ್ತಿ ಹಾಕಿ ಕರುಳು ಕಿತ್ತಿದ್ದಾರೆ. ಇದು ಯಾರ ಕಾಲದಲ್ಲಿ ಆಗಿದೆ, ಈ ರೀತಿ ಎಂದೂ ಆಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಈ ಘಟನೆ ನಡೆದಾಗ ಅದಕ್ಕೆ ವಿಷಾದ ವ್ಯಕ್ತಪಡಿಸಿದ್ದೇನೆ, ಇದು ಒಂದು ದುರ್ದೈವದ ಸಂಗತಿ, ಆದರೆ ಮಾಹಿತಿಯ ಲಭ್ಯತೆ ಏನಿತ್ತು ಅದನ್ನು ಹೇಳುವಾಗ ಇಲ್ಲ, ಅವರು ಈಗಾಗಲೇ ಮರಣ ಹೊಂದಿದರು ಎನ್ನುವ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಏನು ಘಟನೆಯಾಗಿದೆ ಅದರ ಇಡೀ ಮಾಹಿತಿ ಎಷ್ಟು ಲಭ್ಯತೆ ಇದೆ ಅದನ್ನು ಕೊಡುತ್ತೇನೆ ಎಂದು ಸದನಕ್ಕೆ ಅರಿಕೆ ಮಾಡಿಕೊಂಡಿದ್ದೆ. ಅದರ ಪ್ರಕಾರ ನಾವು ready ಇದ್ದೇವೆ. ಯಾವ ಸಂದರ್ಭದಲ್ಲಿಯಾದರೂ ಆಗಬಹುದು, ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು.

ಪ್ರಶ್ನೋತ್ತರ ವೇಳೆ ಆದಮೇಲೆಯಾದರೂ ತೆಗೆದುಕೊಳ್ಳಬಹುದು ಅಥವಾ ಈಗಲಾದರೂ ನಾನು ಓದುವುದಕ್ಕೆ ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸುವವರೆಗೂ ತಮಗೆ ಗೊತ್ತಾಗಲಿಲ್ಲವೆಂದು ಹೇಳಿದರೆ ...

ಶ್ರೀ ಎಂ.ಪಿ. ಪ್ರಕಾಶ್: ಹಾಗೆ ಹೇಳಲಿಲ್ಲ .....

ಶ್ರೀ ವಾಟಾಳ್ ನಾಗರಾಜ್: ಕೇಳಿ, ಬೇಜಾರು ಮಾಡಿಕೊಳ್ಳಬೇಡಿ. ದಯವಿಟ್ಟು ಕೇಳಿ. ನಾನು ಮಾತನಾಡುವುದಕ್ಕೆ ಬಿಡುವುದಿಲ್ಲವೇ.

ಶ್ರೀ ಎಂ.ಪಿ. ಪ್ರಕಾಶ್: ಸ್ವಲ್ಪ ಕೇಳಿ ಸಾರ್. ಆಗಲ್ಲಾರಿ... ವಿರೋಧ ಪಕ್ಷದ ನಾಯಕರು, ನಾನು ಮೊದಲು ಗೊತ್ತಿರುವಂತಹ ಮಾಹಿತಿಯನ್ನು ಹೇಳಿದೆ. ನಂತರ ಅವರು ತೀರಿಕೊಂಡರು ಎಂದು ಹೇಳಿದರು.

ಅಧ್ಯಕ್ಷರು: ಇದು ಗಂಭೀರವಾದಂತಹ ವಿಚಾರ ಒಪ್ಪಿಕೊಳ್ಳುತ್ತೇನೆ. ಆದರೆ ಪ್ರಶ್ನೋತ್ತರವಾದ ಮೇಲೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಚರ್ಚೆಗೆ ಸರ್ಕಾರ ready ಇದೆ.

(ಗೊಂದಲ)

ಅಧ್ಯಕ್ಷರು: ಈಗ ನಿಮ್ಮ ವಿವೇಚನೆಗೆ ಬಿಡುತ್ತೇನೆ, ಈಗ ನಿಯಮಾವಳಿಗಳ ಪ್ರಕಾರ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಒಂದು ನೋಟೀಸ್ ಕೊಟ್ಟಿದ್ದಾರೆ. ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬಹುದು. ನಾನು ಅವಕಾಶ ಮಾಡಿಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ready ಇದ್ದಾರೆ. ಕೊಟ್ಟುಬಿಡಲಿ.

(ಗೊಂದಲ)

ಅಧ್ಯಕ್ಷರು: ನೀವು ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಹೇಗೆ? ಸೂಚನೆಯನ್ನು ಶೂನ್ಯವೇಳೆಯಲ್ಲಿ ಎಂದು ಕೊಟ್ಟಿದ್ದಾರೆ. ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದನ್ನು ಪ್ರತಿಷ್ಠೆ ಪ್ರಶ್ನೆ ಮಾಡುವುದು ಬೇಡ. ತಮಗೆ ನಾವು ಏನು ಹೇಳುತ್ತೇವೆಂದರೆ ಸರ್ಕಾರವೇ ಮುಂದಾಗಿ ತಕ್ಷಣ ಈ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ಹೇಳಿಕೆ ಕೊಟ್ಟು ಚರ್ಚೆ ಮಾಡಬಹುದಾಗಿತ್ತು. ಈಗ ತಮಗೂ ಕೇಳುತ್ತಿದ್ದೇನೆ, ಈ ವಿಚಾರವನ್ನು ಮಾನ್ಯ ಅಧ್ಯಕ್ಷರೆ ತಾವು ನೇರವಾಗಿ ತೆಗೆದುಕೊಳ್ಳಬೇಕು. ಇದು ಬಹಳ ಗಂಭೀರವಾದಂತಹ ಪರಿಸ್ಥಿತಿ. ಏಕೆಂದರೆ ಹಾಡಹಗಲಲ್ಲೇ ಅಲ್ಲಿ ಕೊಲೆಯಾಗಿದೆ. ಈ ಸಭೆಯಲ್ಲಿ ಇದನ್ನು ತಾವೇ ನೇರವಾಗಿ ಚರ್ಚೆ ಪ್ರಾರಂಭ ಮಾಡಬಹುದು ಎಂದು ಅನಿಸುತ್ತದೆ. ಏಕೆಂದರೆ ಅಂತಹ ಸಂದರ್ಭಗಳು ಅನೇಕ ಸಾರಿ ಬಂದಿವೆ. ಅವಕಾಶ ಕೊಟ್ಟುಬಿಡಿ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು: ಅನುಮತಿ ಕೊಡಿ ತಾವು ದಯವಿಟ್ಟು.

ಶ್ರೀ ಎನ್. ಧರ್ಮಸಿಂಗ್: ಹೇಳಿಕೆ ಕೊಡಲಿ, ನಂತರ ಸದನದ ಕಲಾಪ ಪ್ರಾರಂಭವಾಗಲಿ.

ಅಧ್ಯಕ್ಷರು: ನನ್ನ ಅಭಿಪ್ರಾಯವೇನೆಂದರೆ, ಶೂನ್ಯವೇಳೆಗೆ ಪ್ರಸ್ತಾಪ ಮಾಡುತ್ತೇನೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. Question Hour ಆಗಲಿ. ನಾನು ಅವಕಾಶ ಕೊಡುತ್ತೇನೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಇಲ್ಲ, ಅವರು ತಯಾರಾಗಿದ್ದಾರೆ ಹೇಳಿಕೆ ಕೊಡಲಿ.

ಅಧ್ಯಕ್ಷರು: ಈಗ ಗೃಹ ಸಚಿವರು, if you are ready, ನನ್ನದೇನು ಅಭ್ಯಂತರವಿಲ್ಲ. ವಿಚಾರ ಗಂಭೀರವಾಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಿಯಮಾವಳಿಗಳು....

ಶ್ರೀ ಆರ್. ವಿ. ದೇಶಪಾಂಡೆ: ಮಾನ್ಯ ಗೃಹಸಚಿವರು ready ಇದ್ದೇನೆಂದು ಹೇಳಿದರು.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರೆ ತಾವು ಹೇಳಿಕೆ ಮಾಡಿ.

ಅಧ್ಯಕ್ಷರು: ತಾವು ರೆಡಿ ಇದ್ದರೆ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್: ತಾವು ಒಪ್ಪಿಗೆ ಕೊಟ್ಟರೆ ....

ಅಧ್ಯಕ್ಷರು: ಆಯಿತು, ಏಕೆಂದರೆ ಬಹಳ ಗಂಭೀರ ವಿಷಯ ಇದೆ. ಚರ್ಚೆಗೆ ಅವಕಾಶ ಕೊಡಲೇಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಕೇಳುತ್ತಿದ್ದಾರೆ, ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಉತ್ತರ ಕೊಡುವುದರ ಜೊತೆಗೆ ಇದೊಂದು ಉದಾಹರಣೆಯಾಗಿ ಪದೇ ಪದೇ ತೆಗೆದುಕೊಳ್ಳಬಾರದು. ಏಕೆಂದರೆ ಪ್ರಶ್ನೋತ್ತರ ವೇಳೆ ಆದಮೇಲೆ ಇಂತಹ ಘಟನೆಗಳಿಗೆ ಉತ್ತರ ಕೊಡುವಂತಹ ಅವಕಾಶ ಇರುತ್ತದೆ. ಅದಕ್ಕೆ ಸರಿಯಾದ ನಿರ್ಧಾರವನ್ನು ಮಾಡಿದಿರಿ. ತಾವು ಈ ವಿಚಾರದಲ್ಲಿ ಇದೊಂದು ವಿಶೇಷ ಪ್ರಕರಣ ಎಂದು ಅಪ್ಪಣೆ ಕೊಟ್ಟಿದ್ದೀರಿ. ನಾನು ವಿನಯಪೂರ್ವಕವಾಗಿ ಸದನಕ್ಕೆ ಕೇಳಿಕೊಳ್ಳುವುದು ಪ್ರಶ್ನೋತ್ತರ ವೇಳೆ ಆದಮೇಲೆ ಇಂತಹ ವಿಚಾರಗಳನ್ನು ತೆಗೆದುಕೊಳ್ಳತಕ್ಕಂಥಾದ್ದು ಆಗಬೇಕು. ಪ್ರತಿಷ್ಠೆ ಮೇಲೆ ನಿಲ್ಲಬಾರದು ಎನ್ನುವ ಕಾರಣಕ್ಕಾಗಿ ಮೊನ್ನೆ ಕೂಡ ಹೇಳಿದಂತೆ ನಾನು ಸದನಕ್ಕೆ ನಡೆದ ಘಟನೆಯ ಬಗ್ಗೆ ಸಂಪೂರ್ಣವಾದ ವರದಿಯನ್ನು ಕೊಡುತ್ತೇನೆ. ಈಗ ವರದಿಯನ್ನು ಮಂಡಿಸುತ್ತೇನೆ.

ವಿಷಯ: ಶ್ರೀ ವಿಜಯಕುಮಾರ ನಾಗಮಾರಪಲ್ಲಿ ದಿನಾಂಕ 02.02.2007 ರಂದು ದಿನಾಂಕ 02.02.2007ರಂದು ಗಲಭೆಯಲ್ಲಿ ಮರಣರಾದ ಬಗ್ಗೆ ವರದಿ ಕುರಿತು.

ಮೇಲೆ ನಮೂದಿಸಿದ ವಿಷಯದಲ್ಲಿ ಸಲ್ಲಿಸುವ ವರದಿ ಈ ಕೆಳಗಿನಂತಿದೆ;

ಈ ಘಟನೆಯು ಭೂವಿವಾದಕ್ಕೆ ಸಂಬಂಧಿಸಿದ್ದಾಗಿದೆ. ವಿವಾದಿತ ಆಸ್ತಿಯು ಅಲಿಯಾಬಾದ (ಸದ್ಯ ಶಿವನಗರ ದಕ್ಷಿಣ ಬೀದರ) ಗ್ರಾಮದ ಜಮೀನು ಸರ್ವೇ ನಂ.69/ಯುಯುಓ ರಲ್ಲಿ 23 ಗುಂಟೆ ಮತ್ತು ಸರ್ವೇ ನಂ.101 (ಹಳೆಯದು) ಸರ್ವೆ ನಂ. 101/ಎ/1 (ಹೊಸ)ರಲ್ಲಿ 1 ಎಕರೆ 32 ಗುಂಟೆ ಜಮೀನು ಚಿದ್ರಿ ಗ್ರಾಮದ ಸರಹದ್ದಿನಲ್ಲಿ (ಈ ಎರಡು ಆಸ್ತಿ ಈಗ ಬೀದರ ನಗರ ಸಭೆಯ ವ್ಯಾಪ್ತಿಯಲ್ಲಿದೆ. ಈ ಜಮೀನುಗಳ ಸಂಬಂಧ ಶ್ರೀ ವೆಂಕಟರಾವ ತಂದೆ ರಾಮರಾವ ಬಿರಾದಾರ ವಾದಿಯಾಗಿ ಸಿವಿಲ ಮೊಕದ್ದಮೆ ಸಂಖ್ಯೆ 115/95 ನೇದರಲ್ಲಿ ಶ್ರೀ ವಿಜಯಕುಮಾರ ನಾಗಮಾರಪಲ್ಲಿ (ಪ್ರತಿವಾದಿ ಸಂಖ್ಯೆ 13 ಇದ್ದು)

ಮತ್ತು 48 ಜನರ ಮೇಲೆ ದಾವೆ ಹೂಡಿರುತ್ತಾರೆ. ಮತ್ತು ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ 19/2002 ರಲ್ಲಿ ಶ್ರೀ ವೆಂಕಟರಾವ ಬಿರಾದಾರ ವಾದಿಯಾಗಿದ್ದು ಮೇಲಿನಂತೆ ಶ್ರೀ ವಿಜಯಕುಮಾರ ನಾಗಮಾರಪಲ್ಲಿ ಹಾಗೂ 48 ಜನರು ಪ್ರತಿವಾದಿಯಾಗಿದ್ದು ದಿನಾಂಕ 27.01.2007ರಂದು ತೀರ್ಪು ಆಗಿರುತ್ತದೆ ಎಂದು ತಿಳಿದು ಬಂದಿದೆ. ಈ ತೀರ್ಪು ಶ್ರೀ ವಿಜಯಕುಮಾರ ನಾಗಮಾರಪಲ್ಲಿ ಮತ್ತು 48 ಜನರ ಪರವಾಗಿ ಆಗಿದೆ ಎಂದು ತಿಳಿದು ಬಂದಿದೆ. ಆದರೆ, ಕೋರ್ಟ ತೀರ್ಪಿನ ಪ್ರತಿ ಇನ್ನೂ ಜಿಲ್ಲಾಡಳಿದ ಕೈ ಸೇರಿಲ್ಲ. ಅಲ್ಲದೇ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯವರು ತೀರ್ಪಿನ "Certified"/ಮೂಲ ಪ್ರತಿಯನ್ನು ಜಿಲ್ಲಾಡಳಿತಕ್ಕೆ ಹಾಜರುಪಡಿಸಿರುವುದಿಲ್ಲ. ಗಮನಾರ್ಹ ಅಂಶವೆಂದರೆ, ಈ ವಿವಾದಿತ ಆಸ್ತಿಯು ಕಳೆದ 15 ವರ್ಷಗಳಿಂದ (ಅಂದರೆ 1992ರಿಂದ) ಶ್ರೀ ವೆಂಕಟರಾವ ಬಿರಾದಾರ್‌ರ ವಶದಲ್ಲಿದೆ. ಈ ವಿವಾದಿತ ಜಮೀನಿನಲ್ಲಿಯೇ ಶ್ರೀ ವೆಂಕಟರಾವ ಬಿರಾದಾರನ ಕ್ಲಾಸಿಕ್ ಎಂಬ ಹೆಸರಿನ ಧಾಬಾ ಹಾಗೂ ಮನೆಯಿದ್ದು, ತನ್ನ ಇಬ್ಬರು ಸಹೋದರರು ಹಾಗೂ ಕುಟುಂಬದೊಂದಿಗೆ ಇಲ್ಲಿ ವಾಸವಾಗಿದ್ದಾನೆ.

ಈ ಹಿನ್ನೆಲೆಯಲ್ಲಿ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯು ದಿನಾಂಕ 02.02.2007 ರಂದು ಜಿಲ್ಲಾಧಿಕಾರಿ, ಬೀದರ ಹಾಗೂ ತದನಂತರ ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಬೀದರರವರನ್ನು ಸದರಿ ಜಮೀನನ್ನು ತಮ್ಮ ಸ್ವಾಧೀನಕ್ಕೆ ಕೊಡಿಸಬೇಕೆನ್ನುವ ವಿಷಯದ ಸಲುವಾಗಿ ಭೇಟಿ ಮಾಡಿರುತ್ತಾರೆ. ಅದಕ್ಕೆ ಜಿಲ್ಲಾಧಿಕಾರಿಗಳು ಸದರಿ ವಿವಾದಿತ ಆಸ್ತಿಯ ಅಳತೆ ಹಾಗೂ ಹದ್ದುಬಂದಿ ಮುಂತಾದವುಗಳನ್ನು ತಹಶೀಲ್ದಾರ್, ಬೀದರ್‌ರವರಿಂದ 10 ದಿನಗಳಲ್ಲಿ ಮಾಡಿಸಿಕೊಡುವುದಾಗಿಯೂ ಅಲ್ಲಿಯವರೆಗೂ ಅವರು ಕಾಯಬೇಕೆಂದು ತಿಳಿಸಿದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಬೀದರವರು ಸಿವಿಲ ನ್ಯಾಯಾಲಯದಿಂದ ಬೇಲಿಫ್ ಆದೇಶವಾಗಬೇಕೆಂದೂ, ಬಳಿಕವೇ ಪೊಲೀಸರು ಅದನ್ನು ಜಾರಿಗೊಳಿಸಲು ಸಾಧ್ಯವಾಗುತ್ತದೆಯೆಂದೂ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯವರಿಗೆ ತಿಳಿಸಿದ್ದಾರೆ.

ಈ ರೀತಿ ಭೇಟಿಯಾದ ಬಳಿಕ ದಿನಾಂಕ 02.02.2007 ರಂದು ಬೆಳೆದ ಚಟುವಟಿಕೆಗಳು ಈ ಕೆಳಗಿನಂತಿರುತ್ತವೆ.

1) ಶ್ರೀ ವಿಜಯಕುಮಾರ ನಾಗಮಾರಪಲ್ಲಿರವರು ಮತ್ತು ಅವರೊಂದಿಗಿದ್ದ ಗುಂಪು ಕಾಯಲಾರದೇ ಅವರಿಗೆ ಕೊಟ್ಟ ಸಲಹೆಯನ್ನು ಮೀರಿ, ಜಿಲ್ಲಾ ಹಾಗೂ ಪೊಲೀಸ್ ಇಲಾಖೆಗೆ ಯಾವುದೇ ಮಾಹಿತಿ ನೀಡದೆ, ಶ್ರೀ ವೆಂಕಟರಾವ ಬಿರಾದಾರರವರ ವಶದಲ್ಲಿರುವ ವಿವಾದಿತ ಜಮೀ ವಿವಾದಿತ ಜಮೀನಿನಲ್ಲಿ ಶ್ರೀ ವೆಂಕಟರಾವ ಬಿರಾದಾರ್‌ನ ಕ್ಲಾಸಿಕ್ ಧಾಬಾ ಹಾಗೂ ಮನೆಯಿದೆ) ತನ್ನ ಗುಂಡು ತುಂಬಿದ ರಿವಾಲ್ವಾರ ಜೊತೆಗೆ ಎರಡು ಟ್ರಾಕ್ಟರಗಳಲ್ಲಿ ಕಲ್ಲುಗಳ ಸಮೇತ ಜನರನ್ನು ತುಂಬಿಕೊಂಡು ಬಂದಿರುತ್ತಾರೆ.

2) ಆ ಸಮಯದಲ್ಲಿ ಶ್ರೀ ವೆಂಕಟರಾವ ಬಿರಾದಾರ ಹಾಗೂ ಶ್ರೀ ವಿಜಯ ಕುಮಾರ ನಾಗಮಾರಪಲ್ಲಿರವರ ಮಧ್ಯ ಮಾತಿನ ಚಕಮಕಿ ಉಂಟಾಯಿತು. ಶ್ರೀ ವೆಂಕಟರಾವ ಬಿರಾದಾರ ನ್ಯಾಯಾಲಯದಲ್ಲಿ ತನಗೆ ಮೇಲ್ಮನವಿ ಸಲ್ಲಿಸಲು ಸಮಯ ಇನ್ನೂ ಮೀರಿಲ್ಲವಾದ್ದರಿಂದ ತನ್ನ ಕಬ್ಜಾವನ್ನು ಒತ್ತಾಯಪೂರ್ವಕವಾಗಿ ತೆಗೆಸಬಾರದೆಂದು ಶ್ರೀ ವಿಜಯಕುಮಾರ ನಾಗಮಾರಪಲ್ಲಿಗೆ ಹೇಳಿರುತ್ತಾರೆ.

3) ಈ ಸಮಯಕ್ಕೆ ಘಟನೆ ಸ್ಥಳಕ್ಕೆ ಕೂಡಲೇ ನಗರ ಗಸ್ತಿನಲ್ಲಿರುವ "ರಕ್ಷಕ" ಎಂಬ ವಾಹನವು ನೂತನ ನಗರ ಪೊಲೀಸ್ ಠಾಣೆಯ ಒಬ್ಬ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿಯೊಂದಿಗೆ ಧಾವಿಸಿರುತ್ತದೆ.

4) ಅದೇ ಸಮಯದಲ್ಲಿ, ಶ್ರೀ ವಿಜಯಕುಮಾರ ನಾಗಮಾರಪಲ್ಲಿಯವರ ಗುಂಪಿನ ಕೆಲ ಜನರು ಶ್ರೀ ವೆಂಕಟರಾವ ಬಿರಾದಾರ್‌ಗೆ ಸೇರಿದ ಕ್ಲಾಸಿಕ್ ಧಾಬಾದ ಹೂವಿನ ಕುಂಡಗಳು ಮತ್ತು ಇತರೆ ಸಾಮಾನುಗಳನ್ನು ಹಾಳು ಮಾಡಲಾರಂಭಿಸಿದಾಗ, ಶ್ರೀ ವೆಂಕಟರಾವ್ ಬಿರಾದಾರ ಮತ್ತು ಅವನ ಇಬ್ಬರು ತಮ್ಮಂದಿರು ಆ ಜನರ ಮೇಲೆ ಕಾರದ ಪುಡಿ ಎರಚಿ ತಲವಾರು (ಖಡ್ಗ) ಹಿಡಿದುಕೊಂಡು, ಆ ಜನರನ್ನು ಓಡಿಸಲಾರಂಭಿಸಿದರು.

5) ಸ್ಥಳದಲ್ಲಿದ್ದ ಪೊಲೀಸರು, ಅಲ್ಲಿದ್ದ ಎಲ್ಲಾ ಜನರನ್ನು ಚದುರಿಸಲು ಪ್ರಯತ್ನಿಸಿದರೂ,

6) ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆಯೇ ಟ್ರಾಕಟರಗಳಲ್ಲಿ ಬಂದಿದ್ದ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯವರ ಜನರು (ಟ್ರಾಕ್ಟರಗಳು ಧಾಬಾದ ಎದುರಿಗೆ ಬೀದರ – ಉದಗೀರ ರಸ್ತೆಯಲ್ಲಿ ನಿಂತಿದ್ದವು) ಕಲ್ಲು ತೂರಾಟ ಮಾಡಿದರು.

7) ಶ್ರೀ ವೆಂಕಟರಾವ ಬಿರಾದಾರನು ಶ್ರೀ ವಿಜಯಕುಮಾರ ನಾಗಮಾರಪಲ್ಲಿಯ ಮುಖಕ್ಕೆ ಕಾರದ ಪುಡಿ ಎರಚುತ್ತಿದ್ದಂತೆಯೇ ಶ್ರೀ ವಿಜಯ ಕುಮಾರ ನಾಗಮಾರಪಲ್ಲಿಯು ತಾನು ಒಯ್ದಿದ್ದ ಪರವಾನಿಗೆ ಪಡೆದ ರಿವಾಲ್ವಾರನಿಂದ ಶ್ರೀ ವೆಂಕಟರಾವ ಬಿರಾದಾರನನ್ನು ಹೊಡೆಯಲು ಹೋದರು. ಅದೇ ಸಮಯದಲ್ಲಿ ಶ್ರೀ ವೆಂಕಟರಾವ ಬಿರಾದಾರ ಕೂಡ ತನ್ನ ಕೈಯಲ್ಲಿದ್ದ ತಲವಾರಿನಿಂದ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯ ತಲೆಯ ಮೇಲೆ ಹಲ್ಲೆ ಮಾಡಿದನು.

8) ತಲವಾರಿನ ಹಲ್ಲೆಯಿಂದ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯು ನೆಲಕ್ಕೆ ಕುಸಿದು ಬಿದ್ದಾಗ ಶ್ರೀ ವೆಂಕಟರಾವ ಬಿರಾದಾರನು ತನ್ನ ಇಬ್ಬರು ತಮ್ಮಂದಿರೊಂದಿಗೆ ಶ್ರೀ ವಿಜಯಕುಮಾರ ನಾಗಮಾರಪಲ್ಲಿರವರ ಮೇಲೆ ಮತ್ತೆ ಚಾಕುವಿನಿಂದ ಹಲ್ಲೆ ಮಾಡಿದನು. ಕಾರದ ಪುಡಿ ಕಣ್ಣಿಗೆ ಬಿದ್ದು ಏನೂ ಕಾಣದಂತಾಗಿ ಶ್ರೀ ವಿಜಯಕುಮಾರ ನಾಗಮಾರಪಲ್ಲಿಯು ಗುಂಡು ಹಾರಿಸಿದರು.

9) ನಂತರ, ಶ್ರೀ ವೆಂಕಟರಾವ ಬಿರಾದಾರನ ಸೋದರ ಕೃಷ್ಣ ಎಂಬುವನು ಶ್ರೀ ವಿಜಯಕುಮಾರ ನಾಗಮಾರಪಲ್ಲಿಯಿಂದ ರಿವಾಲ್ವಾರ್ ಕಸಿದುಕೊಂಡು ಶ್ರೀ ವಿಜಯಕುಮಾರ ನಾಗಮಾರಪಲ್ಲಿ ಹಾಗೂ ಟ್ರಾಕ್ಟರನಲ್ಲಿದ್ದ ಅವರ ಜನರತ್ತ ಗುಂಡು ಹಾರಿಸಿದನು.

10) ಘಟನೆ ಸ್ಥಳದಲ್ಲಿದ್ದ "ರಕ್ಷಕ" ಗಸ್ತು ವಾಹನದ ಸಿಬ್ಬಂದಿಗಳು ನೂತನ ನಗರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಮೇರೆಗೆ ಇಬ್ಬರು ಪಿ.ಎಸ್.ಐ.ಗಳು ಘಟನೆ ಜರುಗುತ್ತಿರುವಂತೆಯೇ ಘಟನಾ ಸ್ಥಳಕ್ಕೆ ತಲುಪಿದರು.

11) ಶ್ರೀ ವಿಜಯಕುಮಾರ ನಾಗಮಾರಪಲ್ಲಿಗೆ ಹರಿತವಾದ ಕತ್ತಿಯಿಂದ ಭಾರಿಗಾಯಗಳಾಗಿದ್ದರಿಂದ ತಕ್ಷಣವೇ ಚಿಕಿತ್ಸೆ ಕುರಿತು ಅವರನ್ನು ಬೀದರ ಸರಕಾರಿ ಆಸ್ಪತ್ರೆಗೆ ಸೇರಿಸಲಾಯಿತು. ಬೀದರಿನ ವೈದ್ಯಾಧಿಕಾರಿಗಳು, ಹೆಚ್ಚಿನ ಚಿಕಿತ್ಸೆ ಕುರಿತು ಹೈದರಾಬಾದಿಗೆ ತೆಗೆದುಕೊಂಡು ಹೋಗುವಂತೆ ಸೂಚಿಸಿದರು. ಹೈದರಾಬಾದ್‌ಗೆ ಹೋಗುತ್ತಿರುವಾಗ, ದಾರಿ ಮಧ್ಯದಲ್ಲಿ ಶ್ರೀ ವಿಜಯಕುಮಾರ ನಾಗಮಾರಪಲ್ಲಿರವರು ಮೃತಪಟ್ಟಿರುತ್ತಾರೆ.

12) ಸದರಿ ಘಟನೆಯಲ್ಲಿ ಶ್ರೀ ಸುಭಾಷ ಗಜರೆ, ಪಿ.ಎಸ್.ಐ (ಕಾ.ಸು.) ರವರ ತಲೆಗೆ ಭಾರಿ ಗಾಯವಾಗಿದ್ದು ಅವರನ್ನು ಚಿಕಿತ್ಸೆ ಕುರಿತು ಹೈದರಾಬಾದಕ್ಕೆ ಕಳುಹಿಸಲಾಗಿದೆ.

13) ಇತರ ಸಿಬ್ಬಂದಿಗಳಾದ ಶ್ರೀಮತಿ ಮಲ್ಲಮ್ಮ ಚೌಬೆ ಮಹಿಳಾ ಸಬ್ ಇನ್ಸ್‌ಪೆಕ್ಟರ್, ಶ್ರೀ ಮಾರುತಿ, ಸಹಾಯಕ ಸಬ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಗಳವರಾದ ಶ್ರೀ ಬಾಲಾಜಿ ಸಿ.ಎಚ್.ಸಿ. 696 ಮತ್ತು ಶ್ರೀ ರಾಜಶೇಖರ ಸಿ.ಎಚ್.ಸಿ. 517 ನೂತನ ನಗರ ಪೊಲೀಸ್ ಠಾಣೆ, ಹಾಗೂ "ರಕ್ಷಕ" ಗಸ್ತು ವಾಹನದಲ್ಲಿದ್ದ ಶ್ರೀ ಮಾದಪ್ಪಾ ಎ.ಎಸ್.ಐ., ಶ್ರೀರಾಜಕುಮಾರ ದಾನ ಸಿಪಿಸಿ–822 ಮಾರ್ಕೆಟ ಪೊಲೀಸ್ ಠಾಣೆ, ಶ್ರೀ ರವಿ ಕವಳೆ ಸಿಪಿಸಿ–895 ಗಾಂಧಿ ಗಂಜ ಪೊಲೀಸ್ ಠಾಣೆ, ಶ್ರೀ ವಿನೋದ ಸಿಪಿಸಿ–1031 ನೂತನ ನಗರ ಪೊಲೀಸ್ ಠಾಣೆ ಮತ್ತು ಶ್ರೀ ರಾಜಕುಮಾರ ಎಪಿಸಿ–309 ಎಂಬುವರನ್ನು ಸದರಿ ಘಟನೆಯು ತಮ್ಮ ಸಮ್ಮುಖದಲ್ಲಿ ನಡೆಯುತ್ತಿರುವುದನ್ನು ತಡೆಗಟ್ಟಲು ಸಾಧ್ಯವಾಗದ ಕಾರಣ ಇಲಾಖಾ ವಿಚಾರಣೆ ಬಾಕಿ ಇಟ್ಟು ಅಮಾನತುಗೊಳಿಸಲಾಗಿದೆ. ಶ್ರೀ ಎಸ್.ಜಿ.ಕಳ್ಳಿಗುಡ್ಡ, ಸಿಪಿಐ ಬೀದರ ನಗರ ವೃತ್ತರವರ ವಿರುದ್ಧ ಮೇಲಿನ ವಿಷಯದಲ್ಲಿ ಶಿಸ್ತಿನ ಕ್ರಮಕ್ಕಾಗಿ ಮಾನ್ಯ ಪೊಲೀಸ್ ಮಹಾನಿರೀಕ್ಷಕರು, ಈಶಾನ್ಯ ವಲಯ, ಗುಲಬರ್ಗಾರವರಲ್ಲಿ ವರದಿ ಸಲ್ಲಿಸಲಾಗಿದೆ.

14) ಈ ಘಟನೆಯ ಸಂಬಂಧವಾಗಿ ನೂತನ ನಗರ ಪೊಲೀಸ್ ಠಾಣೆ ಗುನ್ನೆ ಸಂ.10/07 ಕಲಂ 143, 147,1 148, 504, 307, 302 ಜೊತೆ 149 ಐ.ಪಿ.ಸಿ. ಮತ್ತು 3 & 7 ಆಯುಧ ಕಾಯ್ದೆ 1959 ರಂತೆ ಶ್ರೀ ವೆಂಕಟರಾವ ಮತ್ತು ಇನ್ನು ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಲ್ಲಾ ನಾಲ್ಕು ಆರೋಪಿಗಳನ್ನೂ (ಅಂದರೆ ವೆಂಕಟರಾವ, ಭೀಮರಾವ, ಕೃಷ್ಣ ಮತ್ತು ಗುರುರಾಜ) ದಸ್ತಗಿರಿ ಮಾಡಿದ್ದು ಗುನ್ನೆಗೆ ಉಪಯೋಗಿಸಿದ ಕತ್ತಿ, ರಿವಾಲ್ವಾರಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಸದ್ಯ ಆರೋಪಿತರು ನ್ಯಾಯಾಂಗ ಬಂಧನದಲ್ಲಿರುತ್ತಾರೆ.

ಮಾನ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಬೆಂಗಳೂರುರವರ ಆದೇಶದ ಮೇರೆಗೆ

ಸದರಿ ಪ್ರಕರಣದ ತನಿಖೆಯನ್ನು ಸಿ.ಓ.ಡಿ. ಬೆಂಗಳೂರುರವರಿಗೆ ವಹಿಸಿಕೊಡಲಾಗಿದೆ.

ಈ ಘಟನೆ ಸಂಬಂಧ ನಗರದಲ್ಲಿ ಉದ್ರಿಕ್ತ ವಾತಾವರಣ ಉದ್ಭವಿಸುವ ಸಾದ್ಯತೆಗಳಿದ್ದ ಕಾರಣ ಕಾನೂನು ಮತ್ತು ಸೂವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು, ಬೀದರ್‌ರವರು ಕಲಂ 144 ಸಿ.ಆರ್.ಪಿ.ಸಿ. ಪ್ರಕಾರ ದಿನಾಂಕ 02.02.2007 ದಿಂದ ದಿನಾಂಕ 03.02.2007ರ 1700 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಿರುತ್ತಾರೆ.

ಸದ್ಯ ಪರಿಸ್ಥಿತಿಯು ನಿಯಂತ್ರಣದಲ್ಲಿದೆ, ಯಾವುದೇ ಅಹಿತಕರ ಘಟನೆ ಜರುಗದೇ ಶಾಂತವಾಗಿರುತ್ತದೆ.

ಶ್ರೀ ಎನ್.ಧರ್ಮಸಿಂಗ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಶ್ನೋತ್ತರ ಕಲಾಪದಲ್ಲಿ ಭಾಗವಹಿಸಿ, ಪ್ರಶ್ನೆಯನ್ನು ಕೇಳಿದ್ದರು. ತದನಂತರ, ಅವರು ಶ್ರೀ ರಾಜಶೇಖರ ರೆಡ್ಡಿಯವರ ಹತ್ತಿರ ಹೋಗುತ್ತಿದ್ದೇನೆ ಎಂದರು. ಕಿಡ್ನಿಯ ತೊಂದರೆ ಇದ್ದುದ್ದರಿಂದ ನಾನು ಕೂಡ ಒಂದು ಲೆಟರ್ ಕೊಟ್ಟಿದ್ದೆ. ಅವರು ಇಲ್ಲಿಂದ ಮನೆಗೆ ಹೋಗುವ ಸಂದರ್ಭದಲ್ಲಿ, ನಿಮ್ಮ ಮಗನ ಮೇಲೆ ಹಲ್ಲೆಯಾಗಿ, ಗಾಯಗೊಂಡಿದ್ದಾರೆಂದು ದೂರವಾಣಿಯ ಮೂಲಕ ತಿಳಿಸಿದ್ದಾರೆ, ಅವರನ್ನು ಹೈದರಾಬಾದ್‌ನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ತಿಳಿಸಿದ್ದಾರೆ, ನಂತರ ಅವರು ಸಾವನ್ನಪ್ಪಿದ್ದಾರೆಂದು ತಿಳಿಸಿದ್ದಾರೆ. ಸದನದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರಾಜ್ಯದಲ್ಲಿರುವ ಬರಗಾಲದ ಬಗ್ಗೆ ಮಾತನಾಡುತ್ತಿದ್ದರು. ಮಾನ್ಯ ಬಸವರಾಜ ಹುಮ್ನಾಬಾದ್‌ರವರ ಸಂಬಂಧಿಕರು, ಎಂ.ಎಲ್.ಸಿ.ಯಾಗಿದ್ದಾರೆ. ಅವರು ಬಂದು ನಮಗೆ ಸತ್ತು ಹೋಗಿರುವ ವಿಚಾರವನ್ನು ತಿಳಿಸಿದರು. ಆಗ ನಾವು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಎಲ್ಲಿದ್ದಾರೆಂದು ಕೇಳಿದಾಗ, ಅವರು ಏರ್‌ಪೋರ್ಟ್‌ನಲ್ಲಿ ಇದ್ದಾರೆಂದು ತಿಳಿಸಿದರು. ಅವರು ಹೊರಡಬೇಕಾಗಿದ್ದ ವಿಮಾನ ಹೊರಡುವ ಸಮಯವೂ ಇನ್ನು ಇತ್ತು. ನಾವು ಅಲ್ಲಿಗೆ ಹೋದೆವು, ಮತ್ತೆ ಅಲ್ಲಿಗೆ ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮತ್ತಿತರೆಲ್ಲರೂ ಬಂದರು. ನಾವು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೊಂದಿಗೆ ಮಾತನಾಡಿದೆವು. ಅಲ್ಲಿದ್ದ ಕಳ್ಳಿಗುಡ್ಡ ಅವರು

ನೆಲಗಿ ಪೊಲೀಸ್ ಸ್ಟೇಷನ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದರು. ನಾನು ಅವರನ್ನು ಏನು ಆಗಿದೆಯೆಂದು ಕೇಳಿದಾಗ, ಅವರು ಭಯದಲ್ಲಿದ್ದರು. ಅದಕ್ಕೆ ಅವರು ಏನು ಆಗಿಲ್ಲ, ಅದು ಈ ರೀತಿ ಇದೆ, ನಾನು ಮತ್ತೆ ಭೇಟಿಯಾಗಿ ಮಾತನಾಡುತ್ತೇನೆಂದು ಹೇಳಿದರು. ಇದು ಮೊದಲ ಸಲ ಆದ ಘಟನೆಯಲ್ಲ. ತಾವು ರಾಜ್ಯದ ಗೃಹ ಮಂತ್ರಿಗಳಾಗಿದ್ದೀರಿ. ಇದು ಬೀದರ್ ಜಿಲ್ಲೆಯಲ್ಲಿ , ಗಡಿ ಭಾಗದಲ್ಲಿ ನಡೆದಿರತಕ್ಕಂಥ ಘಟನೆ. ಇಲ್ಲಿ ಪೊಲೀಸ್ ಇಲಾಖೆ ಮಾಡತಕ್ಕಂಥ ಕೆಲಸವೇನು? ಎಸ್.ಪಿ., ಡಿ.ಸಿ. ಒಂದೇ ಕಡೆ ಇದ್ದಾರೆ. Now I don't want to tell that here is a lady S.P. you get all the information ಯಾವ ರೀತಿಯಾಗಿ ಆಕೆ ಕೆಲಸ ಮಾಡುತ್ತಾರೆ, ಯಾವ ರೀತಿಯಾಗಿ ಆಗುತ್ತಿದೆ ಎನ್ನುವ ಬಗ್ಗೆ ನೀವೇ information collect ಮಾಡಿ. ಅದರ ಬಗ್ಗೆ ನಾನು ಇಲ್ಲಿ ಹೇಳುತ್ತಿಲ್ಲ. ಅಲ್ಲಿ ಒಂದು ಗಲಭೆಯಾಯಿತು. ಆಗ ನಾವು ಮತ್ತು ಬಸವರಾಜ ಪಾಟೀಲ್ ಹುಮ್ನಾಬಾದ್‌ರವರು ಈ ಬಗ್ಗೆ ಒಂದು Press Conference ಮಾಡಿದೆವು. ಬೀದರ್ ಜಿಲ್ಲೆಯಲ್ಲಿ ಪದೇಪದೇ ಈ ರೀತಿಯ ಘಟನೆಗಳು ನಡೆಯುತ್ತಿವೆ. ಅಲ್ಲಿ ದಲಿತರ ಮೇಲೆ ಕೂಡ ಹಲ್ಲೆಯಾಗುತ್ತಿದೆ. ಈ ಬಗ್ಗೆ ತಮಗೆ ಕೂಡ ನಾವು ಹೇಳಿದ್ದೇವೆ. ಎರಡು ತಿಂಗಳ ಹಿಂದೆ Press Conferenceನಲ್ಲಿ ಕೂಡ ನಾವು ಇದನ್ನು ಹೇಳಿದ್ದೇವೆ. ಅದಾದಮೇಲೆ ಮುಖ್ಯಮಂತ್ರಿಗಳ ಬಳಿಗೆ ಕೂಡ ನಿಯೋಗ ಹೋಗಿ, ನಮ್ಮ ಮೇಲೆ ಬಹಳ ಹಲ್ಲೆಗಳು ನಡೆಯುತ್ತಿವೆ ಎಂದು ನಿಯೋಗ ಹೇಳಿತ್ತು. ಹುಮ್ನಾಬಾದಿನಲ್ಲಿ ಡಾ: ಅಂಬೇಡ್ಕರ್‌ರವರ ಪ್ರತಿಮೆಯನ್ನು ಭಗ್ನಗೊಳಿಸತಕ್ಕಂಥ ಘಟನೆಯಾಯಿತು. ಪೊಲೀಸರು ಅಲ್ಲಿ ಕೆಲಸವನ್ನೇ ಮಾಡುತ್ತಿಲ್ಲ. ಗಡಿ ಭಾಗದಲ್ಲಿರತಕ್ಕಂಥ ಈ ಜಿಲ್ಲೆಯ ಎಸ್.ಪಿ., ಐ.ಜಿ. ಏನು ಕೆಲಸ ಮಾಡುತ್ತಾರೆ? Immediately, they must rush to the spot ಅವರು ಅದನ್ನು ಮಾಡುತ್ತಿಲ್ಲ. ಅದಾದಮೇಲೆ, ದಲಿತರು ಎಲ್ಲರೂ ಸೇರಿ, ಇನ್ನೂ ಕೂಡ ಏನೂ action ಆಗಿಲ್ಲ, ಅವರ ಮೇಲೆ ಕೇಸ್ ಹಾಕತಕ್ಕಂಥಾದ್ದನ್ನು ಮಾಡಬೇಕು ಎಂದು ಹೇಳುತ್ತಿದ್ದರು. ಅಲ್ಲಿಯ ಎಸ್.ಪಿ. ಮೇಲೆ ನಾವು ಪದೇಪದೇ ದೂರು ಕೊಟ್ಟಿದ್ದೇವೆ. ಅದು ತಮಗೂ ಕೂಡ ತಲುಪಿರಬಹುದು. you have not taken any action. ನಿಮ್ಮ ಬಗ್ಗೆ ನಮಗೆ ಗೌರವವಿದೆ. ಅಲ್ಲಿ ಏನಾಗುತ್ತಿದೆ? Vijayakumar, third son of Gurupadappa, ಮನೆಯಲ್ಲಿದ್ದ. ಅವನು ಎಲ್ಲರಿಗಿಂತ ಒಳ್ಳೆಯ ಮನುಷ್ಯ. ಮತ್ತೊಬ್ಬ ಬಸವರಾಜ ಅಟ್ಟೂರು ಎಂದು

ಇದ್ದಾನೆ. ಅವನು Teachers Constituencyಯಿಂದ contest ಮಾಡಿದ್ದ. He is in Janatha Dal ಅವನು ನಿಮ್ಮ ಪಕ್ಷದ President ಆಗಿದ್ದ. ಅವರು ಬಂದು ವಿಜಯಕುಮಾರ್‌ರವರಿಗೆ ನಡೆಯಿರಿ ಹೋಗೋಣ ಎಂದು ಹೇಳಿದರು. Court Order ಬಂದ ಮೇಲೆ 45 ಮಂದಿ alloteeಗಳು ಅಲ್ಲಿಗೆ ಹೋದರು. ಪ್ರತಿವಾದಿಗಳಾಗಿದ್ದವರು ನಾಲ್ಕು ಮಂದಿ Brothers ಇದ್ದಾರೆ. ಅವರು ಅಲ್ಲಿ ದಾಬಾ ನಡೆಸುತ್ತಿದ್ದರು. ಅದು ಎಲ್ಲಿದೆ ಎಂದರೆ, ನಮ್ಮ ಬೀಳಪ್ಪನವರ ಕೆ.ಎಲ್.ಇ. ಸೊಸೈಟಿಯ ಪಕ್ಕದಲ್ಲಿದೆ. ಅಲ್ಲಿಗೆ ಹೋಗಿ, "Court Order ಆಗಿದೆ, ನೀವು ತೆರವು ಮಾಡಬೇಕು" ಎಂದು ಹೇಳಿದ್ದಾರೆ. ಆಗ ಮಾತಿನ ಚಕಮಕಿಯಾಗಿದೆ. ಮಾತಿನ ಚಕಮಕಿಯಾಗಿರಬಹುದು, ರಿವಾಲ್ವಾರ್ ತೆಗೆದಿರಬಹುದು. ಇಲ್ಲಿ , ಯಾರು ಹೊಡೆದರು ಎನ್ನುವ ಪ್ರಶ್ನೆ ಇಲ್ಲ. ಬೀದರ್ ಜಿಲ್ಲೆಯಲ್ಲಿ ಹಗಲು 12 ಗಂಟೆಗೆ, ಜನಸಾಮಾನ್ಯರ ಎದುರಿಗೇ ಕತ್ತಿ ಎತ್ತಿ ವಾರ್ ಮಾಡುತ್ತಾನೆ ಎಂದರೆ ಏನು? ಅವನು ಒಂದು ವಾರ್ ಮಾಡಿದಾಗಲೇ ಪೊಲೀಸರು ತಮ್ಮಲ್ಲಿದ್ದ ವೆಪನ್‌ಅನ್ನು ಉಪಯೋಗಿಸಬಹುದಿತ್ತು. ಪೊಲೀಸರು ವೆಪನ್ ಇಟ್ಟುಕೊಂಡೂ ಕೂಡ ಅದನ್ನು ತೆಗೆದಿಲ್ಲವೆಂದರೆ that is also a crime. ಪೊಲೀಸಿನವರಿಗೆ ವೆಪನ್‌ಗಳನ್ನು ಏಕೆ ಕೊಟ್ಟಿರುತ್ತೀರಿ? ಇಂಥ ಗಲಭೆಗಳನ್ನು ನಿಯಂತ್ರಣ ಮಾಡಲು ಕೊಟ್ಟಿರುತ್ತೀರಿ. Spectators ಆಗಿ ಎಲ್ಲರೂ ಬಂದು ಅಲ್ಲಿಯೇ ನಿಂತಿದ್ದಾರೆ. ರಿವಾಲ್ವಾರ್ ತೆಗೆದುಕೊಂಡು ಹೋಗಿರಬೇಕು. ರಿವಾಲ್ವಾರ್ ಇವನದ್ದು ಅಥವಾ ಅವನದ್ದು ಎನ್ನುವ ಬಗ್ಗೆ that is a debatable argument ಆಗಬೇಕಾಗಿಲ್ಲ. ಅಲ್ಲಿ ಏನು ಮಾಡಿದ್ದಾರೆ ಎಂದರೆ, ಕತ್ತಿಯಿಂದ ಅವನ ಹೊಟ್ಟೆಗೆ ಚುಚ್ಚಿಬಿಟ್ಟಿದ್ದಾರೆ, ಕರುಳು ಹೊರಗೆ ಬಂದಿದೆ. ಗುರುಪಾದಪ್ಪ ಬಹಳ ದಿಗ್ಭ್ರಮೆಗೊಂಡಿದ್ದರು. ಅಲ್ಲಿದ್ದ ಎಲ್ಲ ಜನರೂ ಕೂಡ ದಿಗ್ಭ್ರಮೆಗೊಂಡಿದ್ದರು. it is the public opinion I am telling you ಇದರಲ್ಲಿ politics ಮಾಡತಕ್ಕಂಥ ವ್ಯಕ್ತಿ ನಾನಲ್ಲ. ನಾಳೆ ನಾವು ಅಲ್ಲಿಗೆ ಹೋಗುತ್ತಿದ್ದೇವೆ ಎಂದು ಅವರು ಮೊದಲು ಡಿ.ಸಿ. ಮತ್ತು ಎಸ್.ಪಿ.ಗೆ appraise ಮಾಡಿದ್ದಾರೆ. ಅವರು ಅಲ್ಲಿಗೆ ಹೋದಾಗ ಜನರಿದ್ದರು, ಪೊಲೀಸ್ ವ್ಯಾನ್ ಇದೆ, ಇಷ್ಟೆಲ್ಲ ಇದ್ದರೂ ಕೂಡ, ಕತ್ತಿಯಿಂದ ಅಮಾನುಷವಾಗಿ ಅವನ ಮೇಲೆ ಹಲ್ಲೆ ಮಾಡಿ, ಈ ರೀತಿಯ ಘಟನೆಯಾಗಿದೆ. I am forced to tell that it is the alleged conspiracy. ಏನೋ conspiracy ಇದೆ. ಅಲ್ಲಿ ನಮ್ಮ ಗುರುಪಾದಪ್ಪ

ನಾಗಮಾರಪಲ್ಲಿಯವರು ಕಾಂಗ್ರೆಸ್ ಪಕ್ಷದ ಒಬ್ಬರೇ ಒಬ್ಬರು ಶಾಸಕರು. ಅವರು ಸಾಮಾನ್ಯ ಜನರಿಗೆ ಹೊಂದಿಕೊಂಡು ಹೋಗತಕ್ಕಂಥವರು. ಅವರಿಗೆ Z category ಭದ್ರತೆಯನ್ನು ಕೊಟ್ಟಿದ್ದರು. Z categoryಯನ್ನು ಏಕೆ ತೆಗೆದಿರಿ? ಬೀದರ್ ನಕ್ಸಲೈಟ್ ಏರಿಯಾವಾಗಿದೆ ಎಂದು ನಾನೇ ಡಿ.ಜಿ.ಯವರೊಂದಿಗೆ, Intelligence I.G.ಯವರೊಂದಿಗೆ ಮಾತನಾಡಿದ್ದೇನೆ. ಅವರ ಮನೆಯ ಹುಡುಗರಿಗೆ ಕೊಟ್ಟಿದ್ದಂಥ Y category ಯನ್ನು ಏಕೆ ತೆಗೆದಿರಿ? Protection ಮಾಡತಕ್ಕಂಥ ರೀತಿಯಲ್ಲಿ Z categoryಯನ್ನು ಇಡಬೇಕಾಗಿತ್ತು. ಇಂಥ ಗಡಿ ಭಾಗಗಳಲ್ಲಿ, ಬಾರ್ಡರ್ ಏರಿಯಾಗಳಲ್ಲಿ Efficient ಆಗಿ ಕೆಲಸ ಮಾಡತಕ್ಕಂಥವರು ಬಹಳಷ್ಟು ಇದ್ದಾರೆ. you have to depute them. ಎಲ್ಲಿಗೆ ಯಾರನ್ನು ಹಾಕಬೇಕಾಗಿದೆ ಎಂದು ತಮಗೆ ಬೇಕಾದವರನ್ನು ಹಾಕುವಂತೆ, political ಆಗಿ you don't give the postings. ಇವತ್ತು ಬಂಡೆಪ್ಪ ಕಾಶೆಂಪೂರ್‌ರವರು ಅಲ್ಲಿಗೆ ಹೋಗಿದ್ದಾರೆ. ಪೊಲೀಸಿನವರ excess ಆಗಿದೆ ಎಂದು ಅವರೇ ಹೇಳಿದ್ದಾರೆ. ಇಂಥ ಒಂದು ಘಟನೆ ರಾಜ್ಯದಲ್ಲಿ ನಡೆದಿದೆ. ಈ ರೀತಿಯ ಘಟನೆಗಳು repetitions ಆಗಬಾರದು. ನಡೆದಿರುವಂಥ ಅಮಾನುಷ ಕೊಲೆ ಏನಾಗಿದೆ, ಆ ಬಗ್ಗೆ ಜನರ ಮನಸ್ಸಿನಲ್ಲಿ ಏನು ಭಾವನೆ ಇದೆ, ಅದರ ಬಗ್ಗೆ ಇವತ್ತು ನಾವು ಚರ್ಚೆ ಮಾಡಲೇಬೇಕು. ಇದುವರೆಗೂ ನೀವು ಅಲ್ಲಿಗೆ ವಿಸಿಟ್ ಮಾಡಲಿಲ್ಲ. ನಿನ್ನೆ ಮುಖ್ಯಮಂತ್ರಿಗಳು ಎಂ.ವೈ.ಪಾಟೀಲರ ಕುಟುಂಬದವರ ಮದುವೆಗೆ ಬಂದಿದ್ದರು, ನಾನೂ ಇದ್ದೆ. ಅವರು ಅಲ್ಲಿಂದ ಬೀದರ್‌ಗೆ fuel ಹಾಕುವುದಕ್ಕೆ ಹೋಗಿದ್ದಾರೆ. you are the Chief Minister of the State. He is a present Legislator, former Minister. ನಿಮ್ಮ ಜೊತೆಯಲ್ಲಿದ್ದು ಕೆಲಸ ಮಾಡಿರುವಂಥವರು ಅವರು. You have no courtesy to meet him. In a democratic set up you have to create confidence. ನಿನ್ನೆ ಅವರು ಬೀದರ್‌ನಲ್ಲೇ ಇದ್ದರು. ನಿನ್ನೆ ನಾನೂ ಅಲ್ಲಿಗೆ ಹೋಗಿದ್ದೆನು. ಅವತ್ತೇ ನಾನು ಹೋಗ ಬೇಕಾಗಿತ್ತು, because of weather, flight cancel ಆಯಿತು. ಆದ್ದರಿಂದ ಅಂದು ನಾವು ಹೋಗಲಿಲ್ಲ. ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಖರ್ಗೆಯವರು ಹೋಗಿದ್ದರು. ನಿನ್ನೆ ಮುಖ್ಯಮಂತ್ರಿಯವರು ಒಂದು ತಾಸು ಬೀದರ್‌ನಲ್ಲಿದ್ದರೂ ಕೂಡ ಅವರ ಮನೆಗೆ ಹೋಗುವುದು ಆಗಲೀ ಅಥವಾ ಫೋನಿನ ಮುಖಾಂತರ ಮಾತನಾಡುವಂಥಾದ್ದನ್ನಾಗಲೀ ಮಾಡಲಿಲ್ಲ.

ಅವರ ಮನೆಗೆ ಹೋಗಿ ಅವರನ್ನು ಭೇಟಿಯಾಗಿದ್ದರೆ ಏನಾಗುತ್ತಿತ್ತು? ಅವರು ಯಾವ ಪಕ್ಷದವರೇ ಆಗಿರಲಿ. ನೀವು ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ರಾಜ್ಯದ ಮುಖ್ಯಮಂತ್ರಿಯಾಗಿ, ಜನಾಭಿಪ್ರಾಯ ಮೂಡಿಸತಕ್ಕಂತಹ ರೀತಿಯಲ್ಲಿ ಅವರಿಗೆ console ಮಾಡಿದ್ದರೆ, ಅವರ ಮನಸ್ಸಿಗೆ ಎಷ್ಟೋ ಸಮಾಧಾನವಾಗುತ್ತಿತ್ತು. ಅದಕ್ಕೆ ನಾವು ಏನು ಹೇಳುತ್ತಿದ್ದೇವೆ ಎಂದರೆ, ಇದು ಒಂದೇ ಕಡೆ ಅಲ್ಲ, ಬಹಳಷ್ಟು ಕಡೆಗಳಲ್ಲಿ ಈ ರೀತಿಯ ಗೋಲಿಬಾರ್‌ಗಳು, ಗಲಾಟೆಗಳು ಕೋಸ್ಟಲ್ ಏರಿಯಾಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿ ನಡೆಯುತ್ತಿವೆ. ಅದನ್ನು ನಿಯಂತ್ರಣ ಮಾಡಲಿಕ್ಕೆ ಆಗುತ್ತಿಲ್ಲ. ನಾನು ನೇರವಾಗಿ ಪ್ರಕಾಶ್‌ರವರ ಮೇಲೆ ಚಾರ್ಜ್ ಮಾಡಲು ಸಿದ್ಧನಿಲ್ಲ. ನಿಮ್ಮ ಕೈ ಕಟ್ಟಿಹಾಕಿದ್ದಾರೆ. ನಿಮಗೆ independent ಆಗಿ decision ತೆಗೆದುಕೊಳ್ಳಲು ಆಗುತ್ತಿಲ್ಲ. 17 ವರ್ಷಗಳ ಹಿಂದೆ ನಾನು ಹೋಂ ಮಿನಿಸ್ಟರ್ ಆಗಿದ್ದೆ. ಆಗ ಬಂಗಾರಪ್ಪನವರು postings ಇತ್ಯಾದಿ ವಿಷಯಗಳಲ್ಲಿ ನನಗೆ full powers ಕೊಟ್ಟಿದ್ದರು. ಆದರೆ ಇವತ್ತು ನಿಮಗೆ ಆ ರೀತಿಯಿಲ್ಲ. ಎಸ್.ಪಿ.ಯನ್ನು ಅಮಾನತ್ತುಗೊಳಿಸಬೇಕೆಂದು ನಾವು ಡಿಮ್ಯಾಂಡ್ ಮಾಡಿದ್ದೇವೆ. ಮತ್ತು Inspectorಗಳನ್ನೂ ತೆಗೆಯಬೇಕು. ತಕ್ಷಣ ಡಿ.ಸಿ.ಯನ್ನೂ ಅಲ್ಲಿಂದ ತೆಗೆಯುವಂಥಾದ್ದನ್ನು ಮಾಡಬೇಕು. ಅದನ್ನು ಹೇಗೆ ಮಾಡಲಿಕ್ಕಾಗುತ್ತದೆ? ಏಕೆಂದರೆ, ಅವನು ಆಕೆಯ ಗಂಡನಾಗಿದ್ದಾನೆ. ಇದರ ಬಗ್ಗೆ ಸಿ.ಓ.ಡಿ.ಯಿಂದ ತನಿಖೆಯಾಗಬೇಕು ಎನ್ನತಕ್ಕಂಥಾದ್ದಲ್ಲ. ಶಂಕರ ಬಿದರಿಯವರು ಅಲ್ಲಿಗೆ ಹೋಗಿ ಹೇಳುತ್ತಾರೆ, this is a sensitive place. ಹಾಗಾಗಿ ನಾವು ಏನು ಹೇಳುತ್ತಿದ್ದೇವೆ ಎಂದರೆ ಆ sensitive placeನಲ್ಲಿ ಸರ್ಕಾರದ ವೈಫಲ್ಯತೆಯಾಗಿದೆ, ಪೊಲೀಸ್ ಇಲಾಖೆ ಸರಿಯಾಗಿ ಕೆಲಸ ಮಾಡಿಲ್ಲ. ಇವತ್ತಿನ ದಿವಸ ಇದೊಂದು alleged conspiracy ಎನ್ನುವ ಭಾವನೆ ಕೂಡ ನನ್ನ ಮನಸ್ಸಿನಲ್ಲಿ ಬರುತ್ತಿದೆ. ಆದ್ದರಿಂದ ರಾಜ್ಯದ ಪೊಲೀಸ್ ಇಲಾಖೆಯವರು ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡುತ್ತಾರೆ ಎನ್ನುವ ವಿಶ್ವಾಸ ನಮಗಿಲ್ಲ. ಆದ್ದರಿಂದ, ನಮ್ಮ ಪಕ್ಷದ ನಿರ್ಧಾರವೆಂದರೆ, ಇದನ್ನು ಸಿ.ಬಿ.ಐ.ಗೆ ವಹಿಸಿಕೊಡಬೇಕು, ಸಿ.ಬಿ.ಐ. ತನಿಖೆಯಾಗಬೇಕು, ಸಿ.ಬಿ.ಐ.ನವರು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆ. ಜನಾಭಿಪ್ರಾಯ ಮೂಡಿಸತಕ್ಕಂಥ ನಿಟ್ಟಿನಲ್ಲಿ ದಿಟ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಪ್ರಕಾಶ್‌ರವರನ್ನು ಕೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಹೇಳಿದ ಹಾಗೆ ಇದೊಂದು ಗಂಭೀರವಾದ ಘಟನೆ. ಕೊಲೆಗಳು ಆಗುತ್ತವೆ. ಆದರೆ ಬೀದರ್‌ನಂಥ ಶಹರ್‌ನಲ್ಲಿ , ಕೆ.ಎಲ್.ಎ. ಸಂಸ್ಥೆಯ ಸಮೀಪದಲ್ಲಿ ಅಂದರೆ ದಿನವೂ ಸಾವಿರಾರು ಜನ ಹೋಗಿ ಬರುವ ಸ್ಥಳದಲ್ಲಿ ಹಗಲು ಒಂದು ಕೊಲೆಯಾಗುತ್ತದೆ, ಅದಕ್ಕೆ ಪೊಲೀಸರು ಸಹ ಸಾಕ್ಷಿ ಯಾಗುತ್ತಾರೆ. Investigationನಲ್ಲಿ ಪೊಲೀಸರು ಸಹ ಇದಕ್ಕೆ ಸಾಕ್ಷಿ. Police armed ಇದ್ದಾರೆ, ವೆಪನ್ಸ್ ಇವೆ. ಆದರೆ ಅದನ್ನು ಉಪಯೋಗ ಮಾಡುವುದಿಲ್ಲ. ಇಂಥ ಘಟನೆಯನ್ನು ನಾವು ಎಲ್ಲೂ ಕೇಳಿಲ್ಲ. ಹಿಂದೆಯೂ ಕೊಲೆಗಳು ಆಗಿವೆ. ಆದರೆ ಪೊಲೀಸ್ ಅಧಿಕಾರಿಯ ಮುಂದೆ ಇಂಥ ಘಟನೆಗಳು ನಡೆದಾಗ, ಅದನ್ನು ಪೊಲೀಸರು ಒಂದು ಕ್ಷಣದಲ್ಲಿ ಕಂಟ್ರೋಲ್ ಮಾಡಲು ಸಾಧ್ಯವಿದೆ. ಈಗ ಮಾನ್ಯ ಗೃಹ ಸಚಿವರು ಹೇಳಿಕೆ ಕೊಟ್ಟಿದ್ದೀರಿ. ನಾವೂ ಸಹ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೇವೆ. ಡಿ.ಜಿ.ಪಿ.ಯವರು, ಐ.ಜಿ.ಯವರು ಏನು ಹೇಳುತ್ತಾರೆಯೋ ಅದನ್ನು ತಾವು ಇಲ್ಲಿ ಓದಬೇಕಾಗುತ್ತದೆ. ಆದರೆ, ತಮ್ಮ ಹೇಳಿಕೆ ಮತ್ತು ಆ ಜಿಲ್ಲೆಯ ಉಸ್ತುವಾರಿ ಸಚಿವರಾದ ಕೃಷಿ ಸಚಿವರ ಹೇಳಿಕೆಯಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಪೊಲೀಸ್ ಲ್ಯಾಪ್ಸ್ ಇದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಅದಕ್ಕಾಗಿಯೇ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ: Suspension is not the answer. Transfer is not the answer. ತಾವು ಎಸ್.ಪಿ.ಯವರಿಗೂ transfer ಮಾಡಿದ್ದೀರಿ. ಉತ್ತರ ಕನ್ನಡ ಜಿಲ್ಲೆಯ SP ಯವರನ್ನು ಅಲ್ಲಿಗೆ post ಮಾಡಿರುವುದನ್ನು ನಾನು ನಿನ್ನೆ ನೋಡಿದ್ದೇನೆ. That is not the answer. ಅದು ಉತ್ತರ ಅಲ್ಲ. ಮುಖ್ಯವಾಗಿ ಅಲ್ಲಿ armed police ಇದ್ದರೆಂದು ತಿಳಿದುಕೊಳ್ಳಬೇಕಾಗಿದೆ. ನಮ್ಮ ನಾಯಕರು ಹೇಳಿದ ಹಾಗೆ ಈ ಪ್ರಕಾರ ಘಟನೆ ನಡೆದಾಗ police inaction ಏಕೆ? Whether there was a conspiracy, ಪೊಲೀಸರು ಅದರಲ್ಲಿ ಸಾಮೀಲಾಗಿದ್ದರೇನೋ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇನ್ನೂ 10 ದಿವಸ ತಾವು ತಡೆಯಿರಿ, ನಾವು ತಹಶೀಲ್ದಾರರ ಕಡೆಯಿಂದ report ತರಿಸಿ ಸರಿಪಡಿಸುತ್ತೇವೆಂದು ಜಿಲ್ಲಾಧಿಕಾರಿಗಳು ತಮ್ಮನ್ನು ಭೇಟಿ ಆದಾಗ ಹೇಳಿದರೆಂದು

ತಾವು ಹೇಳಿದಿರಿ. ಆ ಮಾತು ಒಪ್ಪಿಕೊಳ್ಳೋಣ. ಆ ಪ್ರಕಾರ ಇದ್ದರೆ ನೀವು ಹೋದಾಗ ಪೊಲೀಸ್ ಏಕೆ ಅಲ್ಲಿರಬೇಕು? SP ಗೆ DC ಗೆ ಭೇಟಿ ಆಗಿ "ನಾವು ಅಲ್ಲಿಗೆ ಹೋಗುತ್ತಿದ್ದೇವೆ, ನಮಗೆ ಸಂರಕ್ಷಣೆ ಕೊಡಿ" ಎಂದು ಇವರು ಕೇಳಿದ್ದಾರೆ. ಹಾಗಾಗಿ police van ಅಲ್ಲಿಗೆ ಹೋಗಿದೆ. ಒಂದು ವೇಳೆ ಆ ಪ್ರಕಾರ ಪರಿಸ್ಥಿತಿ ಇದ್ದಿದ್ದರೆ, they should have misled Vijaya Kumar and others. Tractor ತಂದು ಕಲ್ಲು ತುಂಬಿಕೊಂಡು ಹೋದರೆಂದು ತಮ್ಮ statement ನಲ್ಲಿ ಮತ್ತೊಂದು ಮಾತು ಬಂತು. ಹಾಗಾದರೆ ಪೊಲೀಸ್‌ನವರು ಏನು ಮಾಡಿದರು? ಅಲ್ಲಿ ಪೊಲೀಸರು ಇದ್ದಾರೆ, ಅಲ್ಲಿ tractors ಇವೆ, ಅದರಲ್ಲಿ ಕಲ್ಲು ಇದ್ದರೆ ಅದನ್ನು ಪೊಲೀಸರು ಏಕೆ seize ಮಾಡಲಿಲ್ಲ? ಅಥವಾ ಅವರಿಗೆ ಅಲ್ಲಿಗೆ ಹೋಗಬಾರದೆಂದು restrain ಏಕೆ ಮಾಡಲಿಲ್ಲ? ಇದರ ಬಗ್ಗೆ ಸರ್ಕಾರದಿಂದ ಉತ್ತರ ಬರಬೇಕಲ್ಲವೇ? ಕಲ್ಲು ತೂರಾಟ ಮಾಡುವ ಭಾವನೆಯಿಂದ ವಿಜಯಕುಮಾರ್ ಮತ್ತು ಅವರ ಸ್ನೇಹಿತರು ಅಲ್ಲಿಗೆ ಹೋಗಿದ್ದರೆ ಅವರ ಜೊತೆ ಪೊಲೀಸರು ಇದ್ದಾರೆ. ಆ ಪೊಲೀಸರು ಏಕೆ act ಮಾಡಲಿಲ್ಲ? ತಕ್ಷಣ ಅವರು ವಿಜಯಕುಮಾರ್‌ರನ್ನು arrest ಮಾಡಬೇಕಾಗಿತ್ತು. ಆವತ್ತು ಅಲ್ಲಿ ಇದ್ದ ಜನಗಳನ್ನು arrest ಮಾಡ ಬೇಕಾಗಿತ್ತು. ಇಲ್ಲಿ story build up ಆಗಿದೆ, cover ಮಾಡಿಕೊಳ್ಳಲಿಕ್ಕೆ. Tractor ತೆಗೆದುಕೊಂಡು ಹೋದರು, ಕಲ್ಲು ತೆಗೆದುಕೊಂಡು ಹೋದರು ಎನ್ನುವುದು ಒಂದು story. Police ಇಲಾಖೆ ತಮ್ಮ skin ಉಳಿಸಿಕೊಳ್ಳಲಿಕ್ಕೆ ಇವತ್ತು story build up ಮಾಡಿದ್ದಾರೆ. ಗುರುಪಾದಪ್ಪನವರ ಮಗ ಎಂದು ನಾನು ಮಾತನಾಡುತ್ತಿಲ್ಲ. Accidentally he is Gurupadappa's son. ಸಾಮಾನ್ಯ ಜನರಿಗೂ protection ಕೊಡಬೇಕು. ಗುರುಪಾದಪ್ಪನವರ ಮಗ ಇರಬಹುದು, ಅಥವಾ ಒಬ್ಬ ಸಾಮಾನ್ಯ ಮನುಷ್ಯನ ಮಗ ಇರಬಹುದು. ಶ್ರೀ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಪ್ರತಿಯೊಬ್ಬ ವ್ಯಕ್ತಿಗೆ ಅವನ ಗೌರವಕ್ಕೆ ತಕ್ಕ ಹಾಗೆ ಅವನಿಗೆ protection ಕೊಡುವ ಜವಾಬ್ದಾರಿ ಸರ್ಕಾರಕ್ಕಿದೆ. ಅವನು Minister ಮಗ ಇರಬಹುದು, ಅವನು ಬಡವ ಕೂಲಿಯವನ ಮಗ ಇರಬಹುದು. ಆದರೆ ಸರ್ಕಾರ ಇವತ್ತು ಸಂಪೂರ್ಣವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ವಿಫಲವಾಗಿದೆ. Just for your information, ತಾವು ಓದಿರಬಹುದು. "**Bidar incident exposes chinks in police armour.**" "The day light murder of senior Congress

leader, former minister and Aurad MLA Gurupadappa Nagmarapalli's son Vijaykumar Nagmarpalli on the main road of Bidar in the very presence of armed police on Friday last speaks volumes of the demoralized and defunct police machinery in the Hyderabad–Karnataka region. The fact that the police officers present at the scene were armed with service revolvers and there was an armed police van at a stones throw distance, did not help in any way in averting the murder of Vijayakumar." ಒಬ್ಬ ಪೊಲೀಸ್‌ನ ಮುಂದೆ van ಇದೆ, ಅಧಿಕಾರವಿದೆ, ಅವರ arms ಇದೆ, guns ಇವೆ, pistols ಇವೆ and they do that. ತಾವೇ ಹೇಳಬೇಕು. Just suspicion. Can you stop here? ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ definitely there is a conspiracy. Police officers or some of them are also involved. ಹಾಗೆಯೇ ಒಂದು ಕಡೆ ವಿಜಯಕುಮಾರ್ ಒಳ್ಳೆಯ, ಬಹಳ ಸಜ್ಜನಿಕೆ ಹುಡುಗ, educated, ಸಮಾಜದಲ್ಲಿ ಬಹಳ ಗೌರವದಿಂದ ಜೀವನ ಮಾಡುತ್ತಿದ್ದ. ತಮಗೆ ಆ information ಇದೆ, ತೆಗೆದುಕೊಳ್ಳಿ. Funeral ನಲ್ಲಿ 10,000 ಜನ ಇದ್ದರು. Very respected boy, calm and quiet. ಇವತ್ತು ಪ್ರಶ್ನೆ ಏನಿದೆ ಎಂದರೆ, ಈ ಪ್ರಕಾರ ಘಟನೆ ಆಗಬಾರದು. ಮತ್ತೊಂದು ವಿಚಾರ, ಇವತ್ತು ನಮ್ಮ ಸರ್ಕಾರದಲ್ಲಿ ಯಾರ್ಯಾರಿಗೆ gunmen ಕೊಟ್ಟಿದ್ದಾರೆ ಲೆಕ್ಕ ಇಲ್ಲ. ಯಾರ್ಯಾರಿಗೆ gunmen ಎಷ್ಟು ಇದ್ದಾರೆ ಎಂದು Register ತೆಗೆದು ನೋಡಿ. ಏಕೆ ಕೊಟ್ಟಿಲ್ಲ ಎಂದು ಕೇಳುವುದಿಲ್ಲ. ಆದರೆ, ಗುರುಪಾದಪ್ಪನವರಿಗೆ 'Z' category security ಇತ್ತು. ನಾನೇ ಸ್ವತ: ಹಿಂದಿನ D.G.P. ಯವರ ಜೊತೆ ಮಾತನಾಡಿದ್ದೇನೆ. ನಿಮ್ಮ intelligence ಜೊತೆ ಮಾತನಾಡಿದ್ದೇನೆ. ಗುರುಪಾದಪ್ಪನವರು ಪತ್ರ ಬರೆದಿರುವುದನ್ನು ನೋಡಿದ್ದೇನೆ. ಅದಕ್ಕೆ ಯಾರೂ ಉತ್ತರ ಕೊಡುತ್ತಿಲ್ಲ. ಧರ್ಮಸಿಂಗ್‌ರವರು ಮಾತನಾಡಿದ್ದಾರೆ, ನಾನು ಮಾತನಾಡಿದ್ದೇನೆ. Why that 'Z' category security was withdrawn? ಅವರಿಗೆ threat ಇತ್ತು. ನೀವು records ತೆಗೆದು ನೋಡಿ. ವಿಜಯಕುಮಾರ್‌ಗೆ 'Y' category *protection* ಇತ್ತು. Why this protection was removed? S.P ಏನು ಮಾಡುತ್ತಿದ್ದರು?

ಏನು ಕಾರಣ? ಒಂದು ಸಮಯದಲ್ಲಿ O.K, 'Y' category protection ಇತ್ತು. Withdraw ಮಾಡಿದರು. ಏಕೆ withdraw ಮಾಡಿದರೆಂದು ಇವರಲ್ಲಿ ದಾಖಲೆ ಇರಬೇಕಲ್ಲವೇ? D.G and S.P will have to explain, why 'Y' category security was given and withdrawn? ಅಂತ Explain ಮಾಡಬೇಕಾಗುತ್ತದೆ. ಕೊಟ್ಟಿದ್ದು ಏಕೆ? ಅದನ್ನು ವಾಪಸ್ಸು ತೆಗೆದುಕೊಂಡರು ಏಕೆ? ಅಲ್ಲಿ ಇನ್ನೂ ಸಹ ನೀವು ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ 'Z' category security ಅನ್ನು ಏಕೆ ಕೊಡುತ್ತಿಲ್ಲ? ಅದನ್ನು explain ಮಾಡಿ. ಯಾವುದೇ ಕಾಯಿದೆಗನುಗುಣವಾಗಿ ಇದ್ದರೆ ಕೊಡಿ. ಆದರೆ ಈ ರೀತಿ ಅವರು ಕಾಂಗ್ರೆಸ್‌ನವರಿದ್ದಾರೆ, ಏನಾದರೂ ಆದರೆ ನಡೆಯುತ್ತದೆನ್ನುವ ಭಾವನೆಯಲ್ಲಿ ಸರ್ಕಾರವಿದ್ದರೆ ಬಹಳ ತಪ್ಪಾಗಬಹುದು. ಪ್ರಶ್ನೋತ್ತರ ಆದ ಮೇಲೆ ಇದನ್ನು ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ನನಗೆ ಗೊತ್ತು. ತಾವು ಸಹಕರಿಸಿದ ಬಗ್ಗೆ ಧನ್ಯವಾದಗಳು. ಆದರೆ ಇಂಥ ಗಂಭೀರವಾದ ಪ್ರಶ್ನೆಯನ್ನು ನಾವು ಏಕೆ ಪ್ರಸ್ತಾಪ ಮಾಡಿದ್ದೇವೆಂದರೆ, ಈ ತರಹದ ಘಟನೆಗಳು ರಾಜ್ಯದ ಹಲವಾರು ಕಡೆ ಆಗುತ್ತಿವೆ. ವಿಶ್ವಾಸದಿಂದ ಮನೆಯಿಂದ ಹೊರಗೆ ಹೋಗಿ ರಾತ್ರಿ safe ಆಗಿ ವಾಪಸ್ಸು ಬರುವ ಧೈರ್ಯ ಯಾರಿಗೂ ಇಲ್ಲ. ಇವರು ಯಾರಿಗೆ security ಕೊಡಬೇಕೋ ಅವರಿಗೆ security ಕೊಡುತ್ತಿಲ್ಲ. ಮನಸ್ಸು ಬಂದವರಿಗೆ ಇವರು ಕೊಡುತ್ತಿದ್ದಾರೆ. ಯಾರ್ಯಾರಿಗೆ security ಕೊಟ್ಟಿದ್ದಾರೆನ್ನುವ list ಅನ್ನು ಸದನದ ಮುಂದಿಡಲಿ. ಅಧಿಕಾರವಿದ್ದಾಗ file create ಮಾಡಿ security ತೆಗೆದುಕೊಳ್ಳಬಹುದು. ಆ ಕೆಲಸವನ್ನು ನಮ್ಮಂಥವರು, ನಿಮ್ಮಂಥವರು ಮಾಡಲಿಕ್ಕೆ ಹೋಗುವುದಿಲ್ಲ. ಆದರೆ, ಪರಿಸ್ಥಿತಿಯ ಗಾಂಭೀರ್ಯ ನೋಡಿಕೊಂಡು ಅವರು ಯಾವ ವ್ಯಕ್ತಿಯೇ ಇರಲಿ, ಯಾವ ಪಕ್ಷದವರೇ ಇರಲಿ ಅವರಿಗೆ ಸಂರಕ್ಷಣೆ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. Both moral and legal responsibility. ಇದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಗೌರವಾನ್ವಿತ ಗೃಹ ಸಚಿವರು ಅಧಿಕಾರಿಗಳನ್ನು suspend ಮಾಡಿದ್ದೇನೆ, COD enquiryಗೆ order ಮಾಡಿದ್ದೇನೆಂದು ಹೇಳಿದರು. ಇದರಿಂದೇನೂ ಆಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, COD enquiry ಎಂದರೆ, Police skin save ಮಾಡಲಿಕ್ಕೆ ನಮ್ಮ ಕರ್ನಾಟಕ ಪೊಲೀಸ್ ಮಾಡಬೇಕು. ಆದರೆ, ನಮ್ಮ ನಾಯಕರು ಹೇಳಿದ ಹಾಗೆ hand it over to CBI. CBI

enquiry ಮಾಡುವುದಕ್ಕೆ ಇದನ್ನು hand over ಮಾಡಿ. ಏಕೆಂದರೆ, conspiracy ಇದೆ ಎಂದು charge ಮಾಡಿದಾಗ police ಮೇಲೆ ನೇರವಾಗಿ ಆಪಾದನೆಯಾದಾಗ, ಜಿಲ್ಲಾಧಿಕಾರಿಗಳ ಮೇಲೇ ಆಪಾದನೆಯಾದಾಗ, police also will not be able to fairly do investigation. So, investigation ಅನ್ನು ನೀವು CBI ಗೆ ಕೊಟ್ಟಾಗ ನಿಜವಾದ ಪರಿಸ್ಥಿತಿ ಏನೆಂದು ಗೊತ್ತಾಗುತ್ತದೆ. ವಿಜಯಕುಮಾರ್ ಏಕೆ ಅಲ್ಲಿಗೆ ಹೋದ, DC., SP ಯವರನ್ನು ಭೇಟಿಯಾಗಿದ್ದರೆ? ಆ ಪ್ರಕಾರ, 10 ದಿನ ತಡೆಯಿರಿ ಎಂದು DC ಹೇಳಿದ್ದರೆ? Tractor ತಂದು ಕಲ್ಲು ತುಂಬಿಕೊಂಡು ಹೋದರೇನು? ಏಕೆ ಅದನ್ನು ನಿಲ್ಲಿಸಿಲ್ಲ? Everything will come out. ಆ ಸತ್ಯ ಹೊರಬರಬೇಕಾದರೆ, ಅದು ಕೇವಲ COD ಮೇಲೆ ವಿಶ್ವಾಸ ಇಲ್ಲವೆಂದು. ಆದರೆ, ಇವತ್ತು local police are involved. ಹಾಗಾಗಿ, it will be difficult for police to take action against their own colleagues. ಹಾಗಾಗಿ, CBI ಸಂಸ್ಥೆ ಒಂದು ಪಾರದರ್ಶಕವಾಗಿ, impartial ಆಗಿ enquiry ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮತ್ತೊಂದು ವಿಚಾರವೆಂದರೆ, ಢಾಬಾ ಮಾಲೀಕರಾದ ವೆಂಕಟರಾವ್‌ರವರ ಕಡೆ ತಲವಾರ್ ಇತ್ತು. Dispute ಇದೆ ಎಂದು ಗೊತ್ತಿತ್ತು. 1992–94 ರಿಂದ dispute ಇದೆ ಎಂದು ತಾವೇ, ತಾವೇ, ತಮ್ಮ statement ನಲ್ಲಿ ಹೇಳಿದ್ದೀರಿ. ಅವನು ತಲವಾರ್ ಹೇಗೆ ಇಟ್ಟುಕೊಂಡಿದ್ದ? How did he possess illegal weapon? ಇದು ಏಕೆ police ರ ಗಮನಕ್ಕೆ ಬಂದಿಲ್ಲ? ಢಾಬಾ ಊರಿನಿಂದ 20 ಕಿ.ಮೀ. ಹೊರಗೇನಿಲ್ಲ. ಊರಿನಲ್ಲೇ ಢಾಬಾವಿದೆ. ತಾವು, 15, 20 ವರ್ಷಗಳಿಂದ dispute ಇದೆ ಎಂದು ಹೇಳುತ್ತಿದ್ದೀರಿ. ಚಾಕುವಿನಿಂದ ಮತ್ತು ತಲವಾರ್‌ನಿಂದ ಅವರು ಗಾಯ ಮಾಡಿದ್ದು, ಅದರಿಂದ ಅವರ ಮರಣವಾಗಿದೆ ಎಂದು ತಾವೇ ಹೇಳುತ್ತೀರಿ. ಆ dispute ಇದ್ದರೆ, ಆ ತಲವಾರ್, ಚಾಕುವನ್ನು ಅಲ್ಲಿ ಇಡುವುದಕ್ಕೆ police ನವರೇಕೆ ಅವಕಾಶ ಮಾಡಿಕೊಟ್ಟರು? ಅವನ್ನು ಏಕೆ seize ಮಾಡಲಿಲ್ಲ? ಹಿಂದೆಯೇ ಮಾಡಬೇಕಾಗಿತ್ತು. ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ, ನಮ್ಮ ನಾಯಕರು ಹೇಳಿದ ಹಾಗೆ, ಇದಕ್ಕೆ Home Minister ಶಾಮೀಲಾಗಿದ್ದಾರೇನೋ ಎಂದು ನಾನು ಹೇಳುವುದಿಲ್ಲ. I am the last man to do that. ಆದರೆ, ತಾವೇ ಹೇಳಿ, armed police ರವರ ಕಣ್ಮುಂದೆ ಇಂಥ ಪ್ರಕರಣವಾದರೆ ಹೇಗೆ?

Police interference ಬಹಳ ಆಗಿದೆ. Police ಇಲಾಖೆಯಲ್ಲಿ demoralize ಆಗಲಿಕ್ಕೆ interference ಬಹಳ ಆಗಿದೆ. ಆ interference ಇದಕ್ಕೆ ಒಂದು ಕಾರಣವೆಂದು ನಾನು ಭಾವಿಸುತ್ತೇನೆ. ಹಾಗಾಗಿ, ನಮ್ಮ ನಾಯಕರು ಹೇಳಿದ ಹಾಗೆ, S.P. has to be suspended, CBI enquiry has to be ordered ಮತ್ತು ನ್ಯಾಯಬದ್ಧವಾಗಿ, ಪಾರದರ್ಶಕವಾಗಿ ಇದರ ಬಗ್ಗೆ enquiry ಯಾಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ನಾನೊಂದು ವಿಷಯವನ್ನು ಗೃಹ ಸಚಿವರಿಗೆ ಹೇಳುವುದು ಮರೆತೆ.

ಅಧ್ಯಕ್ಷರು: ಸಾಕಷ್ಟು ಮಾತನಾಡಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ : ನಿನ್ನೆ ಗುರುಪಾದಪ್ಪ ನಾಗಮಾರಪಲ್ಲಿ ಯವರಿಗೆ, ಆಗಿದ್ದು ಮರೆತುಬಿಡಪ್ಪ ಎಂದು ಹೇಳಿದೆ. ಮತ್ತೊಂದು ಏನು ಘಟನೆ ಆಗಿದೆ ಎಂದರೆ, ವಿಜಯಕುಮಾರ್‌ರವರ wife ತಮ್ಮ ತಾಯಿಗೆ ಆರೋಗ್ಯ ಸರಿ ಇಲ್ಲವೆಂದು ಅವರು ಅಲ್ಲಿಗೆ 5 ದಿವಸ ಹೋಗಿದ್ದರು. ವಿಜಯಕುಮಾರ್‌ರವರ wife ಮನೆಯಲ್ಲಿದ್ದಿದ್ದರೆ ಅವರು ಬಿಡುತ್ತಿರಲಿಲ್ಲವೆಂದು ಅಲ್ಲಿನ ಜನರು ಹೇಳುತ್ತಿದ್ದರು. ಯಾವಾಗ ಈ death ಆಯಿತು, ಆಮೇಲೆ ವಿಜಯಕುಮಾರ್‌ರವರ ಅತ್ತೆಯೂ ತೀರಿಕೊಂಡಿದ್ದಾರೆ. ಅತ್ತೆ ತೀರಿಕೊಂಡಿದ್ದನ್ನು ಅವರಿಗೆ ಹೇಳಲಿಕ್ಕಾಗುತ್ತಿಲ್ಲ. ನಾನು ಕಷ್ಟದಲ್ಲಿದ್ದೇನೆ, ಅವರ ತಾಯಿ ತೀರಿಕೊಂಡಿದ್ದಾರೆ, ಅದನ್ನು ಕೇಳಿದರೆ ಮತ್ತೆ ಆಕೆ ಉಳಿಯುತ್ತಾಳೋ, ಇಲ್ಲವೋ? ಗೊತ್ತಿಲ್ಲ. ಇಷ್ಟು pathetic condition is there. ಅದಕ್ಕೆ ಮಾನವೀಯ ದೃಷ್ಟಿಯಿಂದ ಸರ್ಕಾರದವರು ಅಲ್ಲಿಗೆ ಹೋಗಬೇಕಾಗುತ್ತದೆ, ನೋಡಬೇಕಾಗುತ್ತದೆ, ಅವರ ಜೊತೆಯಲ್ಲಿ ಮಾತನಾಡಬೇಕಾಗುತ್ತದೆ. ಇದೆಲ್ಲ ತಾವು ಮರೆತಿದ್ದೀರಿ. It is very touching. ನೀವು ಅಲ್ಲಿ ಹೋಗಿ ನೋಡಿದರೆ, ಮಾತನಾಡಿದರೆ ಗೊತ್ತಾಗುತ್ತದೆ. ಗಂಡ ವಿಜಯಕುಮಾರ್‌ರವರು ಸತ್ತರು, ತಾಯಿ ಸತ್ತಳು, after getting this news, shock ಆಗಿ ತಾಯಿಯೂ ಸತ್ತಳು. Further ಏನಾದರೂ ಆಗಬಹುದೆಂದು ಆಕೆ ಸತ್ತ news ಅನ್ನು ಆಕೆಗೆ ಹೇಳುತ್ತಿಲ್ಲ. ಇಂಥ ಒಂದು ಘಟನೆಯಾಗಿದೆ.

ಶ್ರೀ ಕೆ. ಆರ್. ರಮೇಶ್‌ಕುಮಾರ್: ಮಾನ್ಯ ಗೃಹ ಸಚಿವರ ಹೇಳಿಕೆ ಅದನ್ನು ಆಕಸ್ಮಿಕವಾಗಿ ಮೊದಲೇ ಹೇಳಬೇಕಾಗಿದ್ದರಿಂದ ನಮಗೆ copies

ಕೊಡುವುದಕ್ಕಾಗಲಿಲ್ಲವೆಂದು ಕಾಣುತ್ತದೆ. Statement copy ನಮಗೆ ಸಿಗಲಿಲ್ಲ. No problem. ತಾವು, ದಿ:27.1.2007ಕ್ಕೆ Sessions Courtನಲ್ಲಿ judgment ಬಂತು ಎಂದು ಹೇಳುತ್ತೀರಿ. Sessions Courtನಲ್ಲಿ ತೀರ್ಪು ಇವರ ಪರವಾಗಿ ಬಂದ ಮೇಲೆ judgment copies ಇನ್ನೂ ಹೊರಗೆ ಬಂದಿಲ್ಲ. Order Sheet ಬಂದಿಲ್ಲ. ಅಂದರೆ, ಯಾರು case ನಲ್ಲಿ ಕಳೆದುಕೊಂಡಿದ್ದಾರೆ ಅವರಿಗೆ appeal ಗೆ ಹೋಗುವುದಕ್ಕೂ ಅವಕಾಶ ಸಿಗಲಿಲ್ಲ. ಯಾರು caseನಲ್ಲಿ ಗೆದ್ದಿದ್ದಾರೆ ಅವರು ಈ ಸ್ವತ್ತು ನಮ್ಮದು ಎಂದು ಅಧಿಕೃತವಾಗಿ ಕಾನೂನಿನ ಪ್ರಕಾರ ಹೇಳುವಂಥ ಅವಕಾಶ ಅವರಿಗೂ ಸಿಗಲಿಲ್ಲ. ಅದರರ್ಥ, status–quo continued. ಯಥಾಸ್ಥಿತಿ. I think, I am right ಅಲ್ಲವೇ? ಯಥಾಸ್ಥಿತಿ ಇದ್ದಾಗ ಒಂದು ವೇಳೆ ಕಾನೂನಿನ ಜ್ಞಾನ ಅಥವಾ ಪರಿಚಯ ಇಲ್ಲದೇ, ಮೃತರಾದಂಥ ವಿಜಯಕುಮಾರ್‌ರವರು ಆತುರದಲ್ಲೋ ಅಥವಾ ಆವೇಶದಲ್ಲೋ ಜಿಲ್ಲಾಧಿಕಾರಿಗಳಿಗೆ, ಹೆಚ್ಚುವರಿ ಪೊಲೀಸ್ ಅಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟು, ನಾನು case ಅನ್ನು ಗೆದ್ದಿದ್ದೇನೆ, ನನಗೆ protection ಕೊಡಿ, ನಾನು ಅಲ್ಲಿಗೆ ಹೋಗುತ್ತಿದ್ದೇನೆಂದು ಹೇಳಿದರೆ, ಕನಿಷ್ಠ ಸೌಜನ್ಯಕ್ಕಾದರೂ elementary knowledge ಇದ್ದಂಥ ಹೆಚ್ಚುವರಿ ಪೊಲೀಸ್ ಅಧಿಕಾರಿ(Additional SP) ಮತ್ತೆ, Deputy Commissioner, whoever it is, who were sought, ಏನೆಂದು ಹೇಳಬೇಕಾಗಿತ್ತು, ಹೌದು, ತಕರಾರಲ್ಲಿ ನೀವು ಗೆದ್ದಿದ್ದೀರಿ, ಇನ್ನೂ Order Sheet ಬಂದಿಲ್ಲ, certified copies ಅನ್ನು ನಮಗೆ enclose ಮಾಡಿಕೊಡಿ, ಮುಂದಿನ ಕ್ರಮ ಜರುಗಿಸುತ್ತೇವೆ ಎಂದು ಹೇಳಬೇಕಾಗಿತ್ತು. ಒಂದು ವೇಳೆ, ಮುಂದಿನ ಕ್ರಮ ಇವರು ಜರುಗಿಸುವುದರೊಳಗಾಗಿ ಇವರು ಮತ್ತೆ ಮೇಲಿನ Court ಗೆ ಹೋಗಿ stay order ಅದು ಇದು ತಾರದೇ ಇದ್ದಿದ್ದರೆ ಇವರಿಗೆ protection ಕೊಡುವುದು ಉಳಿದಿದ್ದು ಮಾಡಬೇಕು. Stay ತಂದಿದ್ದರೆ ಅಲ್ಲಿಗೇ ಮುಕ್ತಾಯವಾಗುತ್ತಿತ್ತು. ನಮ್ಮಲ್ಲಿ Revenue Department, Police Department ಏಕಿದೆ? ಸರ್ಕಾರವೆಂದು ನಾವು ಯಾವುದನ್ನು ಕರೆಯುತ್ತೇವೆ. ನಮ್ಮ ಆಸ್ತಿ–ಪಾಸ್ತಿ, ಮಾನ–ಮರ್ಯಾದೆ, ಪ್ರಾಣ ಇವನ್ನೆಲ್ಲ ಕಾಪಾಡುವುದಕ್ಕೆಂದು ಹೇಳಿ ಎಲ್ಲರ ಮಾಂಸಖಂಡಗಳೂ ಬಲವಾಗಿರುವುದಿಲ್ಲ ಅಥವಾ ಎಲ್ಲರೂ ಹೆಗಲಿಗೊಂದು ಬಂದೂಕು ಏರಿಸಿ ಅಥವಾ ತಲವಾರ್ ಇಟ್ಟುಕೊಂಡು ಓಡಾಡುವುದಕ್ಕಾಗುವುದಿಲ್ಲ. ತಲವಾರ್, ಅಥವಾ ಬಂದೂಕು,

pistol ಇಟ್ಟುಕೊಳ್ಳುವುದಕ್ಕೆ ಇಂಥವರಿಗೆ ಅನುಮತಿ ಎಂದು ಹೇಳಿ ಅವರಿಗೆ training ಕೊಟ್ಟು, ಜವಾಬ್ದಾರಿ ಕೊಟ್ಟು ಅವನು ಯಾವಾಗ ಉಪಯೋಗಿಸಬೇಕು? ಹೇಗೆ ಉಪಯೋಗಿಸಬೇಕು? ಎಂಥ ಅನಿವಾರ್ಯತೆ ಬಂದರೆ ಅದನ್ನು ಉಪಯೋಗಿಸಬೇಕು? ಎಂದು ಹೇಳಿ ಅವನಿಗೆ ನಮ್ಮ treasury ಯಿಂದ ಸಂಬಳ ಕೊಟ್ಟು ಅವನನ್ನು ಇಟ್ಟಿದ್ದೇವೆ. ಇದನ್ನೆಲ್ಲ supervise ಮಾಡುವುದಕ್ಕೆ ಇರುವುದೇ ಆಡಳಿತ. ನಮ್ಮ ನಾಯಕರು ಹೇಳಿದರು. ಆರ್.ವಿ. ದೇಶಪಾಂಡೆಯವರು ಹೇಳಿದರು. ನಿಮ್ಮ ಬಗ್ಗೆ ಅಪಾರವಾದ ಗೌರವವಿದೆ. ನಿಮ್ಮ ಮೇಲೇನಿಲ್ಲ, ಸರ್ಕಾರದ್ದೇನಿಲ್ಲ. ಗೌರವ ಇರತಕ್ಕಂಥದ್ದು ಬೇರೆ ಪ್ರಶ್ನೆ. ಕರ್ತವ್ಯಗಳು ಬೇರೆ. ನನಗೂ ನಿಮ್ಮ ಬಗ್ಗೆ ಗೌರವವಿದೆ. I always respect you as an elderly person, as a learned person. But, your duties as a Home Minister, I have no alternative but to say you have failed. ಯಾವಾಗ ನಿಮ್ಮ ಜಿಲ್ಲಾಧಿಕಾರಿ ಮತ್ತೆ ನಿಮ್ಮ Additional S.P. ಕಾನೂನಿನ ಪರಿಚಯ ಅಥವಾ ಅಜ್ಞಾನದಲ್ಲಿರತಕ್ಕಂಥ ಈ ಮನುಷ್ಯ ಅರ್ಜಿ ತೆಗೆದುಕೊಂಡು ಹೋದ, ಆಗ ಆತನಿಗೆ ಬುದ್ಧಿ ಹೇಳಬೇಕಾಗಿತ್ತು. ಆಮೇಲೆ ತಮ್ಮ ಹೇಳಿಕೆಯಲ್ಲಿ ಮುಂದುವರಿದು, tractor ನಲ್ಲಿ ಜನರಿದ್ದರು, ಅದರಲ್ಲಿ ಕಲ್ಲು ತುಂಬಿದ್ದರು ಎಂದು ಹೇಳುತ್ತೀರಿ. Yes. Tractor ಗಳಲ್ಲಿ ಕಲ್ಲು ತುಂಬುತ್ತಾರೆ, ಮಣ್ಣು ತುಂಬುತ್ತಾರೆ. ಯಾರೋ ಒಬ್ಬ ಕೆಲಸ ಮಾಡತಕ್ಕಂಥವನು, contract ಮಾಡತಕ್ಕಂಥವನು ಕಲ್ಲು ಅಗತ್ಯವಿದ್ದರೆ ತುಂಬಿಕೊಂಡು ಹೋಗುತ್ತಿದ್ದರೆ yes ಯಾರೂ bother ಮಾಡುವುದಿಲ್ಲ. Obviously, ಅವರು brick batting ಗೆ ಕೆಲಸಕ್ಕೆ ಬರತಕ್ಕಂಥ ಕಲ್ಲು ತುಂಬಿಕೊಂಡಿರಬೇಕು. Tractor ಏನು jet ವಿಮಾನ ಹೋದ ಹಾಗೆ ಹೋಗುವುದಿಲ್ಲ. ಎರಡು tractor ಎಂದು ಹೇಳಿ ತಾವು ತಮ್ಮ statement ನಲ್ಲಿ ಹೇಳುತ್ತೀರಿ. ಇಡೀ ಬೀದರ್ ಜಿಲ್ಲಾ police ವ್ಯವಸ್ಥೆಯೊಳಗೆ ಎರಡು tractor ಅನ್ನು stall ಮಾಡುವುದಕ್ಕೆ capacity ಇರಲಿಲ್ಲವೇ? Could they not have stalled two tractors and taken those bloody fellows into custody. ಏಕೆ ಹೋಗುತ್ತಿದ್ದೀರೆಂದು interrogate ಮಾಡಿ preventive ಆಗಿ custody ಗೆ ತೆಗೆದುಕೊಳ್ಳಬೇಕಾಗಿತ್ತು. Why did they not do it? ಅವರಿಗೇನು they wanted to watch fun is it? ಇದೇನು police

ನವರಿಗೆ one day match ತರಹವೇ? ಅಥವಾ ಆ ಸಂದರ್ಭದಲ್ಲಿ ಏನು ಮಾಡಬೇಕಾಗಿತ್ತೆಂದು ಅವರಿಗೂ ಗೊತ್ತಿರಲಿಲ್ಲವೇ? ಸರಿ, tractor ಗಳು ಹೋಗುತ್ತವೆ, tractor ನಲ್ಲಿ ಕಲ್ಲೂ ಹೋಗುತ್ತದೆ, pistol ಅಥವಾ revolver load ಮಾಡಿಕೊಂಡು ವಿಜಯಕುಮಾರ್‌ರವರು ಹೋಗುತ್ತಾರೆ. ಅವರ ಜೊತೆಗೆ armed police ಹೋಗುತ್ತಾರೆ. ಇದೇನು ಜಂಬೂ ಸವಾರಿಯೇ? ಮತ್ತೆ, ಇವರೆಲ್ಲ ಅಲ್ಲಿ ಜಮಾ ಆಗುತ್ತಾರೆ. ವೆಂಕಟ್‌ರಾವೋ? ವಿಠಲ್‌ರಾವೋ? ಅವರಿಗೂ, ಇವರಿಗೂ ಅಲ್ಲಿ ಅಖಾಡ. ಕುಸ್ತಿ. ನೀವು ನಿಮ್ಮ ಹೇಳಿಕೆಯಲ್ಲಿ, ಅವನು ಖಾರದ ಪುಡಿ ಹಾಕಿದ, ಆಮೇಲೆ, he opened fire ಎಂದು ಹೇಳುತ್ತೀರಿ. First ತಾನು fire open ಮಾಡಿದಾಗ ವಿಜಯಕುಮಾರ್ air ನಲ್ಲಿ ಮಾಡಿದನೇ? Mob ಕಡೆಗೆ ಮಾಡಿದನೇ? Obviously, mob ಕಡೆಗಿದ್ದಿದ್ದರೆ ಯಾರಿಗಾದರೂ injury ಆಗಬೇಕಾಗಿತ್ತು. Bullet injuries ಯಾರಿಗಾದರೂ ಆಗಿದೆಯೇ? ಆ weapons seize ಮಾಡಿದ್ದಾರೆಯೇ? ಅದರ ಮೇಲೆ, thumb impression ಏನಾದರೂ ಹಿಡಿದುಕೊಂಡಿದ್ದರೆ? ಅಥವಾ ಅವನು ಗಾಳಿಯಲ್ಲಿ fire ಮಾಡಿದ್ದರೆ, obviously, for protection to scare the mob ಮಾಡಿದ್ದಾನೆ. ಅಲ್ಲಿಯವರೆಗೆ ಅಲ್ಲಿದ್ದಂಥ ನಿಮ್ಮ police, armed constables ಅವರೇನು ಮಾಡುತ್ತಿದ್ದರು? ನಿಮ್ಮ Inspector, Sub–Inspector ಅವರೇನು ಮಾಡುತ್ತಿದ್ದರು? Intelligent ಆಗಿ ಅವರಿಗೆ appeal ಗೆ time ಇತ್ತು, ಇವರಿಗೆ certified copies ಇರಲಿಲ್ಲ, ಇವರು ನುಗ್ಗಿ ಹೋದರು, ಅವನು ಖಾರದ ಪುಡಿ ಹಾಕಿದ, ಇವನು revolver open ಮಾಡಿದ, ಅದಕ್ಕೆ ಅವನು ತಲವಾರ್‌ನಿಂದ ಚುಚ್ಚಿದ, ಇವನು ಸತ್ತು ಹೋಗಿಬಿಟ್ಟ, ಪರಿಸ್ಥಿತಿ control ನಲ್ಲಿದೆ ಎನ್ನುತ್ತೀರಿ. ವಿಜಯಕುಮಾರ್ ಸತ್ತು ಹೋದ ಮೇಲೆ ಪರಿಸ್ಥಿತಿ control ಆಗದೇ ಮತ್ತೇನು ಗಲಾಟೆ ಇತ್ತು? ಇನ್ನು, ಗುರುಪಾದಪ್ಪ ಸಾಯುವ ಹಾಗಿದ್ದರೆ, ಇವರೊಂದು ಗುಂಪು ಕಟ್ಟಿಕೊಂಡು ಹೋಗಿ ಮತ್ತೇನಾದರೂ ತೊಂದರೆ ಉಲ್ಬಣವಾಗಬಹುದೇ ಹೊರತು otherwise control ನಲ್ಲೇ ಇರುತ್ತದೆ. ಹಾಗೆ control ಆಗಿರುವ ಪರಿಸ್ಥಿತಿಗೆ ನೀವು credit ತೆಗೆದುಕೊಳ್ಳುತ್ತೀರಾ? Do you want to claim credit for that? Obviously what should not have happened has happened. One precious soul is lost. Whether he is innocent or criminal I do not want to say . But, he is a

precious soul so far as his family is concerned. It is for the law to execute him or to allow him to live. ಮೂರನೇ ಮನುಷ್ಯ ಹೋಗಿ ತಲವಾರು, ಕತ್ತಿ ತೆಗೆಯುವುದಕ್ಕೆ ಬಿಟ್ಟು ಬಿಟ್ಟರೆ ಹೇಗೆ? ಇದೆಲ್ಲಾ ಆಡಳಿತವೇ? ಇದಕ್ಕೆ ನಾವು ಆಡಳಿತ ಬಹಳ ಚೆನ್ನಾಗಿದೆ ಎಂದು ಸುಮ್ಮನೆ ಹೇಳಬೇಕಾ? ಆಮೇಲೆ ಎಸ್‌ಪಿ ಮೇಲೆ, ಈ ಘಟನೆ ಆಗುವುದರ ಮೊದಲು ಎಸ್‌ಪಿ ನಡತೆಯ ಬಗ್ಗೆ ಅಲ್ಲಿನ ಸ್ಥಳೀಯ ಮುಖಂಡರುಗಳ ಕಡೆಯಿಂದ ಗುರುಪಾದಪ್ಪನವರಿಂದ ಎಸ್‌ಪಿ ಮೇಲೆ ಕಂಪ್ಲೇಂಟ್ಸ್ ಇತ್ತೇ? ಇಲ್ಲವೇ? ಕಂಪ್ಲೇಂಟ್ಸ್ ಏನಾದರೂ ಇದ್ದಿದ್ದರೆ ಅದು ನೈಜವಾದದ್ದೇ? ಅಲ್ಲವೆ? ಈ ಎಸ್‌ಪಿ ಹಿಸ್ಟರಿ ಏನು? ಇವರು ಹುಟ್ಟಿದ್ದು ಎಲ್ಲಿ? ಬೆಳೆದಿದ್ದು ಎಲ್ಲಿ? ಇವರು ಯಾವಾಗ ಸರ್ವೀಸ್‌ಗೆ ಸೇರಿದರು? ಇವರು ಯಾವಾಗ ಬಂದರು? ಯಾವಾಗ ಪ್ರೋಬೆಷನರಿ ಮುಗಿಸಿದರು? ಇವರ ಚರಿತ್ರೆ ಏನು? ಇವರು all India services ನವರೇ, ಇವರೇನು acquired IASನವರೇ? conferred IPSನವರೇ? ನಮಗೆ ಗೊತ್ತಾಗಬೇಕಲ್ಲವೆ? ಸಾಲದ್ದಕ್ಕೆ ಗಂಡ ಹೆಂಡತಿ ಒಂದೇ ಕಡೆಗೆ. COD ಯಲ್ಲಿ ಯಾರು ಇರುತ್ತಾರೆ? ರಕ್ಷಣೆ ಕೊಡುವುದು ವರ್ತಮಾನಗಳನ್ನು ತೆಗೆದುಕೊಳ್ಳುವುದು, ರಾಜ್ಯದಲ್ಲಿ ಉಲ್ಬಣ ಪರಿಸ್ಥಿತಿಯಿದ್ದರೆ ಅದರ ಬಗ್ಗೆ ಎಚ್ಚರಿಕೆ ಕೊಡುವುದು, ಈ ಎಲ್ಲಾ ಕರ್ತವ್ಯ ಗುಪ್ತಚರ ಇಲಾಖೆಗೆ ಬರುತ್ತದೆ. ಗುಪ್ತಚರ ಇಲಾಖೆಯವರು ವರ್ತಮಾನ ಕೊಟ್ಟ ಮೇಲೆ, Law and order DG ಯವರು ಬರುತ್ತಾರೆ, he will take the necessary action. ಕೆಲವು ಘಟನೆಗಳು ನಡೆದಿದ್ದನ್ನು ವಿಚಾರಣೆ ಮಾಡುವುದಕ್ಕೆ COD ಯನ್ನು ಇಟ್ಟುಕೊಂಡಿದ್ದೇವೆ. ಇವರೆಲ್ಲ ಬ್ಯಾಚ್‌ಮೆಟ್ಸ್ ಆಗಿರುತ್ತಾರೆ ಇಲ್ಲಾಂದ್ರೆ ಜ್ಯೂನಿಯರ್ಸ್ ಆಗಿರುತ್ತಾರೆ, ಇಲ್ಲಾಂದ್ರೆ ಒಂದು ಕೇಡರ್‌ನವರಾಗಿರುತ್ತಾರೆ, ಕೊಲಿಗ್ಸ್ ಆಗಿ ವರ್ಕ್ ಮಾಡಿರುತ್ತಾರೆ. ಯಾವ ಆಡಳಿತ ವ್ಯವಸ್ಥೆಯ ಜವಾಬ್ದಾರಿಯನ್ನು ನೀವು ಸರ್ಕಾರದವರು ಹೊತ್ತಿದ್ದೀರಿ, ಇವೆಲ್ಲಾ ಅಕ್ರಮಗಳನ್ನು ನಾನೇನು ಒಂದೊಂದಾಗಿ ಬಿಡಿಸಿ ಹೇಳುತ್ತಿದ್ದೇನೆ, ನಿಮ್ಮ ಮೂಗಿನಡಿ ನೇರವಾಗಿ ಬರುತ್ತವೆ. ನಿಮ್ಮ ನೇತೃತ್ವದಲ್ಲಿಯೇ ಆ COD ಇರುವುದು. ಇಷ್ಟೋತ್ತು ಏನು ಈ ವೈಫಲ್ಯಗಳನ್ನು ಹೇಳಿದೆ, ಈ ವೈಫಲ್ಯಗಳು ಸಾಕಷ್ಟು ಅಲ್ಲಿಯೂ ಇವೆ. ನಮ್ಮನ್ನು ಸಮಾಧಾನ ಮಾಡಿಲಿಕ್ಕೆ COD Enquiry ಎಂದು ಹೇಳುತ್ತೀದ್ದೀರೋ? ಅಥವಾ ನೀವೇ ನಿಮ್ಮನ್ನು ಆತ್ಮವಿಮರ್ಶೆಗೆ ಒಳಪಡಿಸಿಕೊಂಡು ಯಾವುದೇ ನಾಗರೀಕ

ಸಮಾಜದಲ್ಲಿ ಇಂಥ ದುರ್ಘಟನೆಗಳು ಆಗಬಾರದು, ಅಧಿಕಾರದಲ್ಲಿ ಕರ್ತವ್ಯ ಚ್ಯುತಿಮಾಡಿದಂಥರವರು ಇದ್ದರೆ ಅವರಿಗೆ ಶಿಕ್ಷೆ ಆಗಬೇಕು, ಆಡಳಿತ ಸುಧಾರಿಸಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೀರೋ? ಗೊತ್ತಾಗಬೇಕು, ಏಕೆ ಮಾಡುತ್ತಿದ್ದೀರಿ? The last thing Sir, ಬಹಳ important ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವರು ಕೆಲವರಿಗೆ ಕೆಟಗರಿವೈಸ್ ಪ್ರೊಟೆಕ್ಷನ್ ಕೊಡುತ್ತಾರೆ. ಅದು politician ಇರಬಹುದು, businessmen ಇರಬಹುದು, journalist ಇರಬಹುದು, police officer ಇರಬಹುದು, advocates ಇರಬಹುದು, VIPಗಳು ಇರಬಹುದು, ಇಂಥವರಿಗೆ ಪ್ರೊಟೆಕ್ಷನ್ ಕೊಡುತ್ತಾರೆ. ಏಕೆ ಪ್ರೊಟೆಕ್ಷನ್ ಕೊಡಬೇಕು, ಅವರಿಗೇನು ಥ್ರೆಟ್ ಇದೆ, ಎನ್ನುವುದನ್ನು ನೀವು ಏನು ಒಂದು ಕಮಿಟಿ ಇಟ್ಟುಕೊಂಡಿರುತ್ತೀರಿ ಅಲ್ಲಿ ಅಭ್ಯಾಸ ಮಾಡಿ ಜವಾಬ್ದಾರಿಯುತವಾದ ಅಧಿಕಾರಿಗಳೆಲ್ಲ ಇದ್ದು ಒಂದು ತೀರ್ಮಾನಕ್ಕೆ ಬಂದು ಯಾರ್‍ಯಾರಿಗೆ ಯಾವ ತರಹದ ಸೆಕ್ಯೂರಿಟಿ ಕೊಡಬೇಕು ಅದು ಯಾವ ಸ್ವರೂಪದ್ದಾಗಿರಬೇಕು ಎನ್ನುವ ಬಗ್ಗೆ ನೀವು ನಿರ್ಣಯ ಮಾಡುತ್ತೀರಿ. ಒಂದು ವೇಳೆ ಹೆಚ್ಚಿಸಬೇಕಾದರೆ ಅಥವಾ ಕಡಿಮೆ ಮಾಡಬೇಕಾದರೆ ಅಥವಾ ವಿತ್‌ಡ್ರಾ ಮಾಡಬೇಕಾದರೆ, ಬಹುಶ: ನಿಮ್ಮ ಕಮಿಟಿಯಲ್ಲಿ ಇಟ್ಟುಕೊಂಡು ಅದರ ಬಗ್ಗೆ ತೀರ್ಮಾನ ಮಾಡಬೇಕು. ಗುರುಪಾದಪ್ಪನವರಿಗೆ ಮತ್ತು ಅವರ ಮಕ್ಕಳಿಗೆ ನಿಮ್ಮ ಕಡತಗಳ ಪ್ರಕಾರ ಯಾವುದಾದರೂ ಕೆಟಗರಿಯ ರಕ್ಷಣೆ ಇತ್ತೇ? ಆ ಕೆಟಗರಿಯನ್ನು ಬದಲಾವಣೆ ಮಾಡತಕ್ಕಂಥ ನಿರ್ಣಯವನ್ನು ನೀವು ತೆಗೆದುಕೊಂಡಿದ್ದೀರಾ? ತೆಗೆದುಕೊಂಡಿದ್ದರೆ ಅದಕ್ಕೆ ಕಾರಣಗಳೇನು? ಇನ್ನು ಹೆಚ್ಚು ಮಾಡಬೇಕೆಂದು ತೆಗೆದುಕೊಂಡಿದ್ದರೋ ಅಥವಾ ವಿತ್‌ಡ್ರಾ ಮಾಡಬೇಕೆಂದು ತೆಗೆದುಕೊಂಡಿದ್ದರೋ? ಅಥವಾ ಯಾವ ಕಮಿಟಿನೂ ಇಲ್ಲ, ಯಾವ ಕನ್‌ಸಲ್ಟೇಷನ್ ಇಲ್ಲ, ನಾನೇ ಅಧಿಕಾರಿ, I have access to C.M.s here, I am the Chief, I will decide ಎಂದು arbitraryಯಾಗಿ ಏನಾದರೂ ಮಾಡಿದ್ದಾರಾ? ಪ್ರಕಾಶ್‌ರವರೇ, ತಮ್ಮಲ್ಲಿ ಅತ್ಯಂತ ನೋವಿನಿಂದ ಮತ್ತು ನಮ್ರತೆಯಿಂದ ಮನವಿ ಮಾಡಿಕೊಳ್ಳುತ್ತೀದ್ದೇನೆ, ಇದು tip of the ice burg ಅಷ್ಟೇ. ಬರುವ ದಿನಗಳಲ್ಲಿ ಇನ್ನೂ ಹಲವಾರು ಇಂಥ ಪ್ರಕರಣಗಳು ಸಂಭವಿಸುತ್ತವೆ. ಕಾರಣ ಏನೆಂದರೆ, ನಿಮ್ಮ ಆಡಳಿತದ ವ್ಯವಸ್ಥೆಯಲ್ಲಿ ನಿಮ್ಮ

ಪೊಲೀಸ್ ಇಲಾಖೆಯಲ್ಲಿ ಯಾರು ಈ ವರ್ತುಲದ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದಾರೆ, ಅವರಿಗೆ ದುರಾಹಂಕಾರ ಎನ್ನುವುದು ತಲೆಯ ಮೇಲೆ ಫೌಂಟೇನ್‌ನಲ್ಲಿ ನೀರು ಬಂದ ಹಾಗೆ ಬರುತ್ತದೆ. ತಾವು ಆಡಳಿತ ನಡೆಸುತ್ತಿದ್ದೀರಿ. ನಾವು recipients ನಮಗೆ ಗೊತ್ತಿದೆ. ಈ ಪೊಲೀಸ್ ಇಲಾಖೆಯ ವ್ಯವಸ್ಥೆಯಲ್ಲಿ ಇಂಟಲಿಜೆನ್ಸ್ ಚೀಫ್ ಎನ್ನತಕ್ಕಂಥದ್ದು ಬಹಳ ಗೌರವಯುತವಾದ ಪೋಸ್ಟಿಂಗ್ ಎಂದು ಅವರು ತಿಳಿದುಕೊಂಡಿರುವುದು. ನನ್ನ ಪ್ರಕಾರ ಅದರಷ್ಟು hopeless , ನೀಚವಾದ ಪೋಸ್ಟಿಂಗ್ ಮತ್ತೊಂದು ಇಲ್ಲವೇ ಇಲ್ಲ. ಅವನಿಗೆ 24 ಗಂಟೆ ಮುಖ್ಯಮಂತ್ರಿಯಾಗಿರತಕ್ಕಂಥವನ ಹತ್ತಿರ ಹೋಗಿ ಕುಳಿತುಕೊಂಡು ಸುಳ್ಳು ಹೇಳುವುದು, ಓಲೈಸುವುದು, ಖುಷಿ ಪಡಿಸುವುದು ಬಿಟ್ಟರೆ ಬೇರೆ ಏನೂ ಇಲ್ಲ. ಧರ್ಮಸಿಂಗ್ ಮುಖ್ಯಮಂತ್ರಿಯಾಗಲಿ, ನೀವಾಗಲಿ, ನಾನಾಗಲಿ, ಕುಮಾರಸ್ವಾಮಿಯವರಾಗಲಿ, ಮತ್ತೊಬ್ಬರು ಇರಲಿ. ಯಾರೇ ಇದ್ದರೂ ಅವರು ನಿಜವನ್ನು ಅವರ ಜನ್ಮದಲ್ಲಿ ಹೇಳುವುದಿಲ್ಲ, ಸತ್ಯ ಅವರ ಜನ್ಮದಲ್ಲಿ ಹೇಳುವುದಿಲ್ಲ, ಬಟ್ಟಂಗಿತನ ಮಾಡುವುದು, ಕಂಕಳು ನೆಕ್ಕುವುದು, ಕಾಲು ನೆಕ್ಕುವುದೇ ಇವರ ಡ್ಯೂಟಿ. ಅಧಿಕಾರದಲ್ಲಿರತಕ್ಕಂಥವರನು ಆ ಅಧಿಕಾರ ಕಳೆದುಕೊಂಡ ತಕ್ಷಣ ಫಸ್ಟ್ ಮಾಯವಾಗುವುದು ಯಾರು ಎಂದರೆ, ಈ ಇಂಟಲಿಜೆನ್ಸ್ ಚೀಫ್ ಯಾರು ಇರುತ್ತಾರೆ ಅವನೇ ಫಸ್ಟ್ ಮಾಯವಾಗುವುದು. Probably you can verify it from Mr.Dharm Singh and also interact with other past Chief Ministers. Because he is busy finding his next place. The history is there about the conduct of these people who have held this post. Why was the protection that was given to them was withdrawn? Sir, all the officers involved are of all India cadre. ಇಲ್ಲಿ COD ಯಲ್ಲಿರತಕ್ಕಂಥವರು ನಾನು ಆಗಲೇ ಹೇಳಿದಂತೆ, ಬ್ಯಾಚ್‌ಮೆಟ್ಸ್, ಕೊಲಿಗ್ಸ್, ಜ್ಯೂನಿಯರ್ಸ್, ಸಿನಿಯರ್ಸ್ ಇರುತ್ತಾರೆ. ನಿಮ್ಮ ನೇತೃತ್ವದ ಕೆಳಗೆ ಈ COD ಇರತಕ್ಕಂಥದ್ದು. ಈ ದೇಶದಲ್ಲಿ ನಾವು ಒಪ್ಪಕೊಂಡಿರುವ ಹಾಗೆ, ಸ್ವಾಯತ್ತ ಸ್ವತಂತ್ರವಾಗಿರತಕ್ಕಂಥ ಎಲ್ಲಾ ರೀತಿಯ ವಿಚಾರಗಳನ್ನು, ಇಂಥ ಸ್ವರೂಪದ ವಿಚಾರಗಳನ್ನು ಮುಕ್ತವಾಗಿ ನಿರ್ದಾಕ್ಷಿಣ್ಯವಾಗಿ ವಿಚಾರಣೆ ಮಾಡಲಿಕ್ಕೆ ಸಿಬಿಐ ಬಿಟ್ಟು ಮತ್ತೊಂದು ಸಂಸ್ಥೆಯಿಲ್ಲ. It is the lapse, misconduct, callous behaviour, immoral conduct on the part of the officers

who belong to IPS cadre for flourishing, despite their incapacities to hold the office just because they have access to men in authority. They have ruined the very morale and fabric of the police in Karnataka. They should be hanged. It is for that reason sir, I demand this matter must be referred to the C.B.I. ಇದರ ಮೇಲೆ, ಸಂಖ್ಯಾ ಬಲ ಇದೆ, ಸರ್ಕಾರ ನಡೆಸುತ್ತಿದ್ದೇವೆ, defend ಮಾಡಿಕೊಳ್ಳುತ್ತೇವೆ, ಗುರುಪಾದಪ್ಪನವರ ಮಗ ಹೋದರೆ sorry ಹೇಳಿ ಒಂದು ಪತ್ರ ಬರೆಯೋಣ ಅಥವಾ ತಿಥಿಗೆ ಹೋಗಿ ಬರೋಣ, ನಮ್ಮ ಆಡಳಿತ ಇದೆ, ನಾವು ನಡೆಸುತ್ತೇವೆ ನಿಮ್ಮದು ಬಂದಾಗ ನೀವು ನಡೆಸಿ ಎಂದು ಹೇಳುವುದಿದ್ದರೆ all of us will have to pay for this. If not today, tomorrow. ಇಂಥ ವಿಷಯಗಳಲ್ಲಿ ನಾವು ತೆಗೆದುಕೊಳ್ಳತಕ್ಕಂಥ ನಿರ್ಣಯಗಳು ರಾಜಕೀಯ ಸಂಬಂಧಗಳ ಮೇಲೆ ಇರಬೇಕು. ಶಾಶ್ವತವಾಗಿ ಚರಿತ್ರೆಯಲ್ಲಿ ದಾಖಲೆಗಳಾಗಿ ಉಳಿಯಬೇಕು. ಮುಂದು ಬರತಕ್ಕಂಥವರಿಗೆ ಮಾರ್ಗದರ್ಶನವಾಗಬೇಕು. ಇದಕ್ಕಿಂತ ಹೆಚ್ಚಿಗೆ ಹೇಳುವ ಶಕ್ತಿ ನನಗಿಲ್ಲ. ನನ್ನಲ್ಲಿರತಕ್ಕಂಥ ಎಲ್ಲಾ ನೋವು, ಅಳಲನ್ನು ಅತ್ಯಂತ ಪ್ರಮಾಣೀಕವಾಗಿ ತಮ್ಮ ಮುಂದೆ ಇಟ್ಟಿದ್ದೇನೆ. ಉಳಿದಿದ್ದು ತಮ್ಮ ವಿವೇಚನೆಗೆ ಬಿಟ್ಟಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೂಡ ಎರಡು ನಿಮಿಷ ಮಾತನಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ನಿಮಿಷ ಮಾತನಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್ : ಎಲ್ಲರೂ ಮಾತನಾಡಲಿಕ್ಕೆ ನಮ್ಮದೇನೂ ಆಕ್ಷೇಪವಿಲ್ಲ. ಅದಕ್ಕೆ ಉತ್ತರ ಕೊಡಲಿಕ್ಕೆ ನಾನು ತಯಾರಿದ್ದೇನೆ. ಆದರೆ, ಯಾವ ನಿಯಮಾವಳಿಯ ಪ್ರಕಾರ ಇದನ್ನು ಎತ್ತಲಾಯಿತು ಎಂಬುದು ತಮಗೆ ಗೊತ್ತಿದೆ. ನಾನೊಂದು ಸು–ಮೋಟು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಮೊನ್ನೆ ಹೇಳಿದ್ದೆ. ಬಹಳ ಗಂಭೀರವಾದ ಘಟನೆಯಾಗಿದ್ದರಿಂದ ನಾವು ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಕ್ಕೆ ತಾವು ಕೂಡ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರ ಅನುಮತಿ ಕೊಟ್ಟರೆ ಈಗ ಎಲ್ಲರೂ ಮಾತನಾಡಿ..

ಪೊಲೀಸ್ ಇಲಾಖೆಯಲ್ಲಿ ಯಾರು ಈ ವರ್ತುಲದ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದಾರೆ, ಅವರಿಗೆ ದುರಾಹಂಕಾರ ಎನ್ನುವುದು ತಲೆಯ ಮೇಲೆ ಫೌಂಟೇನ್‌ನಲ್ಲಿ ನೀರು ಬಂದ ಹಾಗೆ ಬರುತ್ತದೆ. ತಾವು ಆಡಳಿತ ನಡೆಸುತ್ತಿದ್ದೀರಿ. ನಾವು recipients ನಮಗೆ ಗೊತ್ತಿದೆ. ಈ ಪೊಲೀಸ್ ಇಲಾಖೆಯ ವ್ಯವಸ್ಥೆಯಲ್ಲಿ ಇಂಟಲಿಜೆನ್ಸ್ ಚೀಫ್ ಎನ್ನತಕ್ಕಂಥದ್ದು ಬಹಳ ಗೌರವಯುತವಾದ ಪೋಸ್ಟಿಂಗ್ ಎಂದು ಅವರು ತಿಳಿದುಕೊಂಡಿರುವುದು. ನನ್ನ ಪ್ರಕಾರ ಅದರಷ್ಟು hopeless , ನೀಚವಾದ ಪೋಸ್ಟಿಂಗ್ ಮತ್ತೊಂದು ಇಲ್ಲವೇ ಇಲ್ಲ. ಅವನಿಗೆ 24 ಗಂಟೆ ಮುಖ್ಯಮಂತ್ರಿಯಾಗಿರತಕ್ಕಂಥವನ ಹತ್ತಿರ ಹೋಗಿ ಕುಳಿತುಕೊಂಡು ಸುಳ್ಳು ಹೇಳುವುದು, ಓಲೈಸುವುದು, ಖುಷಿ ಪಡಿಸುವುದು ಬಿಟ್ಟರೆ ಬೇರೆ ಏನೂ ಇಲ್ಲ. ಧರ್ಮಸಿಂಗ್ ಮುಖ್ಯಮಂತ್ರಿಯಾಗಲಿ, ನೀವಾಗಲಿ, ನಾನಾಗಲಿ, ಕುಮಾರಸ್ವಾಮಿಯವರಾಗಲಿ, ಮತ್ತೊಬ್ಬರು ಇರಲಿ. ಯಾರೇ ಇದ್ದರೂ ಅವರು ನಿಜವನ್ನು ಅವರ ಜನ್ಮದಲ್ಲಿ ಹೇಳುವುದಿಲ್ಲ, ಸತ್ಯ ಅವರ ಜನ್ಮದಲ್ಲಿ ಹೇಳುವುದಿಲ್ಲ, ಬಟ್ಟಂಗಿತನ ಮಾಡುವುದು, ಕಂಕಳು ನೆಕ್ಕುವುದು, ಕಾಲು ನೆಕ್ಕುವುದೇ ಇವರ ಡ್ಯೂಟಿ. ಅಧಿಕಾರದಲ್ಲಿರತಕ್ಕಂಥವರನು ಆ ಅಧಿಕಾರ ಕಳೆದುಕೊಂಡ ತಕ್ಷಣ ಫಸ್ಟ್ ಮಾಯವಾಗುವುದು ಯಾರು ಎಂದರೆ, ಈ ಇಂಟಲಿಜೆನ್ಸ್ ಚೀಫ್ ಯಾರು ಇರುತ್ತಾರೆ ಅವನೇ ಫಸ್ಟ್ ಮಾಯವಾಗುವುದು. Probably you can verify it from Mr.Dharm Singh and also interact with other past Chief Ministers. Because he is busy finding his next place. The history is there about the conduct of these people who have held this post. Why was the protection that was given to them was withdrawn? Sir, all the officers involved are of all India cadre. ಇಲ್ಲಿ COD ಯಲ್ಲಿರತಕ್ಕಂಥವರು ನಾನು ಆಗಲೇ ಹೇಳಿದಂತೆ, ಬ್ಯಾಚ್‌ಮೆಟ್ಸ್, ಕೊಲಿಗ್ಸ್, ಜ್ಯೂನಿಯರ್ಸ್, ಸಿನಿಯರ್ಸ್ ಇರುತ್ತಾರೆ. ನಿಮ್ಮ ನೇತೃತ್ವದ ಕೆಳಗೆ ಈ COD ಇರತಕ್ಕಂಥದ್ದು. ಈ ದೇಶದಲ್ಲಿ ನಾವು ಒಪ್ಪಕೊಂಡಿರುವ ಹಾಗೆ, ಸ್ವಾಯತ್ತ ಸ್ವತಂತ್ರವಾಗಿರತಕ್ಕಂಥ ಎಲ್ಲಾ ರೀತಿಯ ವಿಚಾರಗಳನ್ನು, ಇಂಥ ಸ್ವರೂಪದ ವಿಚಾರಗಳನ್ನು ಮುಕ್ತವಾಗಿ ನಿರ್ದಾಕ್ಷಿಣ್ಯವಾಗಿ ವಿಚಾರಣೆ ಮಾಡಲಿಕ್ಕೆ ಸಿಬಿಐ ಬಿಟ್ಟು ಮತ್ತೊಂದು ಸಂಸ್ಥೆಯಿಲ್ಲ. It is the lapse, misconduct, callous behaviour, immoral conduct on the part of the officers

who belong to IPS cadre for flourishing, despite their incapacities to hold the office just because they have access to men in authority. They have ruined the very morale and fabric of the police in Karnataka. They should be hanged. It is for that reason sir, I demand this matter must be referred to the C.B.I. ಇದರ ಮೇಲೆ, ಸಂಖ್ಯಾ ಬಲ ಇದೆ, ಸರ್ಕಾರ ನಡೆಸುತ್ತಿದ್ದೇವೆ, defend ಮಾಡಿಕೊಳ್ಳುತ್ತೇವೆ, ಗುರುಪಾದಪ್ಪನವರ ಮಗ ಹೋದರೆ sorry ಹೇಳಿ ಒಂದು ಪತ್ರ ಬರೆಯೋಣ ಅಥವಾ ತಿಥಿಗೆ ಹೋಗಿ ಬರೋಣ, ನಮ್ಮ ಆಡಳಿತ ಇದೆ, ನಾವು ನಡೆಸುತ್ತೇವೆ ನಿಮ್ಮದು ಬಂದಾಗ ನೀವು ನಡೆಸಿ ಎಂದು ಹೇಳುವುದಿದ್ದರೆ all of us will have to pay for this. If not today, tomorrow. ಇಂಥ ವಿಷಯಗಳಲ್ಲಿ ನಾವು ತೆಗೆದುಕೊಳ್ಳತಕ್ಕಂಥ ನಿರ್ಣಯಗಳು ರಾಜಕೀಯ ಸಂಬಂಧಗಳ ಮೇಲೆ ಇರಬೇಕು. ಶಾಶ್ವತವಾಗಿ ಚರಿತ್ರೆಯಲ್ಲಿ ದಾಖಲೆಗಳಾಗಿ ಉಳಿಯಬೇಕು. ಮುಂದು ಬರತಕ್ಕಂಥವರಿಗೆ ಮಾರ್ಗದರ್ಶನವಾಗಬೇಕು. ಇದಕ್ಕಿಂತ ಹೆಚ್ಚಿಗೆ ಹೇಳುವ ಶಕ್ತಿ ನನಗಿಲ್ಲ. ನನ್ನಲ್ಲಿರತಕ್ಕಂಥ ಎಲ್ಲಾ ನೋವು, ಅಳಲನ್ನು ಅತ್ಯಂತ ಪ್ರಮಾಣೀಕವಾಗಿ ತಮ್ಮ ಮುಂದೆ ಇಟ್ಟಿದ್ದೇನೆ. ಉಳಿದಿದ್ದು ತಮ್ಮ ವಿವೇಚನೆಗೆ ಬಿಟ್ಟಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೂಡ ಎರಡು ನಿಮಿಷ ಮಾತನಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ನಿಮಿಷ ಮಾತನಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್ : ಎಲ್ಲರೂ ಮಾತನಾಡಲಿಕ್ಕೆ ನಮ್ಮದೇನೂ ಆಕ್ಷೇಪವಿಲ್ಲ. ಅದಕ್ಕೆ ಉತ್ತರ ಕೊಡಲಿಕ್ಕೆ ನಾನು ತಯಾರಿದ್ದೇನೆ. ಆದರೆ, ಯಾವ ನಿಯಮಾವಳಿಯ ಪ್ರಕಾರ ಇದನ್ನು ಎತ್ತಲಾಯಿತು ಎಂಬುದು ತಮಗೆ ಗೊತ್ತಿದೆ. ನಾನೊಂದು ಸು-ಮೋಟು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಮೊನ್ನೆ ಹೇಳಿದ್ದೆ. ಬಹಳ ಗಂಭೀರವಾದ ಘಟನೆಯಾಗಿದ್ದರಿಂದ ನಾವು ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಕ್ಕೆ ತಾವು ಕೂಡ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರ ಅನುಮತಿ ಕೊಟ್ಟರೆ ಈಗ ಎಲ್ಲರೂ ಮಾತನಾಡಿ..

ಶ್ರೀ ಕೆ.ಶ್ರೀನಿವಾಸ ಗೌಡ : ಒಂದು ದಿವಸವಾದವರೂ ತಾವು ಅನುಮತಿ ಕೊಟ್ಟಮೇಲೆ ನಿಯಮಾವಳಿಯ ಮೇಲೆ ಮಾತನಾಡದಿದ್ದರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್ : ಎಲ್ಲರಿಗೂ ಕೂಡ ಅವಕಾಶವನ್ನು ಕೊಡದಾಗಿದ್ದರೆ, ಬೇರೆ ಬೇರೆ ಕಲಾಪಗಳು ಮೀರಿ ಹೋಗುತ್ತವೆ. ತಾವು ಮಾತನಾಡುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ರಮೇಶ್‌ಕುಮಾರ್‌ರವರ ಮಾತಿನಲ್ಲಿ ಹೇಳುವುದಾದರೆ, ದಾಖಲೆಗಾಗಿ ಇದರ ಬಗ್ಗೆ ನಾವು ಮಾತನಾಡಿದ್ದೇವೆಂದು ಆಗುವುದಾದರೆ ಆಗಬಹುದು. ಇದಕ್ಕೆ ನಮ್ಮದೇನು ಆಕ್ಷೇಪಣೆ ಇಲ್ಲ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನಾವು ಯಾವುದೇ ವಿಧವಾದ ದಾಖಲೆಗೋಸ್ಕರ ಮಾತನಾಡುವವರಲ್ಲ. ಈ ಘಟನೆ ಬಗ್ಗೆ ಆಗಿರತಕ್ಕಂಥ ವಿಷಯಗಳ ಬಗ್ಗೆ ನಾವು ಬೆಳಕು ಚೆಲ್ಲಬೇಕಾಗಿದೆ. ಇವತ್ತು ಮಾನ್ಯ ಗುರುಪಾದಪ್ಪನವರ ಮಗನಿಗೆ ಆಗಿರಬಹುದು, ನಾಳೆದಿವಸ ಇನ್ನೊಬ್ಬರಿಗೆ ಆಗಬಹದು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವೇನು ದಾಖಲೆಗೋಸ್ಕರ ಮಾತನಾಡುತ್ತಿದ್ದೆವೆಯೇ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಯಾರಿಗಾದರೂ ಕೂಡ ಅಗೌರವ ತೋರಿಸಲಿಕ್ಕೋಸ್ಕರ ನಾನು ಹೇಳಲಿಲ್ಲ.

(ಗೊಂದಲ)

ಶ್ರೀ ಜಿ.ವಿ.ಶೀರಾಮರೆಡ್ಡಿ: ದಾಖಲೆಗೋಸ್ಕರ ಮಾಡನಾಡಬೇಕೆಂದು ಹೇಳಿದರೆ ಏನರ್ಥ? ದಾಖಲೆಗೋಸ್ಕರ ನಾವು ಇಲ್ಲಿ ಮಾತನಾಡುತ್ತಿದ್ದೆವೆಯೇ?

ಶ್ರೀ ಎಂ.ಪಿ.ಪ್ರಕಾಶ್: ಸರ್ಕಾರ ನಡೆಸಬೇಕೆಂದು ನಡೆಸುತ್ತಿದ್ದೀರಿ. ಆದ್ದರಿಂದ ಅದಕ್ಕೆ ಏನಾದರು ಹೇಳುವುದಿದ್ದರೆ ಹೇಳಿಬಿಡಿ ಎನ್ನುವ ದಾಟಿಯಲ್ಲಿ ಹಿರಿಯ ಸದಸ್ಯರು ಮಾತನಾಡಿರುವುದಕ್ಕೆ ನಾನು ರಿಟಾರ್ಟ್ ಆಗಿ ಅದನ್ನು ಹೇಳಿದೆ ವಿನ: ಅಗೌರವವಾಗಿ ಹೇಳಿದ್ದಲ್ಲ. ನಮಗೂ ಕೂಡ ಎಲ್ಲ ತಿಳಿಯುತ್ತದೆ. ಪಾರ್ಲಿಮೆಂಟರಿ ಪ್ರೊಸೀಜರ್ ಅಂಡ್ ಪ್ರಾಕ್ಟೀಸ್‌ನಲ್ಲಿ ಈ ರೀತಿಯಾಗಿ ಕೊಡತಕ್ಕಂಥದು ಮತ್ತು ತೆಗೆದುಕೊಳ್ಳತಕ್ಕಂಥದೂ ಕೂಡ ಇರಬೇಕಾಗುತ್ತದೆ.

ನೀವು ಆಗಲೇ ನಮ್ಮ ರಕ್ಷಣೆಗೆ ಬರಬೇಕಾಗಿತ್ತು. ಮಾತಿಗಾಗಿ ಮಾತು, ನಡೆಸುತ್ತೇವೆಂದರೆ ನಡೆಸುತ್ತೇವೆ, ಹೇಳುವುದಕ್ಕಾಗಿ ಹೇಳುತ್ತೇವೆ ಎಂಬ ಮಾತುಗಳನ್ನು ಹೇಳಿದಾಗ ನೀವೇಕೆ ನಮ್ಮ ಪರವಾಗಿ ಬರಲಿಲ್ಲ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವಾಗ?

ಶ್ರೀ ಎಂ.ಪಿ.ಪ್ರಕಾಶ್: ಈಗ ಅವರು ಹೇಳಿದ್ದು ಕೇಳಲಿಲ್ಲವೆ? ನಿಮ್ಮ ಜ್ಞಾನಕ್ಕೆ ಕಿವುಡೇ?

(ಗೊಂದಲ)

ಅಧ್ಯಕ್ಷರು: ನಾನು ಹೇಳುವುದನ್ನು ಸ್ವಲ್ಪ ಕೇಳಿ. ಇದು ಗಂಭೀರವಾದಂಥ ವಿಷಯವೆಂದು ನಿಯಮಾವಳಿ ಪ್ರಕಾರ ಅವಕಾಶ ಇಲ್ಲದಿದ್ದರೂ ಕೂಡ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಆದರೆ, ಇದರ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡತಕ್ಕಂಥ ಅಗತ್ಯತೆ ಇರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ರಮೇಶ್‌ಕುಮಾರ್‌ರವರು ಅವರ ಅಭಿಪ್ರಾಯದ ಪ್ರಕಾರ ಮಾತನಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ನಾನು ಅಗೌರವ ತೋರಿಸುವುದಕ್ಕೋಸ್ಕರ ಮಾತನಾಡಿಲ್ಲ. ಆದರೆ, ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಅದನ್ನು ನಾನು ವಿತ್‌ಡ್ರಾ ಮಾಡುತ್ತೇನೆ. I don't stand on any formality . ಇದು ಕೇವಲ ರಿಟಾರ್ಟ್ ಆಗತಕ್ಕಂಥದಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಜಯಕುಮಾರ್‌ರವರು ಸತ್ತಿರುವ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನಮ್ಮ ಮಾತಿನ ಬಗ್ಗೆ ಇಲ್ಲಿ ಚರ್ಚೆ ಏಕೆ ಆಗಬೇಕು? ತಾವು ಅವಕಾಶ ಕೊಟ್ಟರೆ ನಾವು ಮಾತನಾಡುತ್ತೇವೆ. ಈಗ ಎಲ್ಲ ನಿಯಮಗಳನ್ನು ಸಡಿಲ ಮಾಡಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತಿರುವುದಕ್ಕೋಸ್ಕರ ನಾವು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದೇವೆ. ನಾವು ಸಹಿ ಹಾಕಿಲ್ಲವೆಂದು ನಮಗೆ ಗೊತ್ತಿದೆ. ಆದ್ದರಿಂದ ನಾವು ಕುಳಿತುಕೊಂಡಿದ್ದೇವೆ. ಇದು ವಿಶೇಷ ಪ್ರಕರಣವಾಗಿದ್ದರಿಂದ ನಿಯಮವನ್ನು ಸಡಿಲ ಮಾಡಿದ್ದೇನೆಂದು ತಾವು ಹೇಳಿದ್ದಕ್ಕೆ ನಾವೂ ಕೂಡ ಮಾತನಾಡುತ್ತೇವೆಂದು ಕೇಳಿದ್ದೇವೆ. ತಾವು ಒಪ್ಪಿಕೊಂಡರೆ ನಾವು ಮಾತನಾಡುತ್ತೇವೆ.

ಅಧ್ಯಕ್ಷರು: ದಯಮಾಡಿ ಇಬ್ಬರು ಅಥವಾ ಮೂರು ಜನ ಮಾತ್ರ ಮಾತನಾಡಿ. ಏಕೆಂದರೆ, ಇದರ ಬಗ್ಗೆ ನಾವೆಲ್ಲರೂ ಬೆಳಕು ಚೆಲ್ಲುತ್ತೇವೆ, ಅವಕಾಶ ಕೊಡಿ ಎಂದು ಕೇಳಿದರೆ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಈಗ ಇನ್ನೂ ಇಬ್ಬರು ಅಥವಾ ಮೂರು ಜನ ಮಾತನಾಡಿ. ಆನಂತರ, ಸರ್ಕಾರದ ಕಡೆಯಿಂದ ಉತ್ತರ ಕೊಡಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ವಿಜಯಕುಮಾರ್ ಪ್ರಕರಣವನ್ನು ಎರಡು ರೀತಿಯಲ್ಲಿ ಅವಲೋಕನ ಮಾಡಬಹುದೆಂದು ನನ್ನ ಭಾವನೆಯಾಗಿದೆ. ಮೊದಲನೆಯದು ಏನೆಂದರೆ, ಇಲ್ಲಿ ಸರ್ಕಾರ ನಡೆಸತಕ್ಕಂಥವರು ಊಹೆ ಮಾಡಿ ಅಲ್ಲಿ ಹೋಗಿ ನಿಂತುಕೊಳ್ಳಬೇಕಾಗಿತ್ತೆಂದು ಮತ್ತು ಇದು ಗೃಹಮಂತ್ರಿಯವರ ಜವಾಬ್ದಾರಿ ಎನ್ನುವ ಮಾತಿಗೆ ನಾನು ಹೋಗುವುದಿಲ್ಲ. ಆದರೆ, ನನ್ನ ಅನಿಸಿಕೆ ಏನೆಂದರೆ, ಎಲ್ಲಿಯೋ ಒಂದು ಕಡೆ ನಿಮ್ಮ ಅಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗಲಾರದ ಸ್ಥಿತಿ ನಿರ್ಮಾಣವಾಗಿದೆ. ಫೀಲ್ಡ್‌ನಲ್ಲಿ ಪೋಲೀಸ್‌ರವರನ್ನು ಹಾಕುತ್ತೀರಿ. ಆದರೆ, ಅಲ್ಲಿ ಯಾರು ಎಗ್ಸಿಕ್ಯೂಟ್ ಮಾಡಬೇಕಾಗುತ್ತೋ ಅವರು ಎಲ್ಲಾ ವಿಷಯಗಳಿಗೆ ಮೇಲಗಡೆಯವರನ್ನು ನೋಡಿಕೊಂಡು ನಾನು ಏನು ಮಾಡಬೇಕೆಂದು ಕೇಳತಕ್ಕಂಥ ಸ್ಥಿತಿ ಇವತ್ತಿನದಿವಸ ರಾಜ್ಯದಲ್ಲಿ ಸೃಷ್ಟಿಯಾಗಿದೆ ಎಂಬುದು ನನ್ನ ಅನಿಸಿಕೆಯಾಗಿದೆ ಎಂದು ಸನ್ಮಾನ್ಯ ಪ್ರಕಾಶ್‌ರವರಿಗೆ ಹೇಳವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ದೇಶಪಾಂಡೆಯವರ ಮಾತನ್ನು ನಾನು ಒಪ್ಪುತ್ತೇನೆ. ವಿಜಯಕುಮಾರ್‌ರವರು ಗನ್ ತೆಗೆದ ತಕ್ಷಣ ಅರೆಸ್ಟ್ ಆಗಿದ್ದರೆ ಈ ಘಟನೆಯಾಗುತ್ತಿರಲಿಲ್ಲ. It is an action against Law, ಇದರಲ್ಲಿ ಎರಡು ಮಾತ್ತಿಲ್ಲ. ಅವರು ಸತ್ತು ಹೋಗಿದ್ದಾರೆಂದು ಅವರ ಪರವಾಗಿ ನಾನೇನು ವಹಿಸಿಕೊಂಡು ಮಾತನಾಡುತ್ತಿಲ್ಲ. ಎರಡನೆಯದು ಏನೆಂದರೆ, ಟ್ರ್ಯಾಕ್ಟರ್‌ನಲ್ಲಿ ಜನ ಕಲ್ಲು ತುಂಬುಕೊಂಡು ಬಂದಾಗ ಮತ್ತು ಜೊತೆಯಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಬಂದಾಗ ಅವರನ್ನು ಆ ಸರಹದ್ದಿಗೆ ಬಾರದಂತೆ ತಡೆಯಬಹುದಾಗಿತ್ತು. 27ನೇ ತಾರೀಖಿನ ದಿವಸ ಏನು ಒಂದು ತೀರ್ಮಾನವಾಗಿರತಕ್ಕಂಥದು ಎಗ್ಸಿಕ್ಯೂಟ್ ಆಗಬೇಕಾಗಿತ್ತೋ ಅಥವಾ ಇಲ್ಲವೋ ಎಂಬುದು ಮತ್ತು ಇದಕ್ಕೆ ಕೋರ್ಟ್‌ನಿಂದ ಪೂರಕವಾದ ಆದೇಶದ ಕಾಪಿ

ಸಿಕ್ಕಿದೆಯೋ ಅಥವಾ ಇಲ್ಲವೋ ಎಂಬುದೆಲ್ಲಾ ತಾವು ನಿರೀಕ್ಷೆ ಮಾಡಬೇಕಾಗಿತ್ತು. ಅಂದರೆ, ಇಲ್ಲಿ ಒಂದು ಘಟನೆ ನಡೆಯುತ್ತದೆ, ಇಲ್ಲಿ ನಾವು ಸ್ವಲ್ಪ ಜಾಗ್ರತರಾಗಿರಬೇಕು ಮತ್ತೆ ಇಲ್ಲಿ ಏನಾದರು ಪ್ರಿವೆನ್ಷನ್ ಕಂಡಿಷನ್ ಮಾಡಿ ನಾವು ಸ್ವಲ್ಪಮಟ್ಟಿಗಾದರು ಈ ಭಾಗಕ್ಕೆ ರಕ್ಷಣೆ ಕೊಡಬೇಕು ಎನ್ನತಕ್ಕಂಥ ಕಾಮನ್‌ಸೆನ್ಸ್ ಏನಾದರು ತಾವು ಕೊಟ್ಟಂಥ ತರಬೇತಿಯಲ್ಲಿದ್ದಿದ್ದರೆ ಸನ್ಮಾನ್ಯ ಗೃಹ ಸಚಿವರೆ ಈ ಘಟನೆಯನ್ನು ಸ್ವಲ್ಪ ಮಟ್ಟಿಗೆ ಕಂಟ್ರೋಲ್ ಮಾಡಬಹುದಾಗಿತ್ತು. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಈ ರೀತಿಯಾದ ಸ್ಥಿತಿ ನಿರ್ಮಾಣವಾಗುವುದರಲ್ಲಿ ಅನುಮಾನವೇ ಇಲ್ಲ. ರಿಯಲ್ ಎಸ್ಟೇಟ್ ದಂಧೆ, ಜಮೀನಿನ ಮೇಲೆ ಇರತಕ್ಕಂಥ ಆಸೆ, ಮತ್ತೆ ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ ಕೋರ್ಟ್‌ಗಳು ಕೊಡುತ್ತಿರುವ ತೀರ್ಮಾನಗಳು. ಅಂದರೆ, ಎವಿಕ್ಷನ್ ಆರ್ಡರ್ ಆಗಿತ್ತೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಅಲ್ಲಿ ಯಾರನ್ನಾದರು ಸುಪರ್ದು ತೆಗೆದುಕೊಳ್ಳುವುದಕ್ಕೆ ಕೋರ್ಟ್‌ನಿಂದ ಕಳಹಿಸಿಕೊಟ್ಟಿದ್ದರೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ಗೊತ್ತಿಲ್ಲ. ಮತ್ತೆ ಇವರು ಹೋಗಿರತಕ್ಕಂಥದ್ದು ಸರಿಯೋ ಅಥವಾ ತಪ್ಪೋ ಎನ್ನತಕ್ಕಂಥದು ಗೊತ್ತಿಲ್ಲ. ಮತ್ತೆ ಅವರು ಇವರು ಮಾತನಾಡಿರುವುದು ಸರಿಯೋ ಅಥವಾ ತಪ್ಪೋ ಎನ್ನತಕ್ಕಂಥದೂ ಕೂಡ ಗೊತ್ತಿಲ್ಲ. ಆದರೆ, ಈ ಸ್ಥಿತಿಯಲ್ಲಿ ನಾವು ಚರ್ಚೆ ಮಾಡಬೇಕಾದರೆ ಅಲ್ಲಿರತಕ್ಕಂಥ ನಿಮ್ಮ ಅಧಿಕಾರಿಗಳು ಇವರನ್ನಾದರು ಕನ್ವಿನ್ಸ್ ಮಾಡಬೇಕಾಗಿತ್ತು ಅಥವಾ ಅವರಿಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ ವೆಂದಿದ್ದರೆ ಆ ಸ್ಪಾಟ್‌ಗೆ ಬರಬೇಡಿ ಎಂದು ಹೇಳಬೇಕಾಗಿತ್ತು. ಇವತ್ತಿನದಿವಸ ವಿಧಾನ ಸೌಧದ ಹತ್ತಿರಕ್ಕೆ ಯಾರನ್ನೂ ಬಿಡದಂಥ ಸರ್ಕಾರ ಅಂಥ ಒಂದು ಗಲಭೆ ಪೀಡಿತ ಪ್ರದೇಶದಲ್ಲಿ ರಕ್ಷಣೆ ಮಾಡಿದ್ದರೆ ಈ ಸ್ಥಿತಿ ನಿರ್ಮಾಣ ಅಲ್ಲಿ ಆಗುತ್ತಿರಲಿಲ್ಲ. ಇವತ್ತಿನ ದಿವಸ ಅಧಿಕಾರಿಗಳು ಅದರಲ್ಲಿಯೂ ಪೊಲೀಸ್ ಅಧಿಕಾರಿಗಳು ಯಾರೂ ಕೂಡ ಸ್ವಂತ ಇಚ್ಛೆಯಿಂದ ಕೆಲಸ ಮಾಡತಕ್ಕಂಥ ಸ್ಥಿತಿಯನ್ನು ನಾವು ನೋಡುತ್ತಿಲ್ಲ. ಆದ್ದರಿಂದ, ಇದಕ್ಕೆ ಏನು ಕಾರಣವೆಂದು ತಾವು ಹೇಳಬೇಕಾಗುತ್ತದೆ. On their own nobody is acting . ಅಲ್ಲಿಗೆ ಎಸ್.ಪಿ ಬರಬೇಕಾಗುತ್ತದೆ. ಏಕೆಂದರೆ, ಅಲ್ಲಿ ಏನಾದರು ಸಣ್ಣ ಗಲಾಟೆಯಾದರೆ ಅಲ್ಲಿರುವ ಸಬ್ ಇನ್ಸ್‌ಪೆಕ್ಟರ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ರವರು ತೀರ್ಮಾನ ತೆಗೆದುಕೊಳ್ಳುವುದನ್ನು ಬಿಟ್ಟು ಎಸ್.ಪಿ., ಡಿ.ಸಿ., ಐ.ಜಿ .ರವರು ಬರಲೆಂದು

ಕಾಯುತ್ತಾ ಕುಳಿತರೆ ಅವರ ಪ್ರಾಣ ಇರುತ್ತದೆಯೇ? ಎಲ್ಲಿ ದೋಷವಾಗಿದೆ ಎಂಬುದನ್ನು ತಾವು ಪತ್ತೆ ಮಾಡಿ ಇದನ್ನು ಹೇಗಾದರು ತಪ್ಪಿಸಬಹುದಾಗಿತ್ತು. ಎರಡನೆಯದಾಗಿ, ಕೋರ್ಟ್ ತೀರ್ಮಾನಗಳನ್ನು ಹೇಗಾದರು ಮಾಡಿ 27 ಅಥವಾ 30ನೇ ತಾರೀಖಿನ ದಿವಸ ಅಂದರೆ, It was a known fact. ಬೀದರ್ ಜಿಲ್ಲೆಯಲ್ಲಿ ಈ ರೀತಿಯಾದ ಒಂದು ಗಲಾಟೆ ಆಗುತ್ತಿತ್ತು ಮತ್ತೆ ಈ ವಿಷಯ ಕೋರ್ಟ್‌ನಲ್ಲಿ ಕೂಡ ಇತ್ತು. ಇವತ್ತಿನ ದಿವಸ ಮೈನ್ಸ್ ಮತ್ತು ನಿಮ್ಮ ರಿಯಲ್ ಎಸ್ಟೇಟ್ ವಿಷಯದಲ್ಲಿ ಗಲಾಟೆ ಆಗುತ್ತಿವೆ. ಆದರೆ, ಇವತ್ತಿನದಿವಸ ನಿಮ್ಮ ಪೊಲೀಸ್‌ನವರು ಎವಿಕ್ಷನ್ ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ಡಿಸ್‌ಪೋಸಲ್ ಮಾಡಬೇಡಿ ಎಂದು ಹೈ ಕೋರ್ಟ್‌ನ ಆದೇಶ ಕೂಡ ಇದೆ. ಇವೆಲ್ಲವುಗಳ ನಡುವೆ ನೀವು ಏನು ಮಾಡಬೇಕಾಗಿತ್ತೆಂದು ಆಲೋಚನೆ ಮಾಡಿದ್ದರೆ ಈ ಸಾವನ್ನು ತಪ್ಪಿಸಬಹುದಾಗಿತ್ತು. ಇದು ನೂರಕ್ಕೆ ನೂರರಷ್ಟು ನಿಮ್ಮ ಪೊಲೀಸ್‌ನವರ ನಿಷ್ಕ್ರಿಯೆಯಿಂದ ಆಗಿರತಕ್ಕಂಥ ಸಾವು. ಲೀಗಲ್ ಅಥವಾ ಇಲೀಗಲ್, ಮತ್ತೆ ಅವನಿಗೆ ಅಥಾರಿಟಿ ಇತ್ತೇ ಎನ್ನತಕ್ಕಂಥದು ಎರಡನೇ ಪ್ರಶ್ನೆ. ಆದರೆ, ಇದಕ್ಕೆ ಯಾರನ್ನಾದರು ಜವಾಬ್ದಾರಿಯನ್ನಾಗಿ ಮಾಡಬೇಕಾಗಿತ್ತು. ಜವಾಬ್ದಾರಿ ಮಾಡುತ್ತೇವೆಂದು ಯಾರೋಬ್ಬ ಪೊಲೀಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತೇವೆ ಎನ್ನತಕ್ಕಂಥದು ಜವಾಬ್ದಾರಿ ಯಾಗುವುದಿಲ್ಲ. ಕಾನೂನಿನಲ್ಲಿ ಅವರಿಗೆ ಶಕ್ತಿ ಕೊಡಬೇಕಾಗುತ್ತದೆ. ಮತ್ತೆ ಯಾರು ಆ ಸ್ಥಳದಲ್ಲಿ ವಿವೇಚನೆಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೋ ಆತ ಆ ಕೆಲಸ ಮಾಡುವುದಕ್ಕೆ ಅನ್‌ಫಿಟ್ ಎಂದು ಅವರನ್ನು ಆ ಪೋಸ್ಟ್‌ನಿಂದ ತೆಗೆಯಬೇಕಾಗುತ್ತದೆ. ಅಂಥವರು ಅಲ್ಲಿ ಏಕೆ ಇದ್ದೀಯಾ ಎಂದು ನೀವು ಕೇಳಬೇಕಾಗುತ್ತದೆ. ಇಂಥ ಪೊಲೀಸ್ ಅಧಿಕಾರಿಗಳನ್ನು ಇಟ್ಟುಕೊಂಡು ಈ ರಾಜ್ಯದಲ್ಲಿ ಯಾವರೀತಿಯಾಗಿ ರಕ್ಷಣೆ ಕೊಡುತ್ತೀರಿ ಎನ್ನತಕ್ಕಂಥದು ನಮಗೆ ಅರ್ಥವಾಗುತ್ತಿಲ್ಲ. ಮತ್ತೆ ಮಾನ್ಯ ಪ್ರಕಾಶ್‌ರವರು ಅಲ್ಲಿ ಯಾರನ್ನು ಉಳಿಸುವುದಕ್ಕೆ ಆಗುತ್ತಿರಲಿಲ್ಲ. ಆದರೆ, ಸ್ಪಾಟ್‌ಗೆ ತಾವಾದರು ಹೋಗಿ ಬರಬೇಕಾಗಿತ್ತು. It is our earnest feelings. ಏಕೆಂದರೆ, ಅವರು ನಿಮ್ಮ ಜೊತೆ ಮಂತ್ರಿಗಳಾಗಿದ್ದರು ಮತ್ತೆ ನಿಮ್ಮ ಕಲೀಗ್ ಆಗಿದ್ದರು ಮತ್ತು ಶಾಸನ ಸಭೆಯ ಸದಸ್ಯರಾಗಿದ್ದವರು. ಅಲ್ಲಿ ಗಲಭೆಯಾಗಿ ಹಾಡುಹಗಲೇ ಸತ್ತಿದ್ದಾರೆ. ಅಲ್ಲಿಗೆ ಹೋಗುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ

ಸಮಯವಾಗದಿದ್ದರೆ ಸಾಮಾನ್ಯವಾಗಿ ಗೃಹ ಮಂತ್ರಿಗಳಾದ ತಾವು ಅಲ್ಲಿಗೆ ಏಕೆ ಹೋಗಲಿಲ್ಲ? ಮತ್ತೆ ಬೇರೆ ಮಂತ್ರಿಗಳೂ ಕೂಡ ಏಕೆ ಹೋಗಲಿಲ್ಲ? ಕನಿಷ್ಠ ಕನ್ಸೋಲ್ ಮಾಡುವಷ್ಟು ಸೌಜನ್ಯವನ್ನು ಏಕೆ ತೋರಿಸಲಿಲ್ಲ? ಇದರಲ್ಲಿ ಏನಾದರು ರಾಜಕಾರಣವಾದರೆ ಇದು ನಿಜವಾಗಿಯೂ ಅತೀಯಾದ ರಾಜಕಾರಣವಾಗುತ್ತದೆ. ಇದು ತೀರ ಅತಿಯಾಯಿತೆಂದು ನಾವು ಮಾತನಾಡುತ್ತಿದ್ದೆವು. ಪ್ರಕಾಶ್‌ರವರು ಸೌಜನ್ಯಕ್ಕಾದರು ಬೀದರ್‌ಗೆ ಏಕೆ ಹೋಗಲಿಲ್ಲ ಎನ್ನತಕ್ಕಂಥದು ನಮಗೆ ಅರ್ಥವಾಗುತ್ತಿಲ್ಲ. ತಾವು ಗೃಹ ಸಚಿವರಾಗಿದ್ದೀರಿ. ಆದ್ದರಿಂದ ತಾವು ಅಲ್ಲಿಗೆ ಹೋಗಬೇಕಾಗಿರತಕ್ಕಂಥದು ನಿಮ್ಮ ಕರ್ತವ್ಯವಾಗಿತ್ತು. ಇದು ಶುಕ್ರವಾರ ಆಗಿರತಕ್ಕಂಥ ಘಟನೆ. ಇವತ್ತು ಸೋಮವಾರ ಆಗಿದೆ. ಆದರೆ, ಜವಾಬ್ದಾರಿಯಿರುವ ಮಂತ್ರಿಮಂಡಲದ ಒಬ್ಬರೇ ಒಬ್ಬರು ಸದಸ್ಯರು ಸರಿಯಾಗಿ ವರ್ತಿಸಿಲ್ಲವೆಂದರೆ, ಸರ್ಕಾರವೆಂದು ಯಾರಿಗೆ ಏತಕ್ಕಾಗಿ ಕರೆಯಬೇಕು? ಇವತ್ತು ಗುರುಪಾದಪ್ಪನವರ ಮಗನಿಗೆ ಆಗಿದೆ. ನಾಳೆದಿವಸ ಇನ್ಯಾರೋ ಅಮಾಯಕರ ಮಗನನ್ನು ಕೊಚ್ಚಿ ಹಾಕುತ್ತಾರೆ. ಬೆಂಗಳೂರಿನಲ್ಲಿ ಇದು ಮಾಮೂಲಿಯಾಗಿ ಬಿಟ್ಟಿದೆ. ದಿವಸ ಪುರಾಣ ಹೇಳುತ್ತಿದ್ದೇವೆ, ಇದನ್ನು ಯಾರು ಕೇಳುತ್ತಾರೆಂದು ಈಗ ಹೇಳುವವರು ಸಹ ಸುಮ್ಮನಾಗಿದ್ದಾರೆ. ಮತ್ತೆ ನಿಮ್ಮ ಇಂಟಲಿಜೆನ್ಸ್ ಎಸ್‌ಎಸ್‌ಪಿಗೆ ಏನಾಗಿದೆ ಎನ್ನತಕ್ಕಂಥದು ನನಗೆ ಅರ್ಥವಾಗುತ್ತಿಲ್ಲ. ಇವತ್ತಿನದಿವಸ ಎಲ್ಲಿಯಾದರು ಗಲಾಟೆ ಆಗುತ್ತದೆಂದರೆ ಮಫ್ತಿಯಲ್ಲಿ ಅಥವಾ ಸಿವಿಲ್ ಡ್ರೆಸ್‌ನಲ್ಲಿ ಅಲ್ಲಿ ಅಡ್ಡಾಡುತ್ತಿದ್ದು ನಿಮಗೆ ಮಾಹಿತಿ ಕೊಟ್ಟು ನಿಮ್ಮ ಡಿಎಆರ್ ವ್ಯಾನ್ ಅಥವಾ ಬೇರೇನಾದರು ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿ ನಿಮ್ಮ ಪೊಲೀಸ್ ಇದ್ದಿದ್ದರೆ ಇದೆಲ್ಲಾ ನಡೆಯುತ್ತಿತ್ತಾ? ಇದೆಲ್ಲಾ ಕರ್ತವ್ಯ ಲೋಪವಲ್ಲವೇ? ಕೇವಲ ದಾಖಲೆಗೋಸ್ಕರ ನಾವು ಇಲ್ಲಿ ಮಾತನಾಡಬೇಕೆ? ತಾವೇ ಯೋಚನೆ ಮಾಡಿ? ನಾಳೆದಿವಸ ಯಶವಂತಪುರದಲ್ಲಿ ನಮ್ಮನ್ನು ಯಾರಾದರು ಹೊಡೆದು ಹಾಕಿದರೆ ಅಲ್ಲಿ ಯಾರು ಕೇಳುವವರು ಇಲ್ಲ. ಇಲ್ಲಿ ಎಂಎಲ್ಎ ಕಾರ್‌ಗಳಿಗೆ ಗುರುತಿನ ಚೀಟಿ ಅಂಟಿಸಿಕೊಂಡಿದ್ದೀರಾ ಎಂದು ಕೇಳುತ್ತಾರಷ್ಟೆ. ನಾವು ಇಲ್ಲಿ ಮೆಟ್ಟಿಲು ಇಳಿದು ಹೋಗುವಾಗ ಎರಡು ಕಡೆ ಜನ ನಿಂತುಕೊಂಡಿರುತ್ತಾರೆ. ಅಲ್ಲಿ ನಮ್ಮ ತಲೆಯಮೇಲೆ ಪಟಪಟ ಎಂದು ತಟ್ಟಿದರೂ ಕೇಳುವವರು ಇಲ್ಲ. ನಮಗೆ ರಕ್ಷಣೆ ಇಲ್ಲ. ಇಂಥ ಸ್ಥಿತಿಯನ್ನು ಇಟ್ಟುಕೊಂಡು ಸರ್ಕಾರವನ್ನು ನಡೆಸಿದರೆ ಗತಿ ಏನು? ತಾವೇ ಇದರ ಬಗ್ಗೆ ಯೋಚನೆ

ಮಾಡಬೇಕು? ಗುರುಪಾದಪ್ಪನವರ ಮಗನಿಗೆ ಅಕಸ್ಮಾತ್ ಇವತ್ತು ಸಾವು ಬಂದಿರತಕ್ಕಂಥದ್ದು ಅವರ ಆಯಸ್ಸು ಮುಗಿದು ಬರಲಿಲ್ಲ. ನಮ್ಮ ಅಧಿಕಾರಿಗಳ ನಿಷ್ಕ್ರಿಯೆಯಿಂದ ಬಂತೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಸಮಯ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮಾತನಾಡುವುದಕ್ಕೆ ಎದ್ದಾಗ ಮಾನ್ಯ ಗೃಹ ಮಂತ್ರಿಗಳು ರೀ ರೀ ಎಂದು ಕೂಗಿಕೊಳ್ಳುತ್ತಿದ್ದರು. ಏಕೆ ಆ ರೀತಿ ಕೂಗಿಕೊಂಡರೋ ನನಗಂತೂ ಅರ್ಥವಾಗಲಿಲ್ಲ. ಮಾನ್ಯ ಸದಸ್ಯರೆಂದು ಅವರು ಹೇಳಬಹುದಾಗಿತ್ತು. ಅಥವಾ ವಾಟಾಳ್ ನಾಗರಾಜ್ ಎಂದು ಕರೆಯಬಹುದಾಗಿತ್ತು. ಆದರೆ, ಅವರೂ ರೀ ಎಂದು ಕೂಗಿಕೊಂಡರು. ರೀ ಎಂದು ಪ್ರೀತಿಗೆ ಕರೆದರೋ ಅಥವಾ ಯಾವುದಕ್ಕೆ ಕರೆದರೆಂದು ನನಗೆ ಗೊತ್ತಾಗಲಿಲ್ಲ. ಆದರೂ ಕೂಡ ಚಿಂತೆ ಇಲ್ಲ. ಅವರ ಬಗ್ಗೆ ಗೌರವ ಇಟ್ಟುಕೊಂಡು ಮಾತನಾಡುತ್ತೇನೆ. ಅವರು ರೀ ಎಂದು ಏತಕ್ಕೆ ಕೂಗಿಕೊಳ್ಳುತ್ತಿದ್ದಾರೆಂದು ಮಾನ್ಯ ಮಾಧುಸ್ವಾಮಿಯವರಿಗೆ ನಾನು ಹೇಳಿದೆ. ಮಾನ್ಯ ಸದಸ್ಯರೆಂದು ಅವರು ಹೇಳುತ್ತಿಲ್ಲ. ರೀ ರೀ ಎಂದು ಕೂಗುತ್ತಿದ್ದಾರೆ, ನಾವು ಮತ್ತೆ ಮಾತನಾಡದೇ ಇರತಕ್ಕಂಥ ಪರಿಸ್ಥಿತಿ ಎಂದು ನಾನು ಭಾವಿಸಿದೆ. ಮಾನ್ಯ ನಾಗಮಾರಪಲ್ಲಿರವರ ಮಗನ ಬರ್ಬರ ಹತ್ಯೆ ಒಂದು ಕಡೆ. ಮತ್ತೊಂದು ಕಡೆ ರಾಜ್ಯದಲ್ಲಿಯೂ ಈ ರೀತಿಯಾದ ಹತ್ಯೆಗಳು ನಡೆಯುತ್ತಿವೆ. ಇಡೀ ರಾಜ್ಯದಲ್ಲಿ ಅನೇಕ ಕಡೆ ಈ ಜಮೀನಿನ ವಿವಾದಗಳಿಂದ ಕೊಲೆ ನಡಿದಿರತಕ್ಕಂಥದ್ದು, ಮತ್ತು ಬೆಂಗಳೂರಿನಲ್ಲಿ ಅನೇಕ ಕಡೆ ಕೊಲೆಗಳು ನಡೆದಿವೆ, ಮತ್ತು ಹೊರಗಡೆ ಕೂಡ ನಡೆಯುತ್ತಿದೆ. ಈ ವಿವಾದದ ಬಗ್ಗೆ ಸರ್ಕಾರಕ್ಕೂ ಗೊತ್ತಿದೆ, ಜಿಲ್ಲಾಡಳಿತಕ್ಕೆ ಇದು ಗೊತ್ತಿದೆ. ಮಾನ್ಯ ನಾಗಮಾರಪಲ್ಲಿಯವರ ಮಗನಿಗೂ ಬೇರೆಯವರಿಗೂ ವಿವಾದ ಇದೆ ಎಂದು ಸರ್ಕಾರಕ್ಕೂ ಗೊತ್ತಿದೆ. ಈ ವಿವಾದ ಗೊತ್ತಿದ್ದಾಗ ನ್ಯಾಯಾಲಯದ ತೀರ್ಪು ಬಂದ ತಕ್ಷಣ ಎಷ್ಟು ಜವಾಬ್ದಾರಿಯಿಂದ ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಜವಾಬ್ದಾರಿ ವಹಿಸಬೇಕಾಗಿತ್ತು. ಆ ಜವಾಬ್ದಾರಿಯಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ನಾನು ಪತ್ರಿಕೆಗಳ ವರದಿಗಳ ಮೂಲಕ ಮತ್ತು ಬೇರೆಯವರ ಮೂಲಕ ನೋಡಿದಾಗ ಇಷ್ಟು ಘಟನೆ ನಡೆಯುತ್ತಿದ್ದರೂ ಕೂಡ ಅವರು ಪಿಸ್ತೂಲನ್ನು ಹೊರಗೆ ತೆಗೆದಾಗ ಮತ್ತು ಬೇರೆಯವರು ಅವರಿಗೆ ಚಾಕುವಿನಿಂದ ತಿವಿದಾಗ

ಪೊಲೀಸರು ಸಂಪೂರ್ಣವಾಗಿ ಯಾವುದೇ ಕ್ರಿಯೆಯನ್ನು ಮಾಡದೆ ಗರಬಡಿದ ರೀತಿಯಲ್ಲಿ ನಿಂತಿದ್ದರು. ಪೊಲೀಸರು ಸಂಪೂರ್ಣವಾಗಿ ಗುಂಡುಹಾರಿಸುವಂಥ ವ್ಯವಸ್ಥೆಯಲ್ಲಿದ್ದರು. ಆದರೆ ನನಗನಿಸುತ್ತದೆ, ನಾನು ಪತ್ರಿಕೆಗಳ ವರದಿಗಳ ಆಧಾರದ ಮೇಲೆ ಮತ್ತು ಅವರು ಕೊಟ್ಟ ಹೇಳಿಕೆಯನ್ನು ನೋಡುವುದಾದರೆ ಉನ್ನತ ಅಧಿಕಾರಿಗಳ ಅನುಮತಿಯಿಲ್ಲದೆ ಏನು ಮಾಡುವುದಿಲ್ಲವೆನ್ನುವ ಪ್ರಶ್ನೆ ಅಲ್ಲಿ ನಿರ್ಧಾರವಾಗುವುದಾದರೆ ಇದು ನಿಜಕ್ಕೂ ನೇರವಾಗಿ ಪೊಲೀಸರ ವೈಫಲ್ಯ ಮತ್ತು ವಿಫಲತೆ ಎದ್ದು ನೇರವಾಗಿ ಕಾಣುತ್ತದೆ. ಇದನ್ನು ನಾವು ಸುತ್ತುಬಳಸಿ, ಇದನ್ನು ರಾಜಕೀಯವಾಗಿ ನಾವು CBI ನಿಂದ ಅಥವಾ COD ಯಿಂದ ತನಿಖೆ ಮಾಡಿಸಬೇಕೆ ಎನ್ನುವುದಕ್ಕಿಂತ ಹೆಚ್ಚಾಗಿ ಪಕ್ಷಾತೀತವಾಗಿ ನಾನು ಮಾನ್ಯ ಗೃಹ ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಉನ್ನತ ಮಟ್ಟದ ಸಮಗ್ರವಾದ ತನಿಖೆಯಾಗಬೇಕು ಇದು ಬಹಳ ಮುಖ್ಯ. ನಾನು COD ಯಲ್ಲಿರುವವರೆಲ್ಲರನ್ನು ತಿರಸ್ಕರಿಸುತ್ತೇನೆ ಎನ್ನತಕ್ಕಂಥ ಭಾವನೆ ಅಲ್ಲ. ಎಲ್ಲೊ ಒಂದು ಕಡೆ, ನಂಬಿಕೆಯ ಮೂಲಕ್ಕೋಸ್ಕರವಾಗಿ ತಾವು ಒಂದು ಉನ್ನತಮಟ್ಟದ ಅಥವಾ ಹೈಕೋರ್ಟಿನ ನ್ಯಾಯಾಧೀಶರಿಂದ ಸಮಗ್ರವಾದಂಥ ತನಿಖೆಗೆ, ಈಗ CBI ಅಥವಾ COD ಯಿಂದ ತನಿಖೆಯಾಗಬೇಕು ಎನ್ನುವುದು ಒಂದು ಕಡೆ, ಇದರಲ್ಲಿ ಯಾವ ಪ್ರಶ್ನೆ ಇರಲಿಲ್ಲ. ಈ ವೈಫಲ್ಯತೆ ಇಡೀ ರಾಜ್ಯದಲ್ಲಿ ಈಗ ನಡೆಯುತ್ತಿದೆ. ನಾಗಮಾರಪಲ್ಲಿಗೂ ಅದಕ್ಕೂ ಬಹಳ ದೊಡ್ಡ ದುರಂತವೆ. ನಾಳೆ ಶಾಸಕರುಗಳಿಗೂ ರಕ್ಷಣೆ ಇಲ್ಲ, ಇದು ಬೆಳೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಈ ಬೆಂಗಳೂರು ಒಂದು ವಿಚಿತ್ರವಾದ ರೀತಿಯಲ್ಲಿ ವ್ಯವಸ್ಥಿತವಾದ ಒಂದು ದುರಂತದಲ್ಲಿ ಹೋಗುತ್ತಿದೆ. ಎಲ್ಲಿಗೆ ತಲುಪುತ್ತೇವೆ, ಎಲ್ಲಿಗೆ ಹೋಗುತ್ತೇವೆ ಗೊತ್ತಿಲ್ಲ. ಬೆಂಗಳೂರು ತೀವ್ರವಾಗಿ 75–80 ಲಕ್ಷದಲ್ಲಿ ಜನಸಂಖ್ಯೆ ಬೆಳೆದಿದೆ. ಬೆಂಗಳೂರಿನಲ್ಲಿ ಜನಕ್ಕೆ ತಕ್ಕಂತೆ ಪೊಲೀಸರು ಇಲ್ಲ. ಈ ರಾಜ್ಯದಲ್ಲಿ ಜನರಿಗೆ ತಕ್ಕಷ್ಟು ಪೊಲೀಸರು ಇಲ್ಲ. ಪೊಲೀಸರ ಒಂದು ವ್ಯವಸ್ಥೆ ಸಮಗ್ರವಾಗಿ ಬದಲಾವಣೆಯಾಗಬೇಕಾಗುತ್ತದೆ. ನನಗೆ ಅನಿಸುತ್ತದೆ, ಇದನ್ನು ನಾನು ಜಾಸ್ತಿ ವಿಶ್ಲೇಷಣೆ ಮಾಡದಿದ್ದರು ನೇರವಾಗಿ ವಿಫಲತೆ ಎದ್ದು ಕಾಣುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಒಂದು ವಿಚಾರವನ್ನು ನೇರವಾಗಿ ಉಚ್ಚನ್ಯಾಯಾಲಯದ ನ್ಯಾಯಾಧೀಶರಿಂದ ಸಮಗ್ರವಾದ ತನಿಖೆ

ಮಾಡಿಸಬೇಕೆಂದು ಹೇಳಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಹಾಗೂ ಎಲ್ಲರೂ ಹೇಳಿದಂತೆ, ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬೀದರ್‌ಗೆ ಹೋಗಬೇಕಾಗಿತ್ತು, ಅದರಲ್ಲೇನು ಬೇರೆ ಮಾತು ಇಲ್ಲ, ಇದು ಬಹಳ ಗಂಭೀರವಾದ ಪರಿಸ್ಥಿತಿ, ಇದು ಏನು ಸಾಮಾನ್ಯವಾದುದು ಅಲ್ಲ. ಒಬ್ಬ ಮಂತ್ರಿಯಾಗಿದ್ದವರು, ಶಾಸಕರಾಗಿದ್ದವರು ಆ ಜಿಲ್ಲೆಯ ಒಬ್ಬ ಪ್ರಮುಖರು ಅವರ ಮಗನಿಗೆ ಈ ರೀತಿಯಾಗಿರುವಾಗ 3-4 ದೃಷ್ಟಿಯಿಂದ ಒಂದು ಸಂತಾಪ, ಇನ್ನೊಂದು ಈ ರೀತಿಯಾಗಿರುವುದಕ್ಕೆ ಹಾಗೂ ಮೂರನೆಯದಾಗಿ ಜಿಲ್ಲಾಡಳಿತ ವಿಫಲವಾಗಿರುವ ಬಗ್ಗೆ ಹೋಗಬೇಕಾಗಿರುವಂಥದ್ದು ಮಾಡಬೇಕಾಗಿತ್ತು. ಇಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ, ಆದ್ದರಿಂದ ಉಚ್ಚನ್ಯಾಯಾಲಯದ ನ್ಯಾಯಾಧೀಶರಿಂದ ಸಮಗ್ರವಾಗಿ ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಬೀದರ್ ಘಟನೆ ನಡೆದಿರುವ ಬಗ್ಗೆ ಅಲ್ಲಿಯ ಜಿಲ್ಲಾಡಳಿತ ಯಂತ್ರವೇ ನೇರವಾಗಿ ಹೊಣೆಯಾಗಿದೆ. ಇದಕ್ಕೆ ಬೇರೆ ಯಾರೂ ಅಲ್ಲ. ಏಕೆಂದರೆ ಈ ಭೂವಿವಾದಕ್ಕೆ ಸಂಬಂಧಪಟ್ಟಂತೆ ನಡೆಂತಹ ಗಲಭೆಯಾಗಿದೆ. ಈ ಭೂ ವಿವಾದ ಅಲ್ಲಿ ನಿನ್ನೆ ಮೊನ್ನೆಯಿಂದ ಇಲ್ಲ. ಅಲ್ಲಿ ಇದು ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ನಡೆಯುತ್ತದೆಂದು ಗೊತ್ತಿದ್ದರೂ ಕೂಡ ಅಲ್ಲಿ ಜಿಲ್ಲಾ ಆಡಳಿತವು ಸಂಪೂರ್ಣವಾಗಿ ವಿಫಲವಾಗಿದೆ. ಇವರು ಅಲ್ಲಿರುವಂತಹ ಜಿಲ್ಲಾಧಿಕಾರಿಗಳನ್ನು ಹೋಗಿ ಕೇಳಿರುವಂತಹ ಸಂದರ್ಭದಲ್ಲಿ ಇವರು ಅಲ್ಲಿ ಅನುಮತಿಯನ್ನು ಕೊಡಬಾರದಾಗಿತ್ತು, ಏನು ಸಹಮತದಿಂದ ಹೇಳಿಕೆಯನ್ನು ಕೊಟ್ಟಿದ್ದಾರೆ ಟ್ರಾಕ್ಟರ್‌ನಲ್ಲಿ ಜನರನ್ನು ತುಂಬಿಕೊಂಡು ದೊಣ್ಣೆಯನ್ನು ತೆಗೆದುಕೊಂಡು ಗುಂಪು ಕಟ್ಟಿಕೊಂಡು ನಿಂತಿದ್ದರೆಂದು ಹೇಳಿದ್ದಾರೆ. ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದವರು ಕೂಡ ಪೊಲೀಸ್‌ನವರೆ ಆಗಿದ್ದಾರೆ. ಅ ಸ್ಥಳಕ್ಕೆ ಬರದೆ ಇರುವ ಹಾಗೆ ಬಂಧನ ಮಾಡಬಹುದಾಗಿತ್ತು, ಅರೆಸ್ಟ್ ಮಾಡಬಹುದಾಗಿತ್ತು. ಯಾರು ಪಿಸ್ತೂಲ್ ಅಥವಾ ಮಾರಕವಾದ ಆಯುಧಗಳನ್ನು ಹಿಡಿದಿದ್ದರು ಪೊಲೀಸ್‌ನವರು ಅವರನ್ನೆ ಅರೆಸ್ಟ್ ಮಾಡಬಹುದಾಗಿತ್ತು. ಈ ಘಟನೆ ನಡೆಯುವಾಗ ಅವರ ಆಯುಧಗಳನ್ನು ಸೀಜ್ ಮಾಡಬಹುದಾಗಿತ್ತು, ಅವರನ್ನು

ಅರೆಸ್ಟ್ ಮಾಡಬಹುದಾಗಿತ್ತು, ಆಗ ಈ ಘಟನೆಯು ನಡೆಯುತ್ತಿರಲಿಲ್ಲ. ಅಲ್ಲಿ ಅನಧಿಕೃತವಾದ ಶಸ್ತ್ರಾಸ್ತ್ರಗಳನ್ನು ಹೊಂದಿರುತ್ತೀರೆನ್ನುವ ಕಾರಣಕ್ಕೋಸ್ಕರ ಅವರನ್ನು ಅಲ್ಲಿಯೇ ಸ್ಥಳದಲ್ಲಿಯೇ ಅರೆಸ್ಟ್ ಮಾಡಿ ಆಯುಧಗಳನ್ನು ಸೀಜ್ ಮಾಡಿದ್ದರೆ, ಈ ದುರ್ಘಟನೆಯು ನಡೆಯುತ್ತಿರಲಿಲ್ಲ. ಎರಡನೆಯದಾಗಿ ಹೇಳುವುದಾದರೆ ಬೀದರ್ ಜಿಲ್ಲೆಯ ಪೊಲೀಸ್ ಇಲಾಖೆ ಏನಾಗಿದೆ ಎಂದರೆ, ಈ 5–6 ತಿಂಗಳಲ್ಲಿ ನಾನು 2–3 ಸಲ ಬೀದರ್ ಜಿಲ್ಲೆಗೆ ಹೋಗಿದ್ದೇನೆ. ಚಿಂತಾ ಗ್ರಾಮದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಂತಹ ಸಂದರ್ಭದಲ್ಲಿ, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದಂತಹ ಸಂದರ್ಭದಲ್ಲಿ ಬೀದರ್ ಜಿಲ್ಲೆಯಲ್ಲಿರುವ ಪೊಲೀಸ್‌ನವರು ನಡೆದುಕೊಂಡಂತಹ ವರ್ತನೆ ಏನಿದೆ ಎಂದರೆ ಅತ್ಯಂತ ಬೇಜವಾಬ್ದಾರಿಯಿಂದ ಹೊಣೆಗೇಡಿತನದಿಂದ ನಡೆದುಕೊಂಡಿದ್ದಾರೆ. ಆ ಹೊಣೆಗೇಡಿತನ ಹೊಂದಿರುವ ಪೊಲೀಸ್‌ನವರನ್ನು ಹಾಗೂ ಬೇಜವಾಬ್ದಾರಿ ಹೊಂದಿರುವಂತಹ ಪೊಲೀಸ್ ಅಧಿಕಾರಿಗಳನ್ನು ಈ ಸರ್ಕಾರ ನೋಡುತ್ತಾ ಕುಳಿತಿದೆ ಎಂದರೆ, ಈ ಸರ್ಕಾರ ಸಾಮೀಲಾಗಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ಇಡೀ ರಾಜ್ಯದಲ್ಲಿ ಯಾವ ರೀತಿಯಾಗಿ ಭೂವ್ಯವಹಾರಗಳಲ್ಲಿ ವ್ಯವಹಾರವನ್ನು ಮಾಡುತ್ತಾರೆಂದರೆ, ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಕ್ಷೇತ್ರದ ಒಬ್ಬ ಹುಡುಗ ಬೆಂಗಳೂರಿನ ಜಕ್ಕೂರಿನಲ್ಲಿ ಒಂದು ಜಾಗವನ್ನು ಅವರ ತಾತನ ಕಾಲದಿಂದಲೂ ಕೂಡ ಇಟ್ಟುಕೊಂಡಿದ್ದಾನೆ. ಆ ಜಾಗವು ಯಾರೋ ಒಬ್ಬ ಭೂಮಾಫಿಯಾದವನಿಗೆ ಬೇಕಂತೆ, ಅವನನ್ನು ಯಲಹಂಕ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಕರೆಸಿ ಹೇಳುತ್ತಾರಂತೆ, ಏ, ನೀನು ರಾಜಿ ಮಾಡಿಕೊಂಡು ಭೂಮಿಯನ್ನು ಅವನಿಗೆ ಕೊಟ್ಟುಬಿಡು, ಇಲ್ಲವೆಂದರೆ ನಿನ್ನ ಪ್ರಾಣ ಹೋಗುತ್ತದೆ, ನಿನಗೆ ಅವರು ಬೇರೆ ಕಡೆ ಜಮೀನು ತೆಗೆದುಕೊಡುತ್ತಾರೆಂದು ಅವನನ್ನು ಕರೆಸಿಬಿಟ್ಟು ಹೇಳುತ್ತಾರೆ. ರಾಜ್ಯದಲ್ಲಿ ಪೊಲೀಸ್‌ನವರು ಏನಾಗಿದ್ದಾರೆಂದು ನೀವು ಈ ಬಗ್ಗೆ ಊಹೆ ಮಾಡಿ. ಈ ಪೊಲೀಸ್‌ನವರು ಯಾರ ಜೊತೆ ಕೈಜೋಡಿಸಿದ್ದಾರೆಂದು ಗೊತ್ತಾಗುತ್ತದೆ. ಜಮೀನಿನ ಮಾಲೀಕರನ್ನು ಪೊಲೀಸ್ ಸ್ಟೇಷನ್‌ಗೆ ಕರೆಸಿ ನೀನು ಜಮೀನನ್ನು ಕೊಡದೆ ಹೋದರೆ ನಿನ್ನ ಕೊಲೆಯಾಗುತ್ತದೆ ಎಂಬ ಸ್ಥಿತಿಗೆ ಪೊಲೀಸ್‌ನವರು ಬಂದರೆ ಈ ರಾಜ್ಯದಲ್ಲಿ ಏನು ಉಳಿದಿದೆ ಎಂದು ಮಾನ್ಯ

ಗೃಹಮಂತ್ರಿಗಳು ಹೇಳಬೇಕು. ಯಾವ ರೀತಿಯಾಗಿ ಪೊಲೀಸ್‌ನವರು ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಬೇಕು. ಇದೇ ಭೂವ್ಯವಹಾರದಲ್ಲಿ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರ ಮಗ ಕೊಲೆಯಾಗಿರುವುದು. ಇಡೀ ಆಡಳಿತ ಯಂತ್ರಾಂಗ ಬೀದರ್‌ನಲ್ಲಿ ಸಂಪೂರ್ಣವಾಗಿ ಸ್ಥಬ್ದವಾಗಿದೆ. ನನಗೆ ಗೊತ್ತಿರುವಂಥ ಮಾಹಿತಿ ಪ್ರಕಾರ, ಅಲ್ಲಿಯ S.P. ಹಾಗೂ D.C.,ಯವರು ಗಂಡಹೆಂಡತಿಯೆಂದು ಗೊತ್ತಾಗಿದೆ. ಇಡೀ ಜಿಲ್ಲಾಡಳಿತವನ್ನು ಈಗ ಗಂಡ ಹೆಂಡತಿಯವರ ಕೈಗೆ ಕೊಟ್ಟು ಬಿಟ್ಟರೆ ಇಡೀ ಜಿಲ್ಲೆಯ ಆಡಳಿತವನ್ನು ಅವ್ಯವಸ್ಥೆ ಮಾಡಿದರೆ ಇದಕ್ಕೆ ನೇರವಾಗಿ ಸರ್ಕಾರವೇ ಹೊಣೆಯಾಗಿರುತ್ತದೆ. ಇದಕ್ಕೆ S.P. ಹಾಗೂ D.C.ಯವರು ಹೊಣೆಯಲ್ಲ, ಇವರೇ ಹೊಣೆಯಾಗಿದ್ದಾರೆ. ಇವರ ಈ ಬೇಜವಾಬ್ದಾರಿತನದಿಂದ ಇಡೀ ರಾಜ್ಯದಲ್ಲಿ ಇವತ್ತು ಕೊಲೆಗಳು ನಡೆಯುತ್ತಿದೆ. ಬೆಂಗಳೂರಿನಲ್ಲಿ ಎಷ್ಟು ಕೊಲೆಗಳು ನಡೆದವು ಆ ಎಲ್ಲಾ ಕೊಲೆಗಳು ಭೂಮಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ನಡೆದಂತಹ ಕೊಲೆಗಳಾಗಿರುತ್ತವೆ. ಬೆಂಗಳೂರಿನಲ್ಲಿ ನಡೆದಂತಹ ರೌಡಿಗಳ ಹೆಸರಿನಲ್ಲಿ encounter ಹೆಸರಿನಲ್ಲಿ ಪಕ್ಕದ ಮನೆಯವರನ್ನು ಹಾಗೂ ಭೂವ್ಯವಹಾರದಲ್ಲಿ ಲಾಯರ್‌ಗಳನ್ನು ಸಹ ಕೊಲೆ ಮಾಡಿದರು. ಈ ಭೂವ್ಯವಹಾರದಲ್ಲಿ ಇವತ್ತು ಪೊಲೀಸ್‌ನವರು ನಡೆದುಕೊಳ್ಳುವಂತಹ ವಿಧಾನ ಏನಿದೆ ಇದು ಭೂಮಾಫಿಯಕ್ಕೆ ಸಹಾಯಕವಾಗಿ ಈ ಕರ್ನಾಟಕ ರಾಜ್ಯದ ಪೊಲೀಸ್‌ರು ನಡೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಈ ದುರ್ಘಟನೆಗಳು ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಸಮಗ್ರವಾದ ತನಿಖೆಯನ್ನು ಮಾಡಬೇಕು ಹಾಗೂ ಸರಿಯಾದಂತಹ ನಿಲುವನ್ನು ತೆಗೆದುಕೊಳ್ಳದೆ ಹೋದರೆ ಇನ್ನು ನೂರಾರು ಜನ ಮುಗ್ಧರು ಪ್ರಾಣವನ್ನು ಇವತ್ತು ಕಳೆದುಕೊಳ್ಳಬೇಕಾಗುತ್ತದೆ. ಇಡೀ ಆಡಳಿತ ಯಂತ್ರಾಂಗ, ಒಂದು ಕಡೆ ಭೂಮಾಫಿಯ, ಇನ್ನೊಂದು ಕಡೆ ಗಣಿಮಾಲೀಕರು, ಗಣಿಮಾಫಿಯ ಮತ್ತು ಭೂಮಾಫಿಯ ಜೊತೆ ಇವತ್ತು ಆಡಳಿತ ಯಂತ್ರಾಂಗ ರಾಜ್ಯದಲ್ಲಿ ಇವತ್ತು ಸಾಮೀಲಾಗಿದೆ. ಆದ್ದರಿಂದ ಇದನ್ನು ತಪ್ಪಿಸದೆ ಹೋದರೆ ಈ ದುರಂತವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಇದಕ್ಕೆ ಉನ್ನತವಾದಂತಹ ನ್ಯಾಯಾಂಗ ತನಿಖೆಯನ್ನು ಮಾಡತಕ್ಕಂಥದ್ದು ಒಳ್ಳೆಯದು ಎಂದು ನನ್ನ ಅಭಿಪ್ರಾಯವಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್): ಮಾನ್ಯ ಅಧ್ಯಕ್ಷರೆ, ಬೀದರ್‌ನಲ್ಲಿ ಇದು ಒಂದು ಬಹಳ ದುರ್ದೈವದ ಘಟನೆ ನಡೆದಿದೆ. ಈ ಘಟನೆಗೆ ಯಾರು ಕಾರಣಕರ್ತರು ಎನ್ನುವುದರ ಬಗ್ಗೆಯೂ ಕೂಡ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಈಗಾಗಲೆ ಅನೇಕ ಹಿರಿಯ ಮುಖಂಡರು ಇದರ ಬಗ್ಗೆ ಹೇಳಿದ್ದಾರೆ. ನಾನು ಕೂಡ ಬೀದರ್ ಜಿಲ್ಲೆಗೆ ಭೇಟಿಯನ್ನು ಕೊಟ್ಟಿದ್ದೆ, ಔರಾದ್ ತಾಲ್ಲೂಕಿನಲ್ಲಿರುವ ಚಿಂತಾಕಿ ಎಂಬ ಹಳ್ಳಿಗೂ ಕೂಡ ಭೇಟಿಯನ್ನು ಕೊಟ್ಟು ಅಲ್ಲಿ ಕೆಲವು ಮಾಹಿತಿಯು ನಮಗೆ ಸಿಕ್ಕಿದೆ. ಅಲ್ಲಿ ವಿಶೇಷವಾಗಿ ನಮ್ಮ Additional DGP ಶಂಕರ್‌ಬಿದರಿಯವರು ಬಂದಿದ್ದರು, ಮತ್ತು DIGಯವರು ಕೂಡ ಇದ್ದರು. ಅಲ್ಲಿ ಏನು ವಾತಾವರಣವಿದೆ, ಏತಕ್ಕಾಗಿ ಈ ಘಟನೆಯು ನಡೆಯಿತು ಎನ್ನುವುದರ ಬಗ್ಗೆ ಬಹುಶ: ಗುಪ್ತ ಮಾಹಿತಿಯು ಅವರಿಗೆ ಇರಬಹುದು. ಇಲ್ಲಿ ಏನೇ ಹೇಳಿಕೆಯನ್ನು ಹೇಳಿದರೂ ಕೂಡ ಅಲ್ಲಿ ನಡೆದಂತಹ ಘಟನೆಯ ಬಗ್ಗೆ ಮತ್ತು ಅದರ ಹಿನ್ನೆಲೆಯ ಬಗ್ಗೆ ಮತ್ತು ಪೊಲೀಸರ ವೈಫಲ್ಯತೆಯ ಬಗ್ಗೆ ಅವರಿಗೆ ಮಾಹಿತಿ ಇದೆಯೆಂದು ನನ್ನ ಭಾವನೆ. ಇವತ್ತು 45 ವರ್ಷದ ಯುವಕ, ನನಗೆ ಇರತಕ್ಕಂತಹ ಮಾಹಿತಿಯ ಪ್ರಕಾರ ಇದು ಭೂಕಬಳಿಕೆಯ ಕೇಸು ಕೂಡ ಅಲ್ಲ, ಯಾರಾದರೂ ಅಲ್ಲಿರತಕ್ಕಂತಹ ಡಾಬಾದ ಮಾಲೀಕರಿಗೆ ಹೊಡೆಯಬೇಕೆಂಬ ಉದ್ದೇಶದಿಂದ ಹೋದಂತದ್ದು ಕೂಡ ಅಲ್ಲ. ಆದರೆ ಆ ಒಂದು Classic Dhabaದ ಮಾಲೀಕರು ಎಂದು ಹೇಳುವವರು ಆ ಜಮೀನಿನ ಮಾಲೀಕರೆಂದು ಹೇಳಿ, ಅವರು ಏನು ಹೇಳಿಕೊಳ್ಳುತ್ತಿದ್ದಾರೆ, ಈ ಜಮೀನು ಈ ಹಿಂದೆ ಒಬ್ಬ Air Force Officer ರವರ ಜಮೀನು ಆಗಿತ್ತು. ಆ 3 ಎಕರೆಯಲ್ಲಿ ಅವರು plotಗಳನ್ನು ಹಾಕಿ ಸುಮಾರು 40 ಜನರಿಗೆ 40x60ರ ಸೈಟ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಡಾಬಾದವರು ಬಹುಶ: ಇವರು ಒಂದು ಅಥವಾ ಎರಡು ತೆಗೆದುಕೊಂಡಿದ್ದಾರೋ ಏನೋ ಗೊತ್ತಿಲ್ಲ. ಅಥವಾ ಸಂಪೂರ್ಣ ಎರಡನೇ ಸಲ ಕಾಗದ ಪತ್ರಗಳನ್ನು ತಯಾರಿಸಿ ಬರೆಸಿಕೊಂಡಿದ್ದಾರೋ ಗೊತ್ತಿಲ್ಲ. ಆದರೆ 40x60 ಸೈಟ್‌ಗಳನ್ನು ತೆಗೆದುಕೊಂಡ 40 ಜನರು ಕೂಡ ಇದರ ಬಗ್ಗೆ Munsif Courtನಲ್ಲಿಯೂ ಕೂಡ ಅವರ ಪರವಾಗಿಯೇ ಆಗಿದೆ. Civil Courtನಲ್ಲಿಯೂ ಕೂಡ appealನಲ್ಲಿ ಅವರ ಪರವಾಗಿದೆ. ಆಗಾಗ ಈ 40 ಜನರು ಸೇರಿಕೊಂಡು ನಮ್ಮ plotಗಳನ್ನು ನಮಗೆ ಕೊಡಿ ಎಂದು ಹೇಳಿ ಕೇಳಿಕೊಳ್ಳಬೇಕೆಂದು ಅಲ್ಲಿಗೆ

ಹೋದಾಗ, ಇದರ ಬಗ್ಗೆ ಮಾಹಿತಿಯನ್ನು ಢಾಬಾದ ಮಾಲೀಕರಿಗೆ ಗೊತ್ತಿದ್ದು ಹೀಗೆ 30–40 ಜನರು ನನ್ನ ಹತ್ತಿರ ಬರಬಹುದು ಅದಕ್ಕಾಗಿ ನನ್ನ ಜೀವಕ್ಕೆ ಅಪಾಯವಿದೆ, ಅದಕ್ಕಾಗಿ ದಯವಿಟ್ಟು ನೀವು ನಮಗೆ ರಕ್ಷಣೆ ಕೊಡಬೇಕೆಂದು ಹೇಳಿ ಅರ್ಜಿಯನ್ನು Police Stationಗೆ ಕೊಟ್ಟಿದ್ದರು ಎಂಬ ಬಗ್ಗೆ ಮಾಹಿತಿ ಇದೆ, ಇದರ ಬಗ್ಗೆ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಅಂದರೆ ಅವರು ಅರ್ಜಿಯನ್ನು Police Stationಗೆ ಮೊದಲೇ ಬರೆದ ಮೇಲೆ, ಅಲ್ಲಿಯ ಪೊಲೀಸರು ಕೂಡ ಅರ್ಜಿಯ ಆಧಾರದ ಮೇಲೆ ಢಾಬಾದ ಹತ್ತಿರ ಬಂದು ನಿಂತ ಮೇಲೆ ಅವರ ಸಮ್ಮುಖದಲ್ಲಿ ಈ ಘಟನೆಯು ನಡೆಯಬೇಕಾದರೆ ಇದರಲ್ಲಿ ನಾವು ಯಾರ ವೈಫಲ್ಯ ಎಂದು ಹೇಳಬೇಕು? ಏನು ಪೊಲೀಸರ ವೈಫಲ್ಯವೋ? ಅಥವಾ ಅಲ್ಲಿಯ S.P.ಯವರ instruction ಹಾಗೆ ಇತ್ತೋ ಅಥವಾ ಅಲ್ಲಿಯ ಆಡಳಿತ ಇದೇ ರೀತಿಯಾಗಿ ನಡೆಯುತ್ತಿದೆಯೋ, ಎನ್ನುವುದು ಗೊತ್ತಾಗುತ್ತಿಲ್ಲ. ಈ ಹಿಂದೆಯೂ ಕೂಡ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಗೃಹಸಚಿವರಿಗೂ ಭೇಟಿಯಾಗಿ ಹೇಳಿದ್ದೇವೆ. ಯಾವಾಗ ಅಲ್ಲಿ Dr. Ambedkarರವರ ಪ್ರತಿಮೆಗೆ ಅಪಮಾನವಾಗಿದೆ ಎಂದು ಹೇಳಿ ಏನು ಗಲಾಟೆಯು ನಡೆಯಿತು, ಆ ಗಲಾಟೆಯು ನಡೆದಾಗ S.P.ಯವರ order ಮೇಲೆ ಯದ್ವಾತದ್ವಾ ಮುದುಕರಿಗೆ ಹಾಗೂ ಮಕ್ಕಳಿಗೆ ಹೊಡೆದು ಜೈಲಿಗೆ ಹಾಕಿ ಕೇಸನ್ನು ಹಾಕಿದಾರೆ. ಆ ಕೇಸಿನ ಬಗ್ಗೆಯೂ ಕೂಡ ನಾವು ಈ ರೀತಿಯಾಗಿ ಅನ್ಯಾಯವನ್ನು ಮಾಡಿದ್ದಾರೆ, ಅಲ್ಲಿಯೇ ಇದ್ದು ಅದರಲ್ಲಿ involve ಇಲ್ಲದವರಾದ ಮಕ್ಕಳು ಮತ್ತು ಮುದುಕರ ಮೇಲೆ ಕೇಸ್ ಮಾಡಿದ್ದಾರೆ. ತಾವು ಆ ಟಿ.ವಿ.ಯನ್ನು ನೋಡಿದರೆ ಗೊತ್ತಾಗುತ್ತದೆಂದು ಹೇಳಿ ನಾವು ಅವರಿಗೂ ಕೂಡ ಹೇಳಿದ್ದೇವೆ, ಅವತ್ತಿನ D.C.ಯವರಿಗೂ ಕೂಡ ಹೇಳಿದ್ದೇವೆ. ಅವತ್ತಿನ Law & Order maintain ಮಾಡುತ್ತಿದ್ದ ಶಂಕರ್ ಬಿದರಿಯವರಿಗೂ ಕೂಡ ಹೇಳಿದ್ದೇವೆ. ಅವರಿಗೆ ನಾವು ಈ ಮಾತನ್ನು ಹೇಳಿದರೂ ಕೂಡ ಅವರು inefficient, ಮತ್ತು ಇಡೀ ಜಗತ್ತಿನಲ್ಲಿ ಇದೇ ಸದನದಲ್ಲಿ ನಾವು ಈ ಬಗ್ಗೆ ಹೇಳಿದ್ದೇವೆ. ಏನು ಗಂಡ ಹೆಂಡತಿ S.P. ಮತ್ತು D.C.ಆಗಿ ಒಂದೇ ಕಡೆ ಇರುವಂತಹದ್ದು ಎಲ್ಲಿಯೂ ಕೂಡ ಮಾಡಿಲ್ಲ, ದಯವಿಟ್ಟು ನೀವು ಏತಕ್ಕಾಗಿ ಈ ಕೆಲಸವನ್ನು ಮಾಡುತ್ತಿಲ್ಲ, ಅವರಿಬ್ಬರು ಒಂದೇ ಕಡೆ ಇರುವುದರಿಂದ ಅನೇಕ ಕೆಲಸದಲ್ಲಿ ಮುಜುಗರವಾಗುತ್ತಿದೆ. ಅದಕ್ಕಾಗಿ ಅವರನ್ನು ತಕ್ಷಣ ಬೇರೆಕಡೆ

ವರ್ಗಾಯಿಸಬೇಕು ಅಥವಾ S.P.ಯವರನ್ನಾದರೂ ಬೇರೆ ಕಡೆ ಹಾಕಬೇಕೆಂದು ಆಗ ನಾವು ಅವರನ್ನು ಕೇಳಿಕೊಂಡೆವು. S.P.ಯವರಿಗೆ ಅಲ್ಲಿ ನಿಭಾಯಿಸುವುದಕ್ಕೆ ಆಗುವುದಿಲ್ಲ. ಪ್ರತಿಯೊಂದು ಮಾತಿಗೂ ಕೂಡ ಲಾಠಿಚಾರ್ಜು, ಇಲ್ಲ ಅವರಿಗೆ ಬೇಕಾದವರಿಗೆ favour ಮಾಡುವಂತಹ ಪ್ರವೃತ್ತಿ ಆ ಹೆಣ್ಣು ಮಗಳಿಗೆ ಏತಕ್ಕಾಗಿ ಬೆಳೆಯಿತೋ ಗೊತ್ತಿಲ್ಲ. ಏಕೆಂದರೆ ನಾನು Home Minister ಆಗಿದ್ದಾಗ ಅವರು A.C.P.ಯಾಗಿ ಗುಲ್ಬರ್ಗಾದಲ್ಲಿದ್ದರು. ಅವರು ದಾವಣಗೆರೆಯಲ್ಲಿದ್ದರು, ಆದರೆ ನಾನು ಕೇಳುವುದು ಬೇರೆ. ನಿಮ್ಮವರನ್ನು ಕೇಳಿಕೊಳ್ಳಿ. ಒಂದು ಮಗುವಿನ birthday ಆದರೆ ಎಲ್ಲಾ ಲೀಡರ್ಸ್ ಅಟೆಂಡ್ ಆಗಬೇಕು. ಅಥವಾ ವ್ಯಾಜ್ಯ ಇರತಕ್ಕಂತಹ ಅನೇಕ ಜನರನ್ನು ಕೂಡ ಅವರನ್ನು ಕರೆಸಿ ಒಂದು ದೊಡ್ಡ ಪಾರ್ಟಿ, ಎಲ್ಲಿ S.P.ಗಳು ಮತ್ತು D.C.ಗಳು ಚಿಕ್ಕ ಮಕ್ಕಳ birthday celebrate ಮಾಡುವುದಕ್ಕೆ Politicians, Ministers, ಎಲ್ಲರನ್ನು ಕರೆಸಿ ರಾತ್ರಿ ಬೆಳಿಗ್ಗೆ ಪಾರ್ಟಿಯನ್ನು ಮಾಡಿ ಕುಣಿಯುವಂತಹದ್ದು. ಈ ರೀತಿಯಾಗಿ ನಡೆಯುವುದನ್ನು ನಾನು ಎಲ್ಲಿಯೂ ಕೂಡ ನೋಡಿರುವುದಿಲ್ಲ. ಯಾವುದಾದರೂ ಒಂದು ಲಗ್ನ ಕಾರ್ಯಕ್ರಮ ಬಹಳ important ಇದ್ದರೆ invitation ಕೊಡುತ್ತಾರೆ ಅವರುಗಳು ಹೋಗುತ್ತಾರೆ ಆ ಮಾತು ಬೇರೆ. ಆದರೆ ಇಲ್ಲಿ ಪ್ರತಿಯೊಂದಕ್ಕೂ ಹಣವನ್ನು expect ಮಾಡುತ್ತಾರೆ. ಅದರಿಂದಾಗಿ ಏನಾಗಿದೆ ಎಂದರೆ ಆ ಜಿಲ್ಲೆಯಲ್ಲಿ ಪೊಲೀಸರು corrupt, ಎಲ್ಲಿ ಹಣ ಸಿಗುತ್ತದೆ, ಅಂತಹ ಕಡೆಗಳಲ್ಲಿ ಕುಮ್ಮಕ್ಕನ್ನು ಕೊಡುವುದು, ಬೇರೆ ಕಡೆ ಎಂದರೆ, ರಕ್ಷಣೆಯಿಲ್ಲದೆ ಜನರು ಸಾಯುತ್ತಾರೆ. ಇವತ್ತು ವಿಜಯ್‌ಕುಮಾರ್, ಧಾಬಾಕ್ಕೆ ಹೋಗಿದ್ದರು, ಅದರಲ್ಲಿ ಅವನದ್ದು 40x60 ಸೈಟ್ ಇದೆ. ಮತ್ತೇ ಅನೇಕಸಾರಿ ಏನಾಗುತ್ತದೆಂದರೆ, ಯಾರೋ ಒಬ್ಬ important ವ್ಯಕ್ತಿ ಇದ್ದರೆ ಆ ವ್ಯಕ್ತಿಯ ರಕ್ಷಣೆಯಲ್ಲಿ ಬೇರೆವರೂ ಕೂಡ ಅವರನ್ನು ಮುಂದು ಮಾಡುತ್ತಾರೆ. ಇವತ್ತು ಕೆಲವು ಸಲ ಏನಾಗುತ್ತದೆಂದರೆ, ರಾಜಕಾರಣಿಗಳ ಮಕ್ಕಳೇ ಇರಬಹುದು, ಮುಖಂಡರ ಮಕ್ಕಳೇ ಇರಬಹುದು, ಮತ್ತೆ ಯಾರೋ important leaders ಇರಬಹುದು. ಅವರಿಗೆ ರಕ್ಷಣೆಗೋಸ್ಕರ ನೀವು ಮುಂದೆ ಹೋದರೆ ನಮ್ಮದು ಸಿಗುತ್ತದೆ, ನೀವು ಸ್ವಲ್ಪ ಮಾತನಾಡಿ ಎಂದು ಹೇಳುವುದು ಸಹಜ. ಇದು ಅನೇಕ ಹಳ್ಳಿಗಳಲ್ಲಿ ,ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲೆಗಳಲ್ಲಿಯೂ ನಡೆಯುತ್ತದೆ. ಆ ರೀತಿಯಾಗಿ ಇವನನ್ನು ಮುಂದೆ ಮಾಡಿ, ಅವರ ರಕ್ಷಣೆಯಲ್ಲಿ ನಮಗೂ

ಕೂಡ ಸಿಗುತ್ತದೆಂದು ಹೇಳಿ ಅಲ್ಲಿಯ ಡಾಕ್ಟರ್ಸ್ ಮತ್ತು ಇಂಜಿನಿಯರ್ಸ್‌ಗಳು, ವ್ಯಾಪಾರಸ್ಥರು ಮತ್ತು ಸಣ್ಣಪುಟ್ಟ ರೈತರು ಅವರೆಲ್ಲರೂ ಕೂಡ ಪರ್ಚೆಸ್ ಮಾಡಿರುವವರಾಗಿದ್ದಾರೆ. ಅವರೇ ಮೀಟಿಂಗ್ ಮಾಡಿ ಎರಡು ಕೋರ್ಟಿನಲ್ಲಿಯೂ ಕೂಡ ನಮ್ಮ ಪರವಾಗಿದೆ ಅದಕ್ಕಾಗಿ ಹೋಗಿ ಕೇಳೋಣವೆಂದು ಹೋಗಿದ್ದಾರೆ, ಇವೆಲ್ಲವೂ ಗೊತ್ತಿದೆ, ಈ ವ್ಯಾಜ್ಯದ ಬಗ್ಗೆ S.P. ಹಾಗೂ D.C.ಯವರಿಗೆ ಗೊತ್ತಿಲ್ಲವೆಂದಲ್ಲ, ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಗೊತ್ತಿಲ್ಲವೆಂದಲ್ಲ. ಏನಾಗಿದೆ ಎಂದರೆ, ಇವೆಲ್ಲವೂ ಹೋಗಿ ಸಣ್ಣಪುಟ್ಟ constableಗಳ ಮೇಲೆ A.S.I.ಗಳ ಮೇಲೆ ಆಗಿದೆ. ಏತಕ್ಕಾಗಿ ನೀವು immediate ಆಗಿ S.P.ಯವರನ್ನು dismiss ಮಾಡಬಾರದು, suspend ಮಾಡಬಾರದು? ಯಾರ ವಿರುದ್ಧ ಸುಮಾರು 3–4 ತಿಂಗಳಿಂದ ಅಲ್ಲಿ ಬೀದರ್‌ನಲ್ಲಿ agitation ನಡೆದರೆ, ಈ ಸದನದಲ್ಲಿಯೂ ಕೂಡ ಆ ಮಾತನ್ನು ಕೇಳಿದ್ದೇವೆ. ನೀವು ಏತಕ್ಕಾಗಿ ರಕ್ಷಣೆಯನ್ನು ಕೊಡುತ್ತಿದ್ದೀರಿ. ಮತ್ತು ಇಲ್ಲಿಯ ಮುಖಂಡರು ಕೂಡ ಕೃಷ್ಣದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಅಲ್ಲಿ ಮಾನ್ಯ ರೇವಣ್ಣನವರು ಕೂಡ ಅಲ್ಲಿದ್ದರು ಎಂದು ಕೇಳಿದ್ದೆ. ಬೀದರ್‌ನ ಎಲ್ಲಾ ನಾಯಕರು ಕೂಡ ಭೇಟಿ ಮಾಡಿದಾಗ ಅವರಿಗೆ ಕೊಟ್ಟಂತಹ ಆಶ್ವಾಸನೆ ಏನೆಂದರೆ, ಈ ಘಟನೆಯು ನಡೆಯುವುದಕ್ಕಿಂತ ಮುಂಚೆ, 9ನೇ ತಾರೀಖು ನಾವು ತೆಗೆದು ಹಾಕುತ್ತೇವೆಂದು ಹೇಳಿದ್ದರು. Dr.B.R.Ambedkar statueಗೆ ಅವಮಾನವಾದಾಗ ಅಲ್ಲಿ ಏನು ನಡೆಯಿತು ಅಮಾನುಷವಾಗಿ ಜನರಿಗೆ ಹೊಡೆದುಬಡಿದು ಅವರ ಮೇಲೆ case ಗಳನ್ನು ಹಾಕಿ, ಇವತ್ತಿನ ದಿವಸ ಅವರು ಕೇಳುವಂತಹ ಏನು ಪ್ರಯತ್ನ ಆಗಿತ್ತೋ, ಆ ಸಂದರ್ಭದಲ್ಲಿ ಬೀದರ್‌ಗೆ delegation ಬಂದಾಗ, ಅಲ್ಲಿಯ ಸಚಿವರು ಕೂಡ ಅದರಲ್ಲಿ ಇದ್ದು ಅದನ್ನು represent ಮಾಡಿದಾಗ ಸರ್ಕಾರದವರು ಮಾತು ಕೊಟ್ಟ ತಕ್ಷಣ ನಾವು ಇಲ್ಲಿಂದ ತೆಗೆದು ಹಾಕುತ್ತೇವೆ ಅಂತಹವರನ್ನು ಇಡುವುದಿಲ್ಲವೆಂದು ಹೇಳಿದ್ದರು. ಆದರೂ ಯಾವ ಮುಲಾಜಿಗೆ, ಯಾವುದಕ್ಕೋಸ್ಕರ ಆ ಎಸ್.ಪಿ.ಯವರನ್ನೆ ಅಧಿಕಾರದಲ್ಲಿಟ್ಟರು. ಅವರು inefficient ಎಂದು ಗೊತ್ತಿದ್ದರೂ, ಕಾನೂನು ಸುವ್ಯವಸ್ಥೆಯನ್ನು ಮೆಂಟೇನ್ ಮಾಡಲಿಕ್ಕೆ ಅವರಿಂದ ಆಗುವುದಿಲ್ಲವೆಂದು ಗೊತ್ತಿದ್ದರೂ ಅವರನ್ನೇ ಅಲ್ಲಿ ಇಟ್ಟಿದ್ದಾರೆ. ಗಂಡ ಹೆಂಡತಿಯಿಬ್ಬರನ್ನೂ ಒಂದೇ ಕಡೆ ಇಟ್ಟು ಅದ್ವಾನ ಮಾಡುತ್ತಿದ್ದಾರೆ, ದಯವಿಟ್ಟು ತಾವು ಅವರನ್ನು ತೆಗೆಯಿರಿ

ಎಂದು ಹೇಳಿದೆವು. ಅದನ್ನು ಕೇಳಲಿಲ್ಲ. ಕೊನೆಗೆ ಇವತ್ತು ಏನಾಯಿತು? ಗುರುಪಾದಪ್ಪ ನಾಗಮಾರಪಲ್ಲಿಯವರ ಮಗನ ಜೀವ ಬಲಿಯಾಗಿದೆ. ಅದು ಹೇಗೆಂದರೆ ಅಮಾನುಷವಾಗಿ ಅಲ್ಲೇ ಕುಳಿತು ಪೊಲೀಸ್‌ನವರ ಎದುರಿಗೆ ತಲವಾರದಿಂದ 10–20 ಸಲ ಚುಚ್ಚಿ, ಚುಚ್ಚಿ ಕೊಂದಿದ್ದಾರೆ. ಹಾಗೆ ಕೊಂದವರು ಓಡಿ ಹೋಗಿಲ್ಲ, ಅಲ್ಲೇ ಕುಳಿತಿದ್ದಾರೆ, ಆದರೂ ಕೂಡ ಅವರನ್ನು ಬೇಗನೆ ಹಿಡಿದುಕೊಂಡು ಹೋಗುವುದಾಗಲಿ ಅಥವಾ ಅವರು ಕೊಲ್ಲುವಾಗ ಅವರ ಮೇಲೆ fire ಮಾಡುವುದಾಗಲಿ ಅಥವಾ ಈ ಜನ ಬಂದಿದ್ದಾರೆ ಎಂದು ಹೇಳಿ ತಕ್ಷಣ ಅವರನ್ನು ಅಲ್ಲೇ ನಿಲ್ಲಿಸಿ, ಅಲ್ಲೇ ಅರೆಸ್ಟ್ ಮಾಡಿ ತೆಗೆದುಕೊಂಡು ಹೋಗಬಹುದಾಗಿತ್ತು. ಇಲ್ಲವೇ ನಾಗಮಾರಪಲ್ಲಿಯವರ ಮಗನೇ ಈ ಕಡೆ ಬರುತ್ತಿದ್ದಾನೆಂಬ ಸುಳಿವು ನಿಮಗಿದ್ದಾಗ ಅಥವಾ ಅವರು ರಿವಾಲ್ವರ್ ತೆಗೆದುಕೊಂಡು ಬರುತ್ತಿದ್ದಾರೆ, ಅವರೊಂದಿಗೆ 10–15 ಜನರು ಬರುತ್ತಿದ್ದಾರೆ ಎಂದು ನಿಮಗೆ ಕಲ್ಪನೆ ಇದ್ದಾಗ ನೀವ್ಯಾಕೆ ಅವರನ್ನು ಅಲ್ಲೇ ಅರೆಸ್ಟ್ ಮಾಡಿ ನಿಲ್ಲಿಸಬಾರದಾಗಿತ್ತು? ಹಾಗೇನಾದರೂ ಇವರು ಮಾಡಿದ್ದರೆ ಅವರ ಮಗನ ಪ್ರಾಣವಾದರೂ ಉಳಿಯುತ್ತಿತ್ತು ಅಥವಾ ಒಳಗಿರುವಂತಹವರು ನನ್ನ ಜೀವಕ್ಕೆ ಭಯವಿದೆಯೆಂದು ಹೇಳಿ ಯಾವಾಗ ನಿಮಗೆ ಅಪ್ಲಿಕೇಷನ್ ಕೊಟ್ಟಿದ್ದರು, ಆಗ ಆ ಡಾಬವನ್ನು ಚೆಕ್ ಮಾಡಿ ಅವರನ್ನು ಅರೆಸ್ಟ್ ಮಾಡಿ ಅರ್ಜಿದಾರರಿಗೆ ರಕ್ಷಣೆ ಕೊಡುವಂತಹದ್ದನ್ನು ಯಾತಕ್ಕೆ ಮಾಡಲಿಲ್ಲ? ಇದು ಹೇಗೆಂದರೆ tug of war ಎಂದು ಹೇಳಿ ಎಳೆಸಲಿಕ್ಕೆ ಹಚ್ಚುತ್ತಾರಲ್ಲಾ ಅಥವಾ ಎರಡು ಗುಂಪಿನ ಜಗಳ ನಡೆಯಲಿ, ಇದರಲ್ಲಿ ಯಾರು ಗೆದ್ದು ಬರುತ್ತಾರೆಂದು ಜಂಘಿ ಕುಸ್ತಿ ಹಚ್ಚಿ ನೋಡಿದ ಹಾಗೆ. ಪೊಲೀಸರ ಎದುರಿಗೆ ನಿಂತು ನೀವಿಬ್ಬರು ಫೈಟ್ ಮಾಡಿ, ನಿಮ್ಮ ತಲವಾರ್ ಹೇಗಿದೆ ಎಂದು ಅವರು ನೋಡಲಿ, ಅವರ ಪಿಸ್ತೂಲು ಹೇಗಿದೆ ಎಂದು ಇವರು ನೋಡಲಿ ಎಂದು ಪರಸ್ಪರ ಇವರ ಇಬ್ಬರ ಮಧ್ಯೆ ಜಗಳ ನಡೆಯಲಿ ಎನ್ನುವಂತೆ ಇವರ ಕಣ್ಣೆದುರಿಗೆ ನಡೆದಂತಹ ಘಟನೆ ಎಂದರೆ ನಾವು efficient Police Officer ಎನ್ನಬೇಕೋ ಅಥವಾ efficient Home Ministry ಎನ್ನಬೇಕೋ? ಅಥವಾ ಅವರು efficient ಆಗಿ ಕೆಲಸ ಮಾಡುವ ಎಸ್.ಪಿ. ಎನ್ನಬೇಕೋ ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಮನಸ್ಸಿಗೆ ನೋವಾಗಿರಬಹುದು. ನಿಮ್ಮನ್ನು ನೇರವಾಗಿ ನಾನು ಟೀಕಿಸುತ್ತಿದ್ದೇನೆಂಬ ಭಾವನೆ ನಿಮಗೆ ಬರಬಹುದು ಆದರೆ ನಿಮ್ಮ ಗೃಹ ಇಲಾಖೆಗೆ ನಾವು

ತಿಂಗಳಾನುಗಟ್ಟಲೆಯಿಂದ ಈ ವಿಷಂ ್ನ ಹೇಳುತ್ತಾ ಬಂದಿದ್ದೇವೆ, ಆದರೂ ಏತಕ್ಕೆ ಅನುಕಂಪ? ಏಕೆಂದರೆ ವಿರೋಧ ಪಕ್ಷದವರು ಹೇಳಿದರು ಎಂದೇ? ಇವತ್ತು ಒಂದು ಜೀವ ಬಲಿಯಾಯಿತು ಇದಕ್ಕೆ ಯಾರು responsible? ಇವತ್ತು ಈ ವಿಷಯ ಎಸ್.ಪಿ.ಯವರಿಗೆ ಗೊತ್ತಿದ್ದೂ ಈ ರೀತಿ ಮಾಡಿದ್ದಕ್ಕೆ ಸರ್ಕಾರ ನೇರವಾಗಿ ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಏಕೆ? ಈಗಾಗಲೇ ರಮೇಶ್‌ಕುಮಾರ್‌ರವರು ಹೇಳಿದರು, ನಾಗಮಾರಪಲ್ಲಿಯವರಿಗೆ Z+ security ಇತ್ತು. ನೀವೆ ಕೊಟ್ಟಿದ್ದಿರಿ, ನಿಮ್ಮದೊಂದು ಕಮಿಟಿ ಇತ್ತು. ಆ ಕಮಿಟಿ ಏತಕ್ಕೆ ಕೊಟ್ಟಿತ್ತು ಅಂದರೆ ಆ ಏರಿಯಾ ನಕ್ಸಲೈಟ್ infected ಏರಿಯಾ ಆಗಿತ್ತು. ಆ ಏರಿಯಾದಲ್ಲಿ ಅವರು main target ಮಾಡುವುದು ಸ್ವಲ್ಪ ಶ್ರೀಮಂತರಿಗೆ, ಶಾಸಕರಿಗೆ, ಮಂತ್ರಿಗಳಿಗೆ, ಮಾಜಿ ಮಂತ್ರಿಗಳಿಗೆ. ನನ್ನ ಕ್ಷೇತ್ರದ ಪಕ್ಕದಲ್ಲಿಯೇ ಒಬ್ಬ ಶಾಸಕನಿಗೆ, ಅವನ ಮಗನಿಗೆ ದಿನಾಂಕ 15ನೇ ಆಗಸ್ಟ್ ರಂದು ಸ್ವಾತಂತ್ರ್ಯ ದಿನಾಚರಣೆಯಂದು ಬಾವುಟವನ್ನು ಏರಿಸುವ ಮೊದಲೇ ನನ್ನ ಗುರುಮಿಠಕಲ್ ಐ.ಬಿ. ಯಲ್ಲಿ ಆ conspiracy ಮಾಡಿ ಹೋಗಿ ನಾರಾಯಣ ಪೇಟೆಯಲ್ಲಿ ಅವರು flag hoisting ಮಾಡುವಾಗ, ಒಂದು school function ನಲ್ಲೇ ಆ ತಂದೆ ಮತ್ತು ಮಗನ ಅವರು murder ಮಾಡಿದರು. ಮೊನ್ನೆ ನನ್ನ ಬೌಂಡರಿ ವ್ಯಾಪ್ತಿಯಲ್ಲಿರುವ ಮೆಹಬೂಬ್ ನಗರದಲ್ಲಿ ಬೈ ಎಲೆಕ್ಷನ್ ಆಯಿತು, ಅದೇ ರೀತಿ ಆಂಧ್ರಪ್ರದೇಶದ ಬಾರ್ಡರ್‌ನವರಿಗೂ ಆಗುತ್ತಿದೆ. ಅಲ್ಲಿ ನಕ್ಸಲೈಟ್ಸ್ ಅವರ ದೊಡ್ಡ ಮಗ ಉಮಾಪತಿಯವರಿಗೂ fire ಮಾಡಿದರು. ಇವತ್ತು ಆ ಒಂದು ದೃಷ್ಟಿಯಿಂದ ಹಿಂದಿನ ಸರ್ಕಾರಗಳೆಲ್ಲಾ ಯೋಚನೆ ಮಾಡಿ ಅವರಿಗೆ ಒಂದು Z security ಕೊಟ್ಟಿದ್ದರು. ವಿಜಯಕುಮಾರ್‌ಗೂ ಕೂಡ Y category ಯಲ್ಲಿ security ಕೊಟ್ಟಿದ್ದರು, ಇದನ್ನು withdraw ಮಾಡತಕ್ಕಂಥ ಅವಶ್ಯಕತೆ ಏನಿತ್ತು? ಅಲ್ಲಿನ ಎಸ್.ಪಿ., ಯಾವಾಗಲೂ ಕೂಡ ಇದರ ಬಗ್ಗೆ ಚಿಂತನೆ ಮಾಡುವುದಿಲ್ಲ ಎನ್ನುವುದು ನಿಮಗೆ ಗೊತ್ತಿದೆ. ಅವರ ಮೇಲೆ ಅಲಿಗೇಷನ್ ಮಾಡಿದಾಗ ಇವರು ಅಷ್ಟೊಂದು ಸೀರಿಯೆಸ್ ಆಗಿ ತೆಗೆಯಲಿಕ್ಕೆ ಬರುವುದಿಲ್ಲವೆನ್ನುವುದು ಗೊತ್ತಿದೆ. ಗೊತ್ತಿದ್ದೂ ಕೂಡ Z security ಹಾಗೂ Y security withdraw ಮಾಡಿದರು. ಅದು ಒಂದು ಕಡೆಯಾದರೆ ಇದು ನಿಮ್ಮ ಲೆವೆಲ್‌ನಲ್ಲಿ ಆಗುತ್ತದೆ. ಹಾಗಿದ್ದಾಗ you are also responsible for that. ಇಲ್ಲಿನ ಅಧಿಕಾರಿ., ನಿಮಗೆ ಸರಿಯಾದ

ಮಾಹಿತಿ ಕೊಟ್ಟಿಲ್ಲವೆಂದು ಅರ್ಥ ಬರುತ್ತದೆ. ಯಾವ ಅಧಿಕಾರಿ ನಿಮಗೆ ಮಾಹಿತಿ ಕೊಡುವುದಿಲ್ಲ ಅಥವಾ ಯಾವ ಅಧಿಕಾರಿ., who is heading this Committee, you have to take action against him also. ಇವತ್ತೇನಾಗಿದೆಯೆಂದರೆ fashion, ಗೆ ಯಾರೂ ಕೂಡ ಸುಮ್ಮಸುಮ್ಮನೆ ಸೆಕ್ಯುರಿಟಿ ಕೇಳುವುದಿಲ್ಲ ಅಥವಾ ಯಾರೂ ಕೂಡ ಶೋಕಿಗಾಗಿ ಜೊತೆಯಲ್ಲಿ ಇಟ್ಟುಕೊಳ್ಳಬೇಕೆನ್ನುವುದಕ್ಕೆ ಅಲ್ಲಿನ ವಾತಾವರಣ ಕೂಡ ತಮಗೆ ಗೊತ್ತಿರುತ್ತದೆ. ಹೀಗಾಗಿ ಆ ಸೆಕ್ಯುರಿಟಿಯನ್ನು ವಿತ್‌ಡ್ರಾ ಮಾಡಿದರು. ಅದು ಕೂಡ ನಾನು ಅಲ್ಲಿಗೆ ಹೋದ ಮೇಲೆ ನಾಗಮಾರಪಲ್ಲಿಯವರು ತಿಳಿಸಿದರು. ಇಂಥ ಪರಿಸ್ಥಿತಿಯಾಗಿದೆ. ಹಾಗಾದರೆ ಇದಕ್ಕೆ ಕಾರಣರು ಯಾರು? ಇದನ್ನು ಸಂಪೂರ್ಣವಾಗಿ ಹೊರಗಡೆ ತರಬೇಕೆಂದರೆ,. ಸಿ.ಓ.ಡಿ.,ಯಿಂದ ತನಿಖೆ ಬೇಕಿಲ್ಲ ಎಂದು ಹೇಳುತ್ತೇವೆ. ಏತಕ್ಕೆ ಹಾಗೆ ಕೇಳುತ್ತಿದ್ದೇವೆ ಎಂದರೆ ಸಿ.ಬಿ.ಐ.ನಿಂದ ಆದರೆ ಇದರಲ್ಲಿ ಅನೇಕ ವಿಷಯಗಳು ಹೊರಗೆ ಬರುತ್ತದೆ. ಇನ್ನೊಂದು ಏನಾಗಿದೆಯೆಂದರೆ ನಾವು ನೇರವಾಗಿ ಐ.ಪಿ.ಎಸ್. ಆಫೀಸರ್ ವಿರುದ್ಧವೇ ಇದನ್ನು ಹೇಳುತ್ತಿದ್ದೇವೆ, **because it is a failure of S.P.** and D.C. ಎಲ್ಲರೂ ಕೂಡ ಇದರಲ್ಲಿ ವಿಫಲರಾಗಿದ್ದಾರೆ. ಅದಕ್ಕಾಗಿ ನಮ್ಮ ಸಿ.ಓ.ಡಿ. ಕೂಡ., ಇದು ಸ್ವತಂತ್ರವಾಗಿಲ್ಲ, ನ್ಯಾಚುರಲಿ ನಮ್ಮ ಎ.ಡಿ.ಜಿ.ಪಿ.ಯವರು ಅದನ್ನು ಹೆಡ್ ಮಾಡುತ್ತಾರೆ. ಅವರು impartial ಆಗಿ ಅದನ್ನು ಮಾಡುತ್ತಾರೋ ಇಲ್ಲವೋ ಅನ್ನತಕ್ಕಂಥ ಸಂಶಯ ನಮಗೆ ಏಕೆ ಬರುತ್ತಿದೆ ಎಂದರೆ ಈ ಹಿಂದೆಯೇ ಅವರ ಮೇಲೆ ಅಲಿಗೇಷನ್ ಮಾಡಿ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂದರೂ ಅವರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ. ಈಗ ಅವರ ಮೇಲೆ action ತೆಗೆದುಕೊಳ್ಳಲಿಕ್ಕೆ ಅವರು ಹೋಗುತ್ತಾರೆ. ಹಾಗಾಗಿ ಇದು ಕಾರಣಾಂತರದಿಂದ ಮುಚ್ಚಿಹೋಗುತ್ತದೆ. ಅದಕ್ಕಾಗಿ I demand C.B.I. enquiry. That is one thing. ಎರಡನೆಯದು ಏನೆಂದರೆ, ಇವತ್ತು ಏನು ಘಟನೆ ನಡೆದಿದೆ. ಇದಕ್ಕೆ ಸರ್ಕಾರ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಇದೇ ರೀತಿಯಾಗಿ ನಡೆದರೆ ನಾಳೆ ಎಲ್ಲಾ ಕಡೆ ಇಂತಹ ಘಟನೆಗಳು ಪ್ರಾರಂಭವಾಗುತ್ತವೆ. ಇವತ್ತು ನಾಗಮಾರಪಲ್ಲಿಯವರ ಮಗನಿಗೆ ಆಯಿತು. ನಾಳೆ ನನ್ನ ಮಗನಿಗೆ ಆಗಬಹುದು. ನಾಳಿದ್ದು ಅವರಿಗೆ. ಹಾಗಾಗಿ ಯಾರ್‍ಯಾರೂ ವೀಕ್ ಆಗುತ್ತಾ ಹೋಗುತ್ತಾರೋ ಅಥವಾ ಯಾರಿಗೆ ತೋಳು ಬಲ ಇರುವುದಿಲ್ಲವೋ, ಸಂಖ್ಯಾಬಲ

ಇರುವುದಿಲ್ಲವೋ ಅವರಿಗೆ ಇದೇರೀತಿಯಾದ ಗತಿ ಆಗಬಾರದು. ಈ message ಅನ್ನು ಈ ಮನೆಯಿಂದ ಹೋದರೆ, ರಕ್ಷಣೆಯ ಬಗ್ಗೆ ಕೇಳುವವರೇ ಇಲ್ಲವೆಂದಾದರೆ ಖಂಡಿತವಾಗಿ ಈ ಸ್ಟೇಟ್‌ನಲ್ಲಿ ಗೂಂಡಾರಾಜ್ಯ ಬರುತ್ತದೆ. ಗೂಂಡಾಗಳಲ್ಲಿ ಯಾರಿಗೆ ತೋಳುಬಲ ಇದೆ, ಶಕ್ತಿ ಇದೆ, ಯಾರ ಕೈಯಲ್ಲಿ ಹತ್ಯಾರ್ ಇದೆ, ಯಾರ ಕೈಯಲ್ಲಿ, ತಲವಾರ್ , ಪಿಸ್ತೂಲು, ಬಂದೂಕು ಇದೆ ಅವರುಗಳು ರಾಜ್ಯವನ್ನು ಆಳುತ್ತಾರೆ. ಅದಕ್ಕೆ ದಯವಿಟ್ಟು ಇದನ್ನು ಸಿ.ಬಿ.ಐ.ಗೆ ಒಪ್ಪಿಸಬೇಕು. ಇದರಲ್ಲಿ ರಾಜಕೀಯ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ನೀವು ಹೋಗುತ್ತೀರಿ, ನಿಮಗೂ ಕೂಡ ಗೊತ್ತಿದೆ. ಹಾಗಾಗಿ ನಾವೆಲ್ಲರೂ ಕೂಡ ಇದರ ಬಗ್ಗೆ ಕೇಳುತ್ತಿದ್ದೇವೆ ಮತ್ತು ಈಗಾಗಲೇ ಮೊನ್ನೆ ದಿವಸದ ಕನ್ನಡ ಪ್ರಭದಲ್ಲಿ ವರದಿ ಬಂದಿದೆ. ಈ ಬಗ್ಗೆ ಗುಪ್ತಚರ ವರದಿಯಲ್ಲಿ ಕೆಲವು ಭಾಗಗಳನ್ನು ಪ್ರಿಂಟ್ ಮಾಡಿದ್ದಾರೆ. ಯಾರು ಫೇಲ್ಯೂರ್ ಆಗಿದ್ದಾರೆಂಬ ಬಗ್ಗೆ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಯಾವ್ಯಾವ ಅಧಿಕಾರಿಗಳೂ ಸ್ಥಳದಲ್ಲೇ ಇದ್ದು ಕಣ್ಣಾರೆ ನೋಡಿಕೊಂಡು ಸುಮ್ಮನೆ ನಿಂತಿದ್ದರು ಎಂಬ ಬಗ್ಗೆ ಕೂಡ ವರದಿಯಲ್ಲಿದೆ. ಅದರೊಂದಿಗೆ ಯಾರ್ಯಾರು ಸಾಮೀಲಾಗಿ ಇದಕ್ಕೆ ಪ್ರೋತ್ಸಾಹ ನೀಡಿದ್ದಾರೆ ಎಂಬುದು ಕೂಡ ಇದೆ. ಹಾಗಾಗಿ ಇದನ್ನು ಸಿ.ಬಿ.ಐ ಎನ್‌ಕ್ವೈರಿಗೆ ಒಪ್ಪಿಸಬೇಕು. ಜಮೀನುಗಳ ಬೆಲೆ ಜಾಸ್ತಿಯಾಗುತ್ತಿರುವ ಕಾರಣ ಜಮೀನಿಗಾಗಿ ಇಂತಹ ಘಟನೆಗಳು ಆಗುತ್ತವೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಜಮೀನಿನ ಬೆಲೆ ಜಾಸ್ತಿ ಯಾಗುತ್ತಿರುವ ಕಾರಣ ಇಂತಹ ಘಟನೆಗಳು ಜಾಸ್ತಿ ನಡೆಯುತ್ತವೆ. ಬಹಳಷ್ಟು ಜನರಿಗೆ ನಾವು encounter ನಲ್ಲಿ ಸತ್ತ, ಅದರಲ್ಲಿ ಸತ್ತ ಎಂದರೆ, ಇಂತಹ ಜಮೀನು ಕಬಳಿಕೆಯಲ್ಲಿ ಅವರುಗಳು ಸಾಯುವುದು. ಅದಕ್ಕಾಗಿ ಇದರ ಬಗ್ಗೆ ಆ ಭಾಗದಲ್ಲಿ, ವಿಶೇಷವಾಗಿ ಬಾರ್ಡರ್‌ನಲ್ಲಿ ನಡೆದಿದೆ. ಅಲ್ಲದೆ ಅದು ನಕ್ಸಲೈಟ್ ಪೀಡಿತ ಏರಿಯಾ ಇರುವುದರಿಂದ ಇದನ್ನು ಸಿ.ಬಿ.ಐ. ಎನ್‌ಕ್ವೈರಿಗೆ ಕೊಡುವುದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು: ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರಿಗೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೇ, ಇದು ಬಹಳ ಗಹನವಾದ ವಿಷಯ. ನಾನು ಒಬ್ಬನು ಮಾತನಾಡುತ್ತೇನೆ. ಆಮೇಲೆ

ಅವರು ಮಾತನಾಡಲಿ. ಕೆಲವು ಪಾಯಿಂಟ್ಸ್ ಅನ್ನು ನಾನು ಸಹ ಹೇಳಬೇಕಾಗಿದೆ. ನಾನೇನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ. 4–5 ನಿಮಿಷ ಮಾತ್ರ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರೆ: ವಿಶೇಷ ಮಾಹಿತಿ ನಿಮ್ಮಲ್ಲಿ ಏನಿದೆ? ಇವರು ಹೇಳದೇ ಇರತಕ್ಕಂತಹ ಮಾಹಿತಿ ಏನಾದರೂ ಇದೆಯೇ?

ಶ್ರೀ ಕೆ. ಶ್ರೀನಿವಾಸಗೌಡ: ಅವರು ಹೇಳದೆ ಇರುವಂತಹ ಮಾಹಿತಿಯನ್ನು ನಾನು ಹೇಳುತ್ತೇನೆ. ವಿಜಯಕುಮಾರ್ ನಾಗಮಾರಪಲ್ಲಿಯವರ ಬರ್ಭರ ಹತ್ಯೆ ನಿಜವಾಗಲೂ ಕೂಡ ಇಡೀ ಪೋಲೀಸ್ ಇಲಾಖೆ ತಲೆ ತಗ್ಗಿಸುವಂತಹ ವಿಷಯ. ಇವತ್ತು 4–5 ವರ್ಷಗಳ ಹಿಂದೆ ಅವರ ಕುಟುಂಬದ ಮೇಲೆ ಬಂದೂಕ್‌ನಲ್ಲಿ ಹೊಡೆದಿದ್ದರು. ಅವರನ್ನು ನಕ್ಸಲೈಟ್ಸ್ ಅಥವಾ ರಾಜಕೀಯ ವೈರಿಗಳು ಎಂದೂ ಕೂಡ ಗುರುಪಾದಪ್ಪನವರು ಹೇಳುತ್ತಾರೆ. ಆದರೆ 5 ವರ್ಷಗಳ ಹಿಂದೆಯೇ ಇವರ ಅಣ್ಣ ಉಮಾಕಾಂತ್ ಎಂಬುವರನ್ನು ಬಂದೂಕ್‌ನಲ್ಲಿ ಹೊಡೆದು ಆ ಬಂದೂಕಿನಲ್ಲಿದ್ದ ಗುಂಡುಗಳು ಅವರ ದೇಹದಲ್ಲಿ ಹೋಗಿ ಆ ಗುಂಡುಗಳನ್ನು ತೆಗೆಯಬೇಕಾದರೆ ಬಹಳ ಕಷ್ಟವಾಯಿತು. ಇನ್ನೂ ಕೂಡ ಕೆಲವು ಗುಂಡುಗಳು ಅವರ ದೇಹದಲ್ಲಿ ಇವೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ, ಪೋಲೀಸ್ ಇಲಾಖೆ ಕೊಟ್ಟಿದ್ದ Z category ಮತ್ತು Y category ಯನ್ನು ತೆಗೆಯುವಂತಹದ್ದು ಏನಿತ್ತು? ಅಥವಾ ಉದ್ದೇಶಪೂರ್ವಕವಾಗಿ ಇದನ್ನು ಮಾಡಿದ್ದಾರೆಂದು ನಮ್ಮ ಭಾವನೆ. ಇವತ್ತು ಬೇರೆ ಜಿಲ್ಲೆಗಳಲ್ಲಿ ಆಗಲಿಲ್ಲ. ಔರಾದ್ ಅಂತಹ ಊರಿನಲ್ಲಿ ಆಗಲಿಲ್ಲ. ಬೇರೆ ಊರಿನಲ್ಲಿ ಈ ಘಟನೆ ನಡೆದಿಲ್ಲ. ಈ ಘಟನೆ ನಡೆದಿರುವುದು ಬೀದರ್ ಎನ್ನುವಂತಹ ಜಿಲ್ಲಾ ಕೇಂದ್ರ ಸ್ಥಾನ. ಅಲ್ಲಿ Reserve police ಇರುತ್ತದೆ. ಬೇರೆ ಬೇರೆ police stations ಇರುತ್ತವೆ. ಎಸ್.ಪಿ. ಇರುತ್ತಾರೆ. Dy.SP ಇರುತ್ತಾರೆ. Additional S.P ಇರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಈ ಪರಿಸ್ಥಿತಿ ಆಗಬೇಕಾದರೆ ಇದನ್ನು ನಾವು ಗ್ರಹಿಸಬೇಕಾಗುತ್ತದೆ. ಇದು ಎಲ್ಲೋ ಜಿಲ್ಲಾ ಕೇಂದ್ರ ಸ್ಥಾನದಿಂದ ಬಹಳ ದೂರ ಇರುವಂತಹ ಊರಿನಲ್ಲಿ ನಡೆದಾಗ ಅಲ್ಲಿಗೆ ಪೋಲೀಸರು ಹೋಗಬೇಕಾದರೆ ಅಧಿಕಾರಿಗಳು ಹೋಗಬೇಕಾದರೆ, Reserve police ಹೋಗಬೇಕಾದರೆ ಲೇಟ್ ಆಗುತ್ತದೆ. ಅದಕ್ಕೆ ಬದಲಾಗಿ ಎಲ್ಲಾ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ಅರೆಸ್ಟ್

ಮಾಡುವುದರ ಜೊತೆಗೆ ಅಲ್ಲಿಯೇ ಅವರನ್ನು ಅರೆಸ್ಟ್ ಮಾಡಬಹುದಾಗಿತ್ತು. ಅವರು ಅವರ ಹತ್ತಿರ ಇದ್ದ ಕತ್ತಿಯನ್ನು ತೆಗೆದು, ಇವರ ಹತ್ತಿರವಿದ್ದ ರಿವಾಲ್ವರ್ ಅನ್ನು ತೆಗೆದು, ಆ ವೇಳೆಗೆ ಕಾರದ ಪುಡಿ ರೆಡಿಯಾಗಿದೆ ಅಂದರೆ ಏನು ಅವರ ಉದ್ದೇಶ. ಇದರ ಹಿಂದೆ ಕಾಣದ ಕೈಗಳು ಇವೆ ಎನ್ನುವಂತಾದ್ದೇ ನನ್ನ ಅನಿಸಿಕೆ. ಆದ್ದರಿಂದ ಇದರಲ್ಲಿ ಮಾನ್ಯ ಗೃಹ ಮಂತ್ರಿಗಳು ಮುಲಾಜು ನೋಡದೆ ಯಾರೇ ತಪ್ಪು ಮಾಡಿದ್ದರೂ ಸರಿ, ಹಿಂದೆ ಸಿ.ಬಿ.ಐ. ಗೆ ವಹಿಸಿದರೆ ಏನಾಗುತ್ತದೆಯೋ ಎನ್ನುವಂಥದ್ದು ಇತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ಹಿಂದೆ ಮುಖ್ಯ ಮಂತ್ರಿಯಾಗಿದ್ದಾಗ ರಷೀದ್ ಕೊಲೆಯ ಆರೋಪಗಳು ಬಂದಾಗ, ಈ ರೀತಿಯ ಕ್ರಿಮಿನಲ್ ಕೇಸ್‌ಗಳು ಬಂದಾಗ, ಅವರು ನೇರವಾಗಿ ಸಿಬಿಐಗೆ ರೆಫರ್ ಮಾಡಿದರು. ಇವತ್ತು ಮಾಡಿ, ಅದು ಏನು ದೊಡ್ಡ ಅಪರಾಧವಲ್ಲ. ಗಣಿ ಲಂಚದ ವ್ಯವಹಾರವಲ್ಲ. ಇವತ್ತು ಇದು ಒಂದು ಕ್ರಿಮಿನಲ್ ಕೇಸ್. ಒಬ್ಬ ಕ್ರಿಮಿನಲ್‌ನಿಂದಾಗಿ ಒಬ್ಬ ಪ್ರಜೆ ಸತ್ತಿದ್ದಾನೆ. ಅದರಲ್ಲೂ ಕೂಡ ಒಬ್ಬ ಶಾಸಕರ ಮಗ. ಇಂತಹ ಪರಿಸ್ಥಿತಿಯಲ್ಲಿ ನಾವು ಯಾವುದೇ ನಮ್ಮ ಧೋರಣೆಗಳನ್ನು ಬದಿಗೊತ್ತಿ ಸಿಬಿಐಗೆ ಕೊಟ್ಟರೆ ಆಗ ನಿಜವಾದ ಅಂಶ ಹೊರಗೆ ಬರುತ್ತದೆ. ಒಂದು ಸಲ ಈ ರೀತಿಯಾದರೆ ಪೊಲೀಸ್ ಇಲಾಖೆಗೂ ಕೂಡ ಎಚ್ಚರಿಕೆ ಗಂಟೆ ಕೊಟ್ಟಂತೆ ಆಗುತ್ತದೆ. ಸರ್ಕಾರ ಇದನ್ನು ಸಹ ಗಮನಿಸಬೇಕು. ಸರ್ಕಾರ ಸಿಬಿಐಗೆ ವಹಿಸಿಬಿಟ್ಟರೆ ನಮ್ಮದೇನು ಇಲ್ಲ ಅಥವಾ ನೀವು ಏನು ವರದಿಯನ್ನು ಸದನದಲ್ಲಿ ಹೇಳಿದಿರಿ ನಾಳೆ ಸಿಓಡಿ ಗೆ ವಹಿಸಿದರೂ ಅದೇ ವರದಿ ಬರುತ್ತದೆ. ಅದನ್ನೇ ಅವರು ಕಳುಹಿಸುವುದು. ಬೇರೇನೂ ಇಲ್ಲ. ಇವತ್ತು ಏನು ತಾವು ನಮ್ಮ ಗೃಹ ಮಂತ್ರಿಗಳಿಂದ ಹೇಳಿಕೆಯನ್ನು ಮಾಡಿಸಿದ್ದೀರಿ ಆ ಹೇಳಿಕೆ ಬಿಟ್ಟು ಅವರು ಬೇರೆ ಏನೂ ಬರೆಯುವುದಿಲ್ಲ. ಹೀಗಾಗಿ ಸಿಬಿಐಗೆ ಕೊಡಬೇಕು ಎನ್ನುವಂತಹ ಮಾತನ್ನು ನಾನು ಈ ಸಮಯದಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ಆ ರಿವಾಲ್ವರ್ ಅನ್ನು ತೆಗೆದು ಸ್ವತ: ಅವರೇ ಹೊಡೆದಿದ್ದರೂ ಸಹ ಪೊಲೀಸ್‌ನವರು ಸಾಕ್ಷಿಗಳಾಗಿ ನಿಂತುಕೊಂಡು ನೋಡುತ್ತಿದ್ದಾರೆಂದರೆ ಇದೊಂದು ನಾಚಿಕೆಗೇಡು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಗೃಹ ಮಂತ್ರಿಗಳು ಯಾರ ಮುಲಾಜು ನೋಡಬಾರದು, ಇದರಲ್ಲಿ ಯಾರಿಗೂ ಇಂತಹ ಕ್ರಿಮಿನಲ್ ಕೇಸ್‌ಗಳಲ್ಲಿ ಅದರಲ್ಲೂ ಈ ಭೂಹಗರಣಗಳು ಬಹಳ ಜಾಸ್ತಿಯಾಗುತ್ತಿವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಕೋಲಾರ ಜಿಲ್ಲೆಯಂತಹ ನನ್ನ ಸ್ವಂತ

ಕ್ಷೇತ್ರದಲ್ಲಿ 6 ಕಿಲೋಮೀಟರ್ ದೂರದಲ್ಲಿ 450 ರೂಪಾಯಿಗಳಿಗೆ ಒಂದು sq.ft. ಮಾರಾಟ ಮಾಡುತ್ತಿದ್ದಾರೆ. ಅದೇ ಪರಿಸ್ಥಿತಿ ಇವತ್ತು ಬೆಂಗಳೂರು ನಗರದಲ್ಲಿ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಬಹಳ ಮುಖ್ಯವಾಗಿ ಇಂತಹ ಭೂ ಪ್ರಕರಣಗಳಲ್ಲಿ ಮತ್ತು ಈ ಗಣಿ ಪ್ರಕರಣಗಳು ಇವೆರಡನ್ನು ನೇರವಾಗಿ ಸರ್ಕಾರ special force ಅನ್ನು ಬಿಟ್ಟು ಇದರ ಮೇಲೆ ಹಿಡಿತ ಸಾಧಿಸದೇ ಹೋದರೆ ಮುಂದಿನ ದಿನಗಳಲ್ಲಿ ಪ್ರತಿ ದಿನ ಈ ರಿಯಲ್ ಎಸ್ಟೇಟ್‌ಗಳ ವ್ಯವಹಾರಗಳಲ್ಲಿ ಕೊಲೆಗಳು ಆಗುವುದು. ಈ ರೀತಿಯ ಅನೇಕ ಘಟನೆಗಳನ್ನು ನಾವು ಬಹಳ ದಿನಗಳಿಂದ ಓದುತ್ತಿದ್ದೇವೆ. ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದನ್ನು ನಿಲ್ಲಿಸಬೇಕಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ, ಇಂತಹ ವ್ಯಕ್ತಿಗಳಿಗೆ ನೀಡಿದ್ದ Z categoryಯನ್ನು ಮತ್ತು Y category ಯನ್ನು ತೆಗೆದಿದ್ದು ಸರಿಯಲ್ಲ. ಅದರಲ್ಲೂ ಜಿಲ್ಲಾ ಕೇಂದ್ರದಲ್ಲಿ ಈ ರೀತಿಯಾಗಿದ್ದು, ಇನ್ನು ಹಳ್ಳಿಗಳಲ್ಲಿ ಆಗುವುದನ್ನು ನೀವು ಎಷ್ಟರಮಟ್ಟಿಗೆ ತಡೆಗಟ್ಟುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳಿ ಈ ಘಟನೆಯನ್ನು ಸಿಬಿಐ ಗೆ ವಹಿಸಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ (ಗದಗ್): ಶ್ರೀ ವಿಜಯಕುಮಾರ್‌ರವರ ಕೊಲೆ ಪೊಲೀಸ್‌ನವರ ಎದುರಿನಲ್ಲಿಯೇ ಆಗಿದೆ. ನಿಮ್ಮ ವರದಿಯ ಪ್ರಕಾರ ಸುಮಾರು 23 ಬಾರಿಗಿಂತ ಹೆಚ್ಚು ಸಲ ಚುಚ್ಚಿ ಕೊಂದಿದ್ದಾರೆ. ಅಲ್ಲಿಯವರೆವಿಗೂ ಅದನ್ನು ಪ್ರಿವೆಂಟ್ ಮಾಡಲು ಏನೂ ಪ್ರಯತ್ನ ಮಾಡಲಿಲ್ಲ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಆ ಭಾಗದಲ್ಲಿದ್ದರು. ಅವರು ಅಲ್ಲಿಗೆ ಹೋಗಿ ಭೇಟಿಯಾಗಿ ಬರಬೇಕಾಗಿತ್ತು, ಅಥವಾ ಟೆಲಿಫೋನ್ ಮೂಲಕವಾದರೂ ಮಾತನಾಡ ಬೇಕಾಗಿತ್ತು. ಆ ರೀತಿ ಮಾಡಲಿಲ್ಲ ಎಂದ ಮೇಲೆ ಬೇರೆ message ಹೋಗುತ್ತದೆ. ಅದಕ್ಕೆ ಮಾನ್ಯ ಪ್ರಕಾಶ್‌ರವರು ಆಗಲಿ ಮಾನ್ಯ ಕುಮಾರಸ್ವಾಮಿಯವರಾಗಲಿ ಮಾನ್ಯ ಗುರುಪಾದಪ್ಪನವರನ್ನು ಭೇಟಿಯಾಗಬೇಕು. ಇಂತಹ ಕೃತ್ಯಗಳನ್ನು ಸರ್ಕಾರ ಸಹಿಸುವುದಿಲ್ಲ ಎನ್ನುವಂತಹ message ಅನ್ನು ಎಲ್ಲಾ ಜಿಲ್ಲೆಗಳಿಗೂ ತಲುಪಿಸಬೇಕು. ಇಲ್ಲವಾದರೆ ಜನಸಾಮಾನ್ಯರಲ್ಲಿ ತಪ್ಪು ಅಭಿಪ್ರಾಯ ಹುಟ್ಟುತ್ತದೆ. ಇದು ಆಗಬಾರದು. ಆಮೇಲೆ ಅಲ್ಲಿ ಪೊಲೀಸರು ನಿಷ್ಕ್ರಿಯರಾಗಿದ್ದರು. ಮತ್ತೆ ಮಾನ್ಯ ಖರ್ಗೆಯವರು ಹೇಳಿದ್ದನ್ನು ನೋಡಿದರೆ ಆ

ಎಸ್.ಪಿ. ಯನ್ನು ತಕ್ಷಣ ಸಸ್ಪೆಂಡ್ ಮಾಡಿ. ಆಮೇಲೆ ವಿಚಾರಣೆ ಮಾಡಿ ಅವರದ್ದು ಏನೂ ತಪ್ಪು ಇಲ್ಲ ಅಂದರೆ reinstate ಮಾಡಬಹುದು. But, you must give one message to the whole police force and to the common people also ದಯವಿಟ್ಟು ಈ ಕೆಲಸ ಮಾನ್ಯ ಪ್ರಕಾಶ್‌ರವರು ಮಾಡಬೇಕು. ಮತ್ತು ಕೂಡಲೇ ಹೋಗಿ ಗುರುಪಾದಪ್ಪನವರನ್ನು ಭೇಟಿಯಾಗಿ ಸಾಂತ್ವನ ಹೇಳಿ ಬರಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ.ಪಿ .ಪ್ರಕಾಶ್ (ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಈಗ ನಡೆದಿರತಕ್ಕಂತಹ ಘಟನೆ ನಿಜವಾಗಿಯೂ ಕೂಡ ದುರ್ದೈವದ ಘಟನೆ. ಈಗ ಬೇರೆ ಬೇರೆ ರೀತಿ ಚಿತ್ರೀಕರಣವಾದಂತೆ ಇದು land grabing ಗೆ ಸಂಬಂಧಪಡತಕ್ಕಂಥದ್ದು ಅಲ್ಲ. ಮೂಲತ: ಇದರ ವಿಚಾರಗಳು ಸ್ವಲ್ಪ ಮಟ್ಟಿಗೆ ಪೂರ್ವಭಾವಿಯಾದಂತಹ ಘಟನಾವಳಿಗಳ ಹಿನ್ನೆಲೆಯಲ್ಲಿ ತಿಳಿಸಬೇಕು ಎಂದು ಹೇಳಿದಂತೆ ಜೆ. ಪಿ. ಆಬ್ರಹಾಂ ಎನ್ನತಕ್ಕಂತಹ ಒಬ್ಬ ವಾಯುಪಡೆ ಆಧಿಕಾರಿಗೆ ಸಂಬಂಧಪಟ್ಟಂತಹ ಜಮೀನು 3 ಎಕರೆ ವಿಸ್ತೀರ್ಣ. ಈ ಜೆ. ಪಿ. ಆಬ್ರಹಾಂ ಎನ್ನುವವರ ಕಡೆಯಿಂದ 1992 ರಲ್ಲಿ ವೆಂಕಟರಾವ್ ಬಿರಾದಾರ್ ಎನ್ನುವವರು 50 ಸಾವಿರ ರೂಪಾಯಿಗಳ ಮುಂಗಡ ಹಣವನ್ನು ಕೊಟ್ಟು ಅವರ ಕಡೆಯಿಂದ ಒಂದು Agreement of Sale ಎಂಬ ಒಂದು ಒಪ್ಪಂದವನ್ನು ಮಾಡಿಕೊಂಡರು. ಅದು Registration ಆಗಿದೆಯೋ ಇಲ್ಲವೋ ಅದರ ವ್ಯವಹಾರಗಳು ಬೇರೆ ರೀತಿ ನಡೆದಿವೆ. ಅದಾದ ನಂತರ ಜೆ.ಪಿ.ಅಬ್ರಹಾಂರವರು 50 ಸಾವಿರ ರೂಪಾಯಿಗಳು ತೆಗೆದುಕೊಂಡು ತೀರಿಕೊಂಡಿದ್ದಾರೆ. ಅವರು ಮಾರಾಟ ಮಾಡಿದ ಮೇಲೆ ಅವರ ಕುಟುಂಬದವರು ಅದನ್ನು ನಿವೇಶನಗಳನ್ನಾಗಿ ಪರಿವರ್ತಿಸಿ 48 ಜನರಿಗೆ ಮಾರಾಟ ಮಾಡಿದ್ದಾರೆ. ಅದರಲ್ಲಿ ವಿಜಯಕುಮಾರ್‌ರವರು ಸಹ ಒಬ್ಬ ಖರೀದಿದಾರರು. ಈ ವಿವಾದ ಬಹಳ ವರ್ಷಗಳಿಂದ ಹಾಗೆಯೇ ನಡೆದಿದೆ. ವೆಂಕಟರಾವ್‌ರವರು ನ್ಯಾಯಾಲಯಕ್ಕೂ ಕೂಡ ಹೋದರು. ಈ ಮಧ್ಯದಲ್ಲಿ ಈ ಒಂದು ಜಮೀನು ಬೀದರ್ ನಗರಸಭಾ ವ್ಯಾಪ್ತಿಯ ಒಳಗೆ ಇತ್ತು. ಅವರುಗಳದ್ದೇ ಆದಂತಹ ಡಾಬಾ ವ್ಯವಹಾರವನ್ನು ನಡೆಸಿಕೊಂಡು ಹೋಗುತ್ತಿದ್ದರು. ಈ ರೀತಿಯಾಗಿರತಕ್ಕಂತಹ ಹಿನ್ನೆಲೆಯಲ್ಲಿ ನ್ಯಾಯಾಲಯದಲ್ಲಿ ಆದಂತಹ ತೀರ್ಮಾನ ವೆಂಕಟರಾವ್‌ರವರಿಗೆ ವ್ಯತಿರಿಕ್ತವಾಗಿದೆ. ಇದಾದ ಮೇಲೆ ಮಾನ್ಯ ಮಲ್ಲಿಕಾರ್ಜುನ

ಖರ್ಗೆಯವರು ಹೇಳಿದಂತೆ ಆತ ನನಗೆ ಅಪಾಯವಿದೆ ಎಂದು ಒಂದು ವರದಿಯನ್ನು ಫಿರ್ಯಾದು ಕೊಟ್ಟ ಎನ್ನುವಂತಹ ಮಾಹಿತಿ ನನ್ನ ಹತ್ತಿರವಿಲ್ಲ. ಕೊಟ್ಟಂತಹ ವಿಷಯ ಸಹ ನನ್ನ ಹೇಳಿಕೆಯಲ್ಲಿ ಬಂದಿಲ್ಲ. ಆದರೆ ಯಾರು ಅಡಿಶನಲ್ ಎಸ್.ಪಿ ಇದ್ದರು ಅವರಿಗೆ ಈ ವಿಚಾರದಲ್ಲಿ ಈ ಬಗ್ಗೆ ತೀರ್ಮಾನ ಬಂದು ಎರಡು ದಿವಸ ಆಗಿದೆ ಈಗ ಹೋಗತಕ್ಕಂಥದ್ದು ಅಲ್ಲ . ಅದರ ಒಂದು certified copy ಕೂಡ ಬೇಕಾಗುತ್ತದೆ. ಪೋಲೀಸ್‌ನವರನ್ನು ಕರೆದುಕೊಂಡು ಹೋಗಿ ಸ್ವಾಧೀನ ತೆಗೆದುಕೊಳ್ಳತಕ್ಕಂತಹ ಕಾನೂನಿನ ಪ್ರಕ್ರಿಯೆಗಳು ಇವೆ. ಆದ್ದರಿಂದ ತಾವು ದಯವಿಟ್ಟು ಅಲ್ಲಿಗೆ ಹೋಗಬಾರದು ಎನ್ನತಕ್ಕಂತಹ ಮಾತನ್ನು ಅಡಿಷನಲ್ ಎಸ್.ಪಿ.ಯವರು ವಿಜಯಕುಮಾರ್‌ರವರಿಗೆ ತಿಳಿಸುತ್ತಾರೆ. ತಾವು ಈಗಾಗಲೇ ಹೇಳಿದಂತೆ ಯಾರಾದರೂ ಒಬ್ಬರು ದೊಡ್ಡವರ ಮಗ ಇದ್ದಾರೆಂದರೆ ಅವರ ಹಿಂದೆ ಎಲ್ಲರೂ ಸೇರಿಕೊಂಡು ಅವರನ್ನು ಮುಂದಕ್ಕೆ ಬಿಡತಕ್ಕಂಥದ್ದು ಸಹಜವಿದೆ. ಪ್ರಾಯಶ: ಈ 48 ಜನರಲ್ಲಿ ಈ ನಾಗಮಾರಪಲ್ಲಿಯವರ ಮಗ ಹೋಗುವುದರಿಂದ ಅದು ಬಗೆಹರಿಯಬಹುದು ಎನ್ನುವ ಕಾರಣ ಇರಬಹುದು ಅಥವಾ ಬೇರೆ ಕಾರಣ ಸಹ ಇರಬಹುದು. ಈ ರೀತಿ ಅವರು ಸಲಹೆ ಕೊಟ್ಟಿದ್ದು ಇದ್ದರೂ ಕೂಡ ಅವರು ಹೋಗಿದ್ದಾರೆ. ಜಿಲ್ಲಾಧಿಕಾರಿಗಳಿಗೂ ಈ ವಿಚಾರ ಹೇಳಿದಾಗ 48 ಜನರಿಗೆ flat ಮಾರಿರುವುದು ಇದೆ. 1992ನೇ ಸಾಲಿನಿಂದಲೂ ಈ ವಿವಾದ ನಡೆದು ಬರುತ್ತಿದೆ. ನಿಮ್ಮ flat ಯಾವುದಿದೆ ಅಂತ ಗುರ್ತಿಸಲು ತಹಸೀಲ್ದಾರರನ್ನು ಕಳಿಸಿ ಹದ್ದುಬಸ್ತನ್ನು ಮಾಡಿದ ನಂತರ ನೀವು ಅಲ್ಲಿಗೆ ಹೋಗಬಹುದು ಅಂತ ಅವರಿಗೆ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಇದು ನಡೆದಿರುವ ಘಟನೆ. ಈ ಸರ್ಕಾರ ಯಾವೊಬ್ಬ ಅಧಿಕಾರಿ ಪರವಾಗಿ ನಿಲ್ಲಬೇಕಾದ ಅಗತ್ಯತೆ ಇಲ್ಲ. ಅಥವಾ ಇದರ ಹಿನ್ನಲೆಯಲ್ಲಿ ಯಾವುದಾದರೂ ಕಾಣದ ಕೈ ಕೆಲಸ ಮಾಡಿತ್ತು ಅಂದಾದರೆ ಅದೂ ಕೂಡ ಬಯಲಿಗೆ ಬರಬೇಕು ಅಂತ ಒತ್ತಾಯ ಮಾಡುವುದರಲ್ಲಿ ನಾನೂ ಒಬ್ಬ. ಎಲ್ಲರಿಗೆ ಜೀವರಕ್ಷಣೆ ಕೊಡುವುದು ಎಲ್ಲರ ಕರ್ತವ್ಯ. ಇದರಲ್ಲಿ ಸರ್ಕಾರ ವಿಫಲವಾಯಿತು ಅಂತ ಹೇಳುವುದು, ಅದನ್ನು ತಾರ್ಕಿಕ ಹಂತಕ್ಕೊಯ್ಯುವುದಾದರೆ ವಾದಕ್ಕಾಗಿ ಈ ವಿಚಾರ ಪ್ರಸ್ತಾಪ ಮಾಡುತ್ತೇನೆ ಅಂತ ಅಲ್ಲ, ತಮ್ಮ ಜ್ಞಾಪಕಕ್ಕೆ ಹೇಳುತ್ತಿದ್ದೇನೆ: ನಾಗಪ್ಪನವರಿಗೆ ಕೊಲೆ ಬೆದರಿಕೆ ಇದೆ, ವೀರಪ್ಪನ್ ಅಪಹರಿಸಿಕೊಂಡು ಹೋಗುತ್ತಾನೆ ಎಂದಿದ್ದಾಗ, ಆತನಿಗೆ ರಕ್ಷಣೆ ಕೊಡಲು ಪೋಲೀಸ್ ಸಿಬ್ಬಂದಿ ಕಳಿಸಲಾಗಿತ್ತು.

ಪೊಲೀಸ್ ಅಲ್ಲೇ ಬಂದೂಕುಧಾರಿಯಾಗಿದ್ದ. ನಾಗಪ್ಪನನ್ನು ವೀರಪ್ಪನ್ ಬಂದೂಕು ಹಾರಿಸಿ ಕಿಟಕಿ ಒಡೆದು ಒಳನುಗ್ಗಿ ಅಪಹರಿಸಿಕೊಂದು ಹೋಗುವ ಸಂದರ್ಭದಲ್ಲಿ ಪೊಲೀಸ್ ಪೇದೆ ಗುಂಡನ್ನು ಹಾರಿಸಲಿಲ್ಲ, ಹೊರಗೆ ಬರಲೂ ಇಲ್ಲ. ಆಗ ಸರ್ಕಾರ ಯಾವುದಿತ್ತು? ಈಗ ನಡೆದಿರುವ ಘಟನೆ ಸಮರ್ಥಿಸಿಕೊಳ್ಳಲು ಈ ಮಾತು ಹೇಳುತ್ತಿಲ್ಲ, ಆದರೆ ಪೋಲಿಸರು ಆಗ ಯಾವರೀತಿ ನಡೆದುಕೊಂಡರು ಅಂತ ನಿಮಗೆ ಗೊತ್ತಿದೆ. ಆದರೆ ಈ ಸಂದರ್ಭದಲ್ಲಿ ಪೋಲಿಸರು ನಿಷ್ಕ್ರಿಯತೆ ತೋರಿದರು ಎಂದು ಕಂಡುಬಂದಿದ್ದರಿಂದ ಅವರನ್ನು ಅಮಾನತ್ತುಗೊಳಿಸಿದ್ದೇವೆ. ಅವರ ವಿರುದ್ಧ ಕ್ರಮ ಜರುಗಿಸುವ ಮಾತು ಹೇಳಿದ್ದೇವೆ. S P ಯವರನ್ನು ತತ್‌ಕ್ಷಣವೇ ವರ್ಗಾಯಿಸಿದ್ದೇವೆ. ಹಿಂದೆ ಡಾ: ಅಂಬೇಡ್ಕರ ಪ್ರತಿಮೆಗೆ ಅಪಮಾನ ಗೊಳಿಸಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ನನಗೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಖರ್ಗೆಯವರು ತಿಳಿಸಿದ್ದರು. ಆ ಹಿನ್ನೆಲೆಯಲ್ಲಿ ಯಾವುದೇ ಕೇಸನ್ನು ಹಾಕಬಾರದು ಅಂತ ಸೂಚನೆ ನಾವು ಕೊಟ್ಟಿದ್ದೇವೆ. ಅದನ್ನು IGP ಯವರು ತನಿಖೆ ಮಾಡಬೇಕೆಂದು ಆದೇಶ ಕೂಡ ಮಾಡಿದ್ದೇವೆ. ತನಿಖೆ ನಡೆದಿದೆ. ಜೊತೆಗೆ DC ಮತ್ತು SP ಯವರನ್ನು ದಂಪತಿಗಳಾಗಿದ್ದರೂ ಒಂದೇ ಕಡೆ ಇಟ್ಟಿರುವುದು ಇದೇ ಮೊದಲು ಅಂತಲೂ ಹೇಳಿದರು. ಅದಕ್ಕೆ ದೇಶಪಾಂಡೆಯವರು ಉತ್ತರಿಸಬೇಕು. ಕಾರವಾರದಲ್ಲಿ DC ಮತ್ತು SP ಯಾರಿದ್ದರು ಅಂತ ಅವರಿಗೆ ಗೊತ್ತಿದೆ. ಗಂಡಹೆಂಡತಿಯರೇ ಕಾರವಾರದಲ್ಲೂ ಇದ್ದವರು. CEO ಅಂತಲೇ ಇಟ್ಟುಕೊಳ್ಳೋಣ. ಹೀಗೆ ಗಂಡಹೆಂಡತಿ ಒಂದೇ ಕಡೆ ಇದ್ದ ಪ್ರಸಂಗ ಇದೆ. ಆದರೆ ಇಬ್ಬರನ್ನೂ ಒಂದೇ ಕಡೆ ಇಡಬಾರದೆಂದು ಸಂಪ್ರದಾಯವೂ ಇದೆ. ಆದರೆ ಅಲ್ಲಿ ಇದ್ದಾರೆ. ಆದ್ದರಿಂದ ಈ ವಿಚಾರದಲ್ಲೇ ಅವರನ್ನು ತತ್‌ಕ್ಷಣವೇ ವರ್ಗಾವಣೆ ಮಾಡಿದ್ದೇವೆ. ಮೂರನೆಯದು ಇಂತಹ ಪ್ರಕರಣಗಳ ಉದಾಹರಣೆಗಳನ್ನು ಮಲ್ಲಿಕಾರ್ಜುನ ಖರ್ಗೆ ಕೊಟ್ಟರು. ಆಗಸ್ಟ್ 15ರಂದು ಹೊಸಪೇಟೆಯಲ್ಲಿ ತಾಲ್ಲೂಕ ಪಂಚಾಯ್ತಿ ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಮುಖಂಡರ ಮೇಲೆ ಮತ್ತೊಬ್ಬ ಕಾಂಗ್ರೆಸಿನ ಮುಖಂಡರು ಅಲ್ಲಿನ Magistrate, Assistatant Commissioner ಮತ್ತು ಇಡೀ ಸಮಾಜದ ಎದುರಿಗೆ ಗುಂಡುಹಾರಿಸಿ ಕಗ್ಗೊಲೆ ಮಾಡಿದರು. ಅದೇ ಕಾರಣಕ್ಕಾಗಿ ಜಿಲ್ಲಾ ಉಸ್ತುವಾರಿ

ಸಚಿವರಾಗಿದ್ದ M Y ಘೋರ್ಪಡೆಯವರು ಹಂಪಿ ಉತ್ಸವ ಮಾಡುವುದು ಬೇಕಿಲ್ಲ ಅಂತಲೂ ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದ್ದು, ನಾರಾಯಣಪೇಟ್ ನಲ್ಲಿ flag hoist ಮಾಡುವಾಗ ಅಲ್ಲಿನ MLAಗೆ ಮತ್ತು ಅವನ ಮಗನಿಗೆ ಗುಂಡೇಟು ಹಾಕಿದರು, ಅದರೆಲ್ಲ ಪಿತೂರಿ ನಡೆದದ್ದು ನನ್ನ ಗುರುಮಿಟ್ಕಲ್ ಗೆಸ್ಟ್ ಹೌಸ್ನಲ್ಲಿ ಅಂತ. ಹಾಗೇನೆ ಚಿಂತಾಕಿ ಇದು ಬಾರ್ಡರ್ ಏರಿಯ, ನಕ್ಸಲ್ಪೀಡಿತ ಪ್ರದೇಶ, ನಕ್ಸಲರೇ ಹಿಂದೆ ಅವರ ಮಗನಿಗೂ ಗುಂಡುಹಾಕಿದ್ದರು. ಅದಕ್ಕಾಗೇ ರಕ್ಷಣೆ ಒದಗಿಸಿದ್ದು, ನೀವು withdraw ಮಾಡಿದ್ದು ತಪ್ಪು ಅಂತ.

ಶ್ರೀ ಎಂ.ಪಿ. ಪ್ರಕಾಶ್: ಬರೀ ಉದಾಹರಣೆಗಾಗಿ ಕೊಟ್ಟಿದ್ದು, ಆಗಸ್ಟ್ 15ರಂದು ಇದೇ ರೀತಿ ಧ್ವಜಾರೋಹಣ ನಡೆಸುತ್ತಿರುವಾಗ ಅಲ್ಲಿನ ತಾಲ್ಲೂಕ ಪಂಚಾಯ್ತಿ ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಮುಖಂಡರಿಗೆ ಮತ್ತೊಬ್ಬ ಕಾಂಗ್ರೆಸ್ ಮುಖಂಡ ಎಲ್ಲರ ಸಮಕ್ಷಮದಲ್ಲಿ ಆತನ ಹಿಂದಗಡೆಗೆ ಬಂದು ಗುಂಡುಹಾಕಿ ಆತನ ತಲೆಗೆ ಹೊಡೆಯುತ್ತಾನೆ. ಅದೂ ಕೂಡ ಅವತ್ತಾಗಿರುವ ಘಟನೆ. ಅದರ ಬಗ್ಗೆ ತನಿಖೆ ನಡೆದು ಏನು ಉತ್ತರ ಬಂತೋ ನನಗೆ ಗೊತ್ತಿಲ್ಲ. ಮಾನ್ಯ ಗುರುಪಾದಪ್ಪನವರ ಇವತ್ತಿನ ಸಂಕಷ್ಟದ ಸಂದರ್ಭದಲ್ಲಿ ನಾನು ತಾರ್ಕಿಕವಾಗಿ ಮಾತನಾಡುವುದು ಅಮಾನುಷ ಕೂಡ ಆಗುತ್ತದೆ. ನಾನು ನಿಜವಾಗಿಯೂ ಅವರ ಬಗ್ಗೆ ಸಹಾನುಭೂತಿ ಗೌರವ ಇಟ್ಟುಕೊಂಡಿರುವವನು. ಆದರೆ ಇಲ್ಲಿ ಆಗಿರುವುದು, 'Z' category ಇದ್ದುದನ್ನು ವಾಪಸ್ ಪಡೆಯಲಾಗಿದೆ ಎಂಬುದು, ದಯವಿಟ್ಟು ತಾವು ಪರಾಂಬರಿಸಬೇಕು: ಗುರುಪಾದಪ್ಪನವರಿಗೆ 28–1–2000 ದಂದು he was given 'Z' category, earlier to this he was given 'Y' category. ಅದಾದ ಮೇಲೆ 20–4–2001ರಂದು ಮಾಡಿ 'Z' category ಕೊಟ್ಟಿದ್ದುದನ್ನು withdraw ಮಾಡಲಾಯಿತು. ಆ ಸಂದರ್ಭದಲ್ಲಿ ಯಾವ ಸರ್ಕಾರ ಇತ್ತು? ನಾವು, ಕುಮಾರಸ್ವಾಮಿಯವರ ಸರ್ಕಾರ ಅದನ್ನು withdraw ಮಾಡಲಿಲ್ಲ. 28–5–2003ರಂದು it was decided that categorizing is not necessary, ಅವರಿಗೆ ಕೊಡುವ ಅಗತ್ಯವಿಲ್ಲವೆಂದು ನಿರ್ಣಯ ಆಗಿದೆ. ಆಗ ಯಾವ ಸರ್ಕಾರ ಇತ್ತೆಂಬುದು ತಮಗೆಲ್ಲ ಗೊತ್ತಿರುವ ವಿಷಯ. 21.8.2003ರಲ್ಲಿ gunman security was given. ಆದ್ದರಿಂದ ಸಶಸ್ತ್ರದಾರಿ ಪೇದೆ ರಕ್ಷಣೆ ಅಲ್ಲಿಂದ ಒದಗಿಸಲಾಯಿತು. ಮತ್ತೆ *21.4.2004*

ರಂದು 'Y' category ಅವರಿಗೆ ಕೊಡಲಾಯಿತು. 21.12.2004ರಂದು 'Y' category was again withdrawn. ಇದೆಲ್ಲವೂ ಯಾರ ಕಾಲದಲ್ಲಿ ಆದುದು ಅಂತ ತಮಗೆಲ್ಲ ಗೊತ್ತಿದೆ. ವಿಷಯಗಳು ಹೀಗಿದ್ದಾಗ ವಿರೋಧಕ್ಕಾಗಿ ವಿರೋಧ, ಸರ್ಕಾರದ ಮೇಲೆ ಅಪವಾದ ಕೊಡಬೇಕೆಂಬ ಕಾರಣಕ್ಕಾಗಿಯೇ ನೀವೇಕೆ ರಕ್ಷಣೆ ವಾಪಸ್ ಪಡೆದುಕೊಂಡಿರಿ ಅದರಿಂದಲೇ ಇಂತಹ ಪರಿಣಾಮವಾಯಿತು ಅಂತ ಹೇಳುವುದಾಗಿದ್ದರೆ ಉತ್ತರ ಮತ್ತು ಸತ್ಯಸಂಗತಿಗಳು ಬೇರೆ ತರಹ ಇವೆ. ಇಷ್ಟೆಲ್ಲ ಇದ್ದರೂ ನಮ್ಮ ಮೇಲೇನೆ ಅಪವಾದ ಕೊಟ್ಟಿದ್ದು ತಪ್ಪು ಅಂತ ನಾನು ಭಾವಿಸುವುದಿಲ್ಲ. ಆದರೆ ಸತ್ಯಸಂಗತಿಯನ್ನು ಸದನಕ್ಕೆ ತಿಳಿಸುವ ಜವಾಬ್ದಾರಿ ನಮ್ಮದಾಗಿರುವುದರಿಂದ ಆ ಕೆಲಸ ನಾವು ಮಾಡಿದ್ದೇವೆ. ಭಾರತದಲ್ಲಿ ಅನೇಕ ಸಂದರ್ಭಗಳಲ್ಲಿ ಏನೇನು ಆಯಿತು ಅಂತ ಹೇಳಬಹುದು. ವಾದಕ್ಕೆ ವಾದವಾಗಿ ಪ್ರತಿರೋಧ ಬರುತ್ತದೆ ಎಂಬ ಕಾರಣಕ್ಕಾಗಿ ನಾನು ಹೇಳುವುದಿಲ್ಲ. ನಿಮಗೆ ಈ ಘಟನೆಯಿಂದ ಆಗಿರುವ ಖೇದ ನಮಗೂ ಆಗಿದೆ ಮತ್ತು ನಾಚಿಕೆ ಕೂಡ ಆಗಿದೆ. ಇಂತಹ ಘಟನೆಗಳು ಆಗಬಾರದಾಗಿತ್ತು. ಆಗಿವೆ. ಮತ್ತೆ 5–4–2001ರಲ್ಲಿ the security given earlier was continued, by the DG and IGP,

however he was given two gunmen which was continued by the even to this day. ಆಗ ಒಬ್ಬನೇ gunman ಇದ್ದುದನ್ನು ನಾವು ಸಶಸ್ತ್ರ ಪಡೆಯನ್ನು 5.4.2006ರಿಂದ ನಾವು ಕೊಟ್ಟಿದ್ದೇವೆ. 7.8.2000 ರಲ್ಲಿ ಅವರನ್ನು 'x' category ಆಗಿ ಪರಿವರ್ತನೆ ಮಾಡಿ, ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದೇವೆ. On 30.06.2001 he has been again provided 'y' category protection. ಮಾನ್ಯ ವಿರೋಧ ಪಕ್ಷದ ನಾಯಕರು ಇಂಥ ಸನ್ನಿವೇಶ ಇದೆ, ಆದ್ದರಿಂದ ತಾವು ತತ್‌ಕ್ಷಣದಲ್ಲಿ ಪ್ರತಿಕ್ರಿಯಿಸಬೇಕೆಂದ ತಕ್ಷಣವೇ ಅವರ ಮಾತಿಗೆ ಗೌರವವನ್ನು ಕೊಟ್ಟು ಮತ್ತೆ 'y' categoryಯನ್ನು 30–11–2006 ಕ್ಕೆ ಮಾನ್ಯ ನಾಗಮಾರಪಲ್ಲಿಯವರಿಗೆ ಕೊಟ್ಟಿದ್ದೇವೆ. ಇದನ್ನು withdraw ಮಾಡಿದ್ದು ಹಿಂದಿನ ಸರ್ಕಾರವೇ ವಿನಾ ಅದು ನಿಮ್ಮ ಸರ್ಕಾರವೇ ವಿನಾ ನಮ್ಮ ಸರ್ಕಾರವಲ್ಲ ಎನ್ನುವುದನ್ನು ದಯಮಾಡಿ ತಾವು ಯೋಚನೆ ಮಾಡಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಅದೇ ರೀತಿಯಾಗಿ ಉಮಾಕಾಂತ್ ನಾಗಮಾರಪಲ್ಲಿಯವರಿಗೆ 'y' category in Bidar and Gulbarga on 28.01.2000, withdrawn on 20.04.2001.

ಅದರ ಮೇಲೆ ಅವರಿಗೆ gun man ನ್ನು ಕೊಟ್ಟಿದ್ದೇವೆ. ಇದನ್ನು withdraw ಮಾಡಿದ್ದು ಹಿಂದಿನ ಸರ್ಕಾರವೇ, ತಮ್ಮ ಸರ್ಕಾರವೇ, ಆಗ ಯಾರು ಗೃಹಮಂತ್ರಿಗಳಾಗಿದ್ದರೋ ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ವಿಜಯಕುಮಾರ್ ನಾಗಮಾರಪಲ್ಲಿಯವರಿಗೆ 'Y' category in Bidar and Gulbarga on 28.01.2000. ನಕ್ಸಲೈಟ್ಸ್ attack ಆಯಿತು ಎಂದು ಮಾನ್ಯ ದೇಶ್‌ಪಾಂಡೆಯವರು ತಾವು ಹೇಳಿದರಲ್ಲ, ಆ ಸಂದರ್ಭದಲ್ಲಿ ಕೊಟ್ಟಿದ್ದೇವೆ. In between he was placed in 'x' category. That is on 19.12.2000. 'x' category withdrawn on 20.04.2001. Then we were not in power at all and what was the reason at that time for the Government to withdraw it we do not know. ಮಾನ್ಯ ರಮೇಶ್ ಕುಮಾರ್ ರವರು ಏನು ಹೇಳಿದರು, ಅದನ್ನು ಇಲ್ಲಿ ಸದನಕ್ಕೆ ಹೇಳಬೇಕೆಂದು ಹೇಳಿ. ತಾವೇ ಅದಕ್ಕೆ ಉತ್ತರವನ್ನು ಕೊಡಬೇಕು. ಏಕೆಂದರೆ ಅವತ್ತಿನ ದಿವಸಕ್ಕೆ...

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಮ್ಮ Government, ನಿಮ್ಮ Government ಎಂದು ಇರುವುದಿಲ್ಲ. Government is continuous. Incidentally, you happen to be there today and someone else was there yesterday and someone else might come tomorrow. ಆ ಡೇಟ್ ಗೆ ಮಾಡಿದ್ದರೂ ಕೂಡ ಅವರು who ever is the officer who was incharge he has to substantiate the reason why he had brought about that change ಎಂದು. Otherwise, he is liable for punishment. We are not fixing responsibility on any particular person. ಇಂಥವರು X, Y ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಡಿ ಎಂದು ನಾನು ಹೇಳಲಿಲ್ಲ. Whoever is responsible for this particular act should be punished.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, Z category ಮತ್ತು Y categoryಯನ್ನು ಗುರುಪಾದಪ್ಪನವರಿಗೆ, ಅಥವಾ ವಿಜಯಕುಮಾರ್‌ಗೆ ಯಾವಾಗ ಕೊಟ್ಟರು, ಯಾವಾಗ withdraw ಮಾಡಿದರು ಎಂದು ತಾವು ಹೇಳಲಿಲ್ಲ. ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಕಳೆದ ಒಂದು ವರ್ಷದಲ್ಲಿ

ಗುರುಪಾದಪ್ಪ ನಾಗಮಾರಪಲ್ಲಿಯವರು ಅಥವಾ ವಿಜಯಕುಮಾರ್‌ರವರು ಸರ್ಕಾರಕ್ಕೆ ನಮಗೆ ಸಂರಕ್ಷಣೆ ಬೇಕು ಎಂದು ಲಿಖಿತ ಮೂಲಕ ತಿಳಿಸಿದ್ದರೇನು? ಲಿಖಿತ ಮೂಲಕ ತಿಳಿಸಿದ್ದರೆ ಅದರ ಮೇಲೆ ತಾವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಉತ್ತರ ಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಕೇಳುವವರ ಮುಂದೆ ಹೇಳುವವರು ಯಾವಾಗಲೂ ಕೂಡ ಸ್ವಲ್ಪ ಅಡಿಯಾಗೇ ಇರುತ್ತಾರೆ. ನೀವು ಮಾತನಾಡುವ ಸಂದರ್ಭದಲ್ಲಿ ಹೇಳಿದಿರಿ, ಕಾಂಗ್ರೆಸ್‌ನ ಸದಸ್ಯರು ಆಗಿರುವ ಕಾರಣಕ್ಕಾಗಿಯೇ ನೀವು category ಕೊಟ್ಟಿರುವುದನ್ನು withdraw ಮಾಡಿದಿರಾ. ಈ ತರಹದ ಆಪಾದನೆಯನ್ನು ತಾವು ಮಾಡಿದಿರಿ. ನೀವಲ್ಲ. ವಿರೋಧ ಪಕ್ಷದ ನಾಯಕರು ಹೇಳುವಾಗ ಕಾಂಗ್ರೆಸ್ ಸದಸ್ಯರು ಎಂದು ಹೇಳಿ withdraw ಮಾಡಿದಿರಾ ಎನ್ನುವ ಪ್ರಶ್ನೆಯನ್ನು ಎತ್ತಿದರು. ಏಕೆ? ಅದರಿಂದ ಅದನ್ನು ನಾನು ತಪ್ಪು ಎಂತಲೂ ಕೂಡ ಹೇಳುವುದಿಲ್ಲ. ಈಗ ಪ್ರಶ್ನೆ ಇಲ್ಲಿ ಬಂದಿರುವುದು ಏಕೆ withdraw ಮಾಡಿದರು ಎನ್ನುವ ಬಗ್ಗೆ, ಅವತ್ತಿನ ಕಾಲಕ್ಕೆ ಸಕಾರಣಗಳಿರಬಹುದು. ರಕ್ಷಣೆಯ ಅವಶ್ಯಕತೆ ಇಲ್ಲ ಎನ್ನುವ ತೀರ್ಮಾನಕ್ಕೆ ಬಂದಿರಬಹುದು. ಆ ಕಾರಣಕ್ಕಾಗಿಯೇ ತಾವು ಕೂಡ ಮಾತನಾಡುತ್ತಾ ಹೇಳಿದಿರಿ, ಅನೇಕರು ಈ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ವಿನಾಕಾರಣ ತಾವೇ ತಮ್ಮ ಮಟ್ಟಿಗೆ ಬರೆದುಕೊಂಡು ರಕ್ಷಣೆಯನ್ನು ತೆಗೆದುಕೊಳ್ಳತಕ್ಕದ್ದು status symbol ಆಗಿದೆ ಎನ್ನುವ ರೀತಿಯಲ್ಲಿ, ಇತ್ತೀಚಿನ ದಿನಮಾನಗಳು ನಡೆಯುತ್ತಿವೆ. ಆ ಕಾರಣಕ್ಕಾಗಿ ಕೂಡ ಉಮಾಕಾಂತ್‌ಗೆ ಕೊಟ್ಟಿರತಕ್ಕದ್ದಾಗಲಿ, ವಿಜಯಕುಮಾರ್ ನಾಗಮಾರಪಲ್ಲಿಯವರಿಗೆ ಕೊಟ್ಟಿರುವುದಾಗಲಿ, ಗುರುಪಾದಪ್ಪ ನಾಗಮಾರಪಲ್ಲಿ ಯವರಿಗೆ ಕೊಟ್ಟಿರತಕ್ಕದ್ದಾಗಲಿ, ಕೊಟ್ಟಂಥದ್ದು ಹಿಂದಿನ ಸರ್ಕಾರ, ವಾಪಸ್ ತೆಗೆದುಕೊಂಡಿರುವುದೂ ಹಿಂದಿನ ಸರ್ಕಾರ. ತಾವು ಹೇಳಿದಂತೆ, ಸರ್ಕಾರ continuous ಎನ್ನುವುದನ್ನು ಒಪ್ಪುತ್ತೇನೆ. ಜನಸಾಮಾನ್ಯರು ಹೇಳತಕ್ಕದ್ದು ಕಾಂಗ್ರೆಸ್ ಸರ್ಕಾರ, ಜಾತ್ಯಾತೀತ ಜನತಾದಳ ಸರ್ಕಾರ, ಸಮ್ಮಿಶ್ರ ಸರ್ಕಾರ ಎನ್ನುವ ಮಾತನ್ನು ಏಕೆ ಹೇಳುತ್ತಾರೆಂದರೆ, ಅದು ವಾಡಿಕೆಯಾಗಿ, ವ್ಯವಹಾರಿಕವಾಗಿ ಹೇಳುವ ಮಾತು. ಸರ್ಕಾರವೆಂದರೆ ಅದು ಸರ್ಕಾರವೇ. ಅದು ಕನ್ನಡಿಗರ ಸರ್ಕಾರ. ಅದು ಯಾರೊಬ್ಬರ ಸರ್ಕಾರವೋ, ಯಾವ ಪಕ್ಷದ ಸರ್ಕಾರವೋ ಅಲ್ಲ. ಕನ್ನಡಿಗರ ಸರ್ಕಾರ. ಕನ್ನಡಿಗರ ಸರ್ಕಾರದಲ್ಲಿ ಯಾರು ಈ

ತರಹದ ನಿರ್ಧಾರಗಳನ್ನು ತೆಗೆದುಕೊಂಡಿದ್ದರು ಎನ್ನುವುದು ನಮಗೆ ಗೊತ್ತಿಲ್ಲ. ತಮಗೆ ಮಾಹಿತಿ ಬೇಕೆಂದರೆ ನಂತರದ ದಿನಮಾನಗಳಲ್ಲಿ ಅಥವಾ Governor's address ಸಂದರ್ಭದಲ್ಲಿ ನಾವು ಕೊಡುತ್ತೇವೆ. ಈಗ ಆ ಆಜ್ಞೆಯನ್ನು ಮಾಡಿದವರು ಯಾರು ಎನ್ನುವುದರ ಬಗ್ಗೆ ತಮ್ಮಲ್ಲಿ ಮಾಹಿತಿ ಇದ್ದರೆ ಕೊಡಬಹುದು ಎಂದು ಹೇಳಿದೆನೆ ವಿನಾಃ ಇದು continuous process ಅಲ್ಲ ಎನ್ನುವ ಪ್ರಶ್ನೆಯೇ ಇಲ್ಲ. ಅವತ್ತು ಯಾವ ಯಾವ ಪೊಲೀಸ್ ಅಧಿಕಾರಿಗಳಿದ್ದರೋ ಇವತ್ತೂ ಅದೇ ಪೊಲೀಸ್ ಅಧಿಕಾರಿಗಳಿದ್ದಾರೆ. ಆಯಾ ಪೊಲೀಸ್ ಅಧಿಕಾರಿಗಳು ಅವತ್ತು ಒಂದು ಜಾಗದಲ್ಲಿದ್ದಿರಬಹುದು, ಮತ್ತೊಬ್ಬರು ಬೇರೆ ಜಾಗದಲ್ಲಿ ಇರಬಹುದು.

ಶ್ರೀ ಕೆ.ಆರ್.ರಮೇಶ್ ಕುಮಾರ್: As a matter of principle ನಾನು ಹೇಳಿದೆ. ನಮ್ಮ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರವಿದ್ದರೂ ಯಾರೇ ಮುಖ್ಯಮಂತ್ರಿಯಾದರೂ ಕೂಡ ಕೆಲವು chosen post ಗೆ ಕೆಲವರೇ ಬರುತ್ತಾರೆ. ಅದು not based on merit or their capacity. It is based on their access to men in power. ಆದ್ದರಿಂದ ಇಂಥ ಅನಾಹುತಗಳಾಗುತ್ತೆ. ಇವತ್ತು ಆಗಿರಲಿ. ಅವತ್ತು ಆಗಿರಲಿ. ಅದಕ್ಕೆ end ಬೀಳಬೇಕು. Undeserving people ಇಂಥ prime post ಗೆ ಬಂದು irresponsible decisions ನ್ನು ತೆಗೆದುಕೊಂಡಾಗ ಇಂಥ ದುರ್ಘಟನೆಗಳೆಲ್ಲ ನಡೆಯುತ್ತವೆ. ಅದು ಆಗಬಾರದು ಎಂದು ಈಗಲೂ ಕೂಡ I stand by that. ನಿನ್ನೆ ಇದ್ದ ಸರ್ಕಾರದಲ್ಲಿ ನಮ್ಮ ಚಿಕ್ಕಮ್ಮನ ಮಗ ಇರಲಿಲ್ಲ. ನಾಳೆ ಬರುವ ಸರ್ಕಾರದಲ್ಲಿ ನಮ್ಮ ದೊಡ್ಡಮ್ಮನ ಮಗ ಬರುವುದಿಲ್ಲ. ಯಾರು ಚಿಕ್ಕಮ್ಮನ ಮಕ್ಕಳು, ದೊಡ್ಡಮ್ಮನ ಮಕ್ಕಳು ತಾವು ಅಧಿಕಾರಕ್ಕೆ ಬಂದಾಗ ಇಂಥ ಸ್ಥಾನಗಳಿಗೆ ಬಂದಿರುತ್ತಾರೆ, ಅವರು ಯಾರು ಎನ್ನುವುದು ಗೊತ್ತಾಗಲಿ. ಅದು ಹಿಂದಿನವರಾಗಲಿ, ಇವತ್ತಿನವರಾಗಲಿ. Let the truth be made known to people.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ತಾವೇನು ತತ್ವಗಳನ್ನು ಪ್ರತಿಪಾದಿಸಿದ್ದೀರಿ, ಆ ತತ್ವವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಇಡೀ ಮನುಕುಲದಿಂದ ಎಲ್ಲ ಕಾಲದಲ್ಲೂ ಕೂಡ ಅಧಿಕಾರ, ಹಣ, ತೋಳ್ಬಲ ಇರತಕ್ಕ ಜನಗಳ ಜೊತೆಗೆ ಈ ರೀತಿ ವಂಧಿಮಾಗಧರು ಇದ್ದಾರೆ. ನಾಚಿಕೆಗೇಡಿನ

ಪ್ರಸಂಗವೆಂದರೆ, ರಾಜಾಧಿರಾಜ ಬರುತ್ತಿದ್ದಾರೆಂದರೆ ವಂಧಿಮಾಗಧರ ಮೂಲಕ ಕೂಗಿಸತಕ್ಕಂಥ ವ್ಯವಸ್ಥೆ ಈ ದೇಶದಲ್ಲಿತ್ತು. ಈಗ ಈ ರೀತಿ ಸಂಬಳ ಕೊಟ್ಟುಇಟ್ಟುಕೊಂಡಿರುವ ವಂಧಿಮಾಗಧರಿಲ್ಲ. ನಾವೆಲ್ಲರೂ ಕೂಡ ಒಂದು ತರಹ ಆ ರೀತಿ ವಂಧಿಮಾಗಧರಾಗಿದ್ದೇವೆ. ನಮ್ಮ ನಮ್ಮ ಸ್ವಹಿತ ಹಿತಾಸಕ್ತಿಗಳನ್ನು ಕಾಪಾಡಲಿಕ್ಕೆ ಬಲಿಷ್ಟರು ಯಾರಿದ್ದಾರೆ, ಆ ಬಲಿಷ್ಟರ ಬಗ್ಗೆ ಸಂದರ್ಭ ಬಂದಾಗ ನಾವು ಹೇಳುವುದಿಲ್ಲ, ಬಾಯಿ ತೆಗೆಯುವುದಿಲ್ಲ. ಇದ್ದುದರಲ್ಲೇ ಬಹಳ ಜಾಣತನದಿಂದ ತಪ್ಪಿಸಿಕೊಂಡು ಹೇಳಿದ ಹಾಗೂ ಆಗಿರಬೇಕು, ನಿಷ್ಠೂರವೂ ಆಗಬಾರದು, ಈ ತರಹದಲ್ಲಿ ನನ್ನನ್ನು ಸೇರಿ ನಡೆದುಕೊಳ್ಳುತ್ತಿರುತ್ತೇವೆ. ಎಲ್ಲರೂ ಕೂಡ ಆ ರೀತಿಯ ರಾಜಕೀಯ ಜಾಣ್ಮೆಯನ್ನು ತೋರಿಸುತ್ತಲೇ ಇರುತ್ತೇವೆ. ಅಧಿಕಾರಿಗಳೊಬ್ಬರ ಮೇಲೆ ಏಕೆ ಹೇಳುವುದು, ಇಡೀ ವ್ಯವಸ್ಥೆ ಸುವ್ಯವಸ್ಥೆಯಾಗಲಿಕ್ಕೆ ನಮ್ಮಂಥ ನಾಯಕರುಗಳು ಕೂಡ ಕಾರಣರಾಗಿದ್ದೇವೆ.ಎಲ್ಲಿ ನಿಷ್ಠುರವಾಗಿ ಹೇಳಬೇಕೋ ಅಲ್ಲಿ ನಿಷ್ಠುರವಾಗಿ ಹೇಳುವುದಿಲ್ಲ. ನಿಷ್ಠುರವಾಗಿ ಹೇಳಿದರೆ ಒಂಟಿಯಾಗತಕ್ಕ ಅಪಾಯಗಳಿರುತ್ತವೆ. ಒಂಟಿಯಾಗಿರುವವರನ್ನು ಸಂಪೂರ್ಣವಾಗಿ ಕಡೆಗಣಿಸಿರತಕ್ಕದ್ದೂ ಇದೆ. ಈ ಎಲ್ಲ ವ್ಯವಸ್ಥೆಗೆ ನಾವು ಕೂಡ ಕಾರಣೀಭೂತರಾಗಿದ್ದೇವೆನ್ನುವ ಮಾತನ್ನು ತಾವೇನು ಪ್ರತಿಪಾದಿಸಿದ್ದೀರಿ, ಇದಕ್ಕೆ ನನ್ನ ಸಂಪೂರ್ಣವಾದ ಸಹಮತ ಇದೆ. ಆದರೆ ಇಲ್ಲಿ ಬಂದಿರುವ ಪ್ರಶ್ನೆ, ಮಾನ್ಯ ಮಾಧುಸ್ವಾಮಿಯವರು ಹೇಳಿದರು, ನೀವು ಸರ್ಕಾರದವರು ಹೋಗ ಬಹುದಾಗಿತ್ತೆಂದು ಹೇಳಿ, ನಾನು ಹೋಗಲಿಲ್ಲ ಎನ್ನುವುದನ್ನು ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಮಾನ್ಯ ಬಂಡೆಪ್ಪ ಕಾಶಂಪೂರ್ ಅವರು ಅವರ ಮನೆಗೆ ಹೋಗಿದ್ದಾರೆ. ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನು ಇಟ್ಟಿದ್ದಾರೆ. ಅಂತ್ಯಕ್ರಿಯೆಯಲ್ಲೂ ಪಾಲ್ಗೊಂಡಿದ್ದಾರೆ. ಸರ್ಕಾರದ ಪರವಾಗಿ ಸಾಂತ್ವನವನ್ನು ಹೇಳಿದ್ದಾರೆ. ನಮ್ಮ ಪಕ್ಷದ ಹಿರಿಯ ನಾಯಕರು, ಮಾಜಿ ಮಂತ್ರಿಗಳು ಆಗಿದ್ದ ಮಾನ್ಯ ಮಿರಾಜುದ್ದೀನ್ ಪಾಟೀಲರು ಕೂಡ ಅವರ ಮನೆಗೆ ಹೋಗಿದ್ದಾರೆ. ಅವರು ಅಲ್ಲಿ ಹೋಗಿ ಭಾಗವಹಿಸಿದ್ದಾರೆ. ಸಾಂತ್ವನವನ್ನು ಕೂಡ ಹೇಳಿದ್ದಾರೆ. ಈ ದೃಷ್ಟಿಯಿಂದ ತಾವೇನು ಹೇಳುತ್ತೀರಿ, ಅದರಿಂದ ನಾವು ಕಲಿಯಬೇಕಾದ ಪಾಠ ತಾವು ಹೇಳಿದಂತೆ ಹೋಗಬಹುದಾಗಿತ್ತು. ನಾನು ಕೂಡ ಹೋಗಿ ಬರುತ್ತೇನೆ. ಒಂದೊಂದು ಸಂದರ್ಭಗಳಲ್ಲಿ ಎಚ್ಚರ ತಪ್ಪುತ್ತೇವೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆ ಕಾರಣಕ್ಕಾಗಿಯೇ ಕ್ಷಮೆ ಇರಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇದೇ ರೀತಿಯಾಗಿ ಬೇರೆ ಸಂದರ್ಭಗಳಲ್ಲಿ ಇಲ್ಲಿ CBI enquiry ಆದರೆ ಚೆನ್ನಾಗಿ ಆಗುತ್ತದೆ, ಈ ಪೋಲೀಸರು ನೇರವಾಗಿ ನಮ್ಮ

ಮೂಗಿನ ಕೆಳಗಡೆಯೇ ಕೆಲಸವನ್ನು ಮಾಡುತ್ತಾರೆಂದು ತಾವು ಹೇಳಬಹುದು. CBI ನಲ್ಲಿ ಕನ್ನಡ ನಾಡಿನಲ್ಲಿ ರಾಜ್ಯದಲ್ಲಿರುವ ಅಧಿಕಾರಿಗಳು CBI ನಲ್ಲಿ ಕೆಲಸವನ್ನು ಮಾಡಿದ್ದಾರೆ. ಕಾರ್ತಿಕೇಯನ್ ಅವರು ಅಲ್ಲಿ ನಿರ್ದೇಶಕರಾಗಿದ್ದರು. ರಾಮಾನುಜಂ ಅವರು ಅದೇ ರೀತಿಯಾಗಿ ರೇವಣಸಿದ್ದಯ್ಯನವರು ಅಲ್ಲಿ ಕೆಲಸವನ್ನು ಮಾಡಿದ್ದರು. ಜೋಗೀಂದ್ರಸಿಂಗ್ ಅವರು ಡೈರೆಕ್ಟರ್ ಆಗಿ ಕೆಲಸವನ್ನು ಮಾಡಿದ್ದರು. ಅವರು ಆ ಭಾಗದಲ್ಲಿ ಕೆಲಸವನ್ನು ಮಾಡಿ CBI ನ inside storyಯನ್ನು ಬಹಳ ಉತ್ತಮವಾದ ಪುಸ್ತಕವನ್ನಾಗಿ ಬರೆದಿದ್ದಾರೆ. ಯಾರಾದರೂ ಇಲ್ಲಿ ಇರುವವರು ಅಲ್ಲಿಯೂ ಇರುತ್ತಾರೆ. ಅಲ್ಲಿರುವವರೂ ಇಲ್ಲಿಗೂ ಬರುತ್ತಾರೆ. ಅವರವರ ಕರ್ತವ್ಯಗಳನ್ನು ಮಾಡುವಾಗ. ಆ ಸಂದರ್ಭದಲ್ಲಿ ಇಲ್ಲಿ ಇದ್ದ CBI ಜನಗಳಿಗೆ ಇದೇ ಮಾತನ್ನು ನಾನು ತಾರ್ಕಿಕವಾಗಿ ಮುಂದುವರಿಸಿದರೆ UPA ಸರ್ಕಾರದ ಮೂಗಿನ ನೇರದಲ್ಲಿ ಕೆಲಸ ಮಾಡುವ CBI ಅಧಿಕಾರಿಗಳು ಇಲ್ಲಿ ತಾವು ಹೇಗೆ ಭಾವಿಸಿದ್ದೀರಿ COD ಮೂಲಕ ಈ ರೀತಿಯಾದಂಥ ಪಕ್ಷಪಾತವಾದ ವರದಿ ಬರಬಹುದೆಂದು ಹೇಳಿ ಹಾಗೆ ಬರುತ್ತದೆಂದು ನಾನೇನು CBI ನವರ ಮೇಲೆ ಹೇಳುವುದಿಲ್ಲ. ಆದರೆ ಹಾಗೆ ನಾವು ಹೇಳಬಹುದೆಂದು ತಾರ್ಕಿಕವಾಗಿ ನಾವು ಮಾತನಾಡಲಿಕ್ಕೆ ಶುರುಮಾಡಿದರೆ ಅಂತಿಮ ಹೇಗಿರುತ್ತದೆ, ಯಾವುದೇ ಒಂದು ಘಟ್ಟದಲ್ಲಿ ನಾವು ಕೊನೆಯಲ್ಲಿ ಪರದೆಯನ್ನು ಎಳೆಯಬೇಕಾಗುತ್ತದೆ. ಹಾಗಾದರೆ ನ್ಯಾಯಾಧೀಶರನ್ನು ನೇಮಕ ಮಾಡತಕ್ಕಂಥವರು ರಾಷ್ಟ್ರಪತಿಗಳು. ರಾಷ್ಟ್ರಪತಿಗಳನ್ನು ಆಯ್ಕೆ ಮಾಡತಕ್ಕಂಥದ್ದು ಬಹುಮತ ಇರುವ ಪಕ್ಷ. ಆ ಕಾರಣದಿಂದ ತೆಗೆದುಕೊಂಡರೆ egg comes out of egg ಎನ್ನುವ ರೀತಿ fallacy ಆಗುತ್ತದೆ ಅಷ್ಟೇ. ಎಲ್ಲಾದರೂ ಒಂದು ಕಡೆಗೆ ನಾವು ಮಾಡಬೇಕಾಗುತ್ತದೆ. ಇದು argument ಎಲ್ಲಿವರೆಗೆ ಇರುತ್ತದೆಂದರೆ hen comes out of egg, egg comes out of hen, therefore egg comes out of egg ಎನ್ನುವ ರೀತಿ ವಾತಾವರಣವಾದರೆ ಪ್ರಾಯಶ: ಎಲ್ಲದನ್ನೂ ಕೂಡ ನಾವು ಅನುಮಾನದಿಂದ ಕಾಣಬೇಕಾದ ಪ್ರಸಂಗಗಳು ಬರುತ್ತವೆ.

ಇಲ್ಲಿ ನಮ್ಮ ಸರ್ಕಾರ ತತ್ಕ್ಷಣದಲ್ಲಿ ನಿರ್ಧಾರ ಮಾಡಿದೆ. ನಿಷ್ಕ್ರಿಯವಾಗಿರುವ ಪೊಲೀಸ್ ಅಧಿಕಾರಿಗಳ ಬಗ್ಗೆ ನಮಗೂ ನಾಚಿಕೆ ಇದೆ. ಅವರು ಕೆಲಸ ಮಾಡಬೇಕಾಗಿತ್ತು, ಮಾಡಿಲ್ಲ. ಆ ಕೆಲಸ ಮಾಡಿಲ್ಲ ಎನ್ನುವುದಕ್ಕಾಗಿಯೇ ಅವರಿಗೆ ಅಮಾನತ್ತಿನ ಶಿಕ್ಷೆ ಕೊಟ್ಟಿದ್ದೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: You have been a minister for a long time. ಪ್ರಾಮಾಣಿಕವಾಗಿ ಒಂದು ಮಾತು. General ಆಗಿ ಕರ್ನಾಟಕಕ್ಕೆ CODಗೆ ನಾವು ಯಾರನ್ನು ಹಾಕುತ್ತೇವೆ? ಯಾವುದೇ ಸರ್ಕಾರ ಇರಲಿ, CODಗೆ ಯಾರನ್ನು ಹಾಕುತ್ತೇವೆ? ಯಾರಿಗೆ influence ಇಲ್ಲವೋ, ಯಾರಿಗೆ ದಿಕ್ಕಿಲ್ಲವೋ..

ಶ್ರೀ ಎಂ.ಪಿ.ಪ್ರಕಾಶ್: Sir, you are a member of this Assembly for a long time. Please enlighten me.

ಶ್ರೀ ಕೆ.ಆರ್.ರಮೇಶ್‌ಕುಮಾರ್: Generally, ಯಾರಿಗೆ ರಾಜಕೀಯವಾಗಿ ಬೆಂಬಲ ಇರುವುದಿಲ್ಲವೋ, ಜಾತಿ ಬಲ ಇರುವುದಿಲ್ಲವೋ, ಯಾರಿಗೆ ದಿಕ್ಕು ಇರುವುದಿಲ್ಲವೋ, ಅಂತಹವರನ್ನು ಅಲ್ಲಿ ಹೋಗಿ ಬಿದ್ದಿರು ಎಂದು CODಗೆ ಹಾಕುವುದು. CBIಗೆ ಅಂತಹವರನ್ನು ಕಳುಹಿಸುವುದಿಲ್ಲ. CBI posting is a prestigious posting. This is a truth known to the whole world. ನೀವು ಇಲ್ಲವೆಂದು ಹೇಳಿದರೂ ಕೂಡ truth is known to the whole world. CBIಗೆ Chief ಆಗಬೇಕಾಗಿದ್ದರೆ, it is considered as a matter of prestige, it is an honour in one's service. Not in the case of COD. Don't try to draw a parlance.

ಅಧ್ಯಕ್ಷರು: ರಮೇಶ್‌ಕುಮಾರ್‌ರವರೆ, ಈಗ ತಾವು ಮಾತನಾಡುತ್ತಾ, ರಾಜಕೀಯವಾಗಿ ಬೆಂಬಲ ಇಲ್ಲದೇ ಇರತಕ್ಕಂಥವರನ್ನು ಹಾಕುತ್ತಾರೆಂದು ಹೇಳಿದಿರಿ. ಈಗ ಕೆಲಸ ಮಾಡದೇ ಇರತಕ್ಕಂಥವರು, ರಾಜಕೀಯವಾಗಿ ಬೆಂಬಲ ಇರುವವರು ಒಳ್ಳೊಳ್ಳೆಯ ಪೋಸ್ಟ್‌ಗೆ ಹೋಗುವವರು. ಅಂದರೆ, CODಗೆ ಹೋಗುವವರು ದಕ್ಷರೂ ಇರಬಹುದು. ನೀವೇಕೆ ಆ ರೀತಿ ಯೋಚನೆ ಮಾಡುತ್ತೀರಿ? ಮಂತ್ರಿಗಳ ಹಿಂದೆ ತಿರುಗುವವರು, ಕೆಲಸ ಮಾಡದೇ ಇರತಕ್ಕಂಥವರು, ಅದಕ್ಷರು...

ಶ್ರೀ ಕೆ.ಆರ್.ರಮೇಶ್‌ಕುಮಾರ್: ಅರಿಸ್ಟಾಟಲ್, ಸಾಕ್ರಟೀಸ್ ತರ್ಕ introduce ಮಾಡಿದ್ದಕ್ಕೆ, ಅಧ್ಯಕ್ಷರು ತಾರ್ಕಿಕವಾಗಿ ಮಾತನಾಡಿದ್ದಕ್ಕೆ, ತರ್ಕಕ್ಕೆ ಒಂದು ಅರ್ಥ ಇದೆಯೆಂದು ನಮಗೆ ಈಗ ಮನವರಿಕೆಯಾಗಿದೆ. I am extremely happy now.

ಶ್ರೀ ಎಂ.ಪಿ.ಪ್ರಕಾಶ್: ಯಾವಾಗಲಾದರೊಮ್ಮೆ ಮಾತನಾಡಿದವರು ಬಹಳ ಸತ್ಯ ಹೇಳುತ್ತಾರೆ. ಬಹಳ ಮಾತನಾಡುವವರು ಸತ್ಯ ಹೇಳುವುದಿಲ್ಲ. ನಾವು ಬರೀ ಜಾಣ್ಮೆ ತೋರಿಸುತ್ತಿರುತ್ತೇವೆ ಅಷ್ಟೆ.

ಶ್ರೀ ಕೆ. ಶ್ರೀನಿವಾಸಗೌಡ: ಮುಖಕ್ಕೆ ನೇರವಾಗಿ ಆಗಬಹುದೆಂಬ ಭಯವಿದೆ ಅಥವಾ ನಮ್ಮ ಮುಖಕ್ಕೆ ನೇರವಾಗಿ ಇಲ್ಲಿ COD ನಮ್ಮ controlನಲ್ಲಿದೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರವೇ, ನಾನು ಆಗಲೇ ಹೇಳಿದ್ದು. ರಾಮಕೃಷ್ಣ ಹೆಗಡೆಯವರು ಜನತಾದಳ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಅಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ರಷೀದ್ ಕೊಲೆ ಪ್ರಕರಣವನ್ನು CBIಗೆ ವಹಿಸಬೇಕಾದರೆ, ಅವೊತ್ತು ಇದೇ ತರ್ಕವನ್ನು ಯೋಚನೆ ಮಾಡಬಹುದಿತ್ತು. ತಾವು ಮಂತ್ರಿಯಾಗಿದ್ದಿರಿ, ಇಲ್ಲಿದ್ದಿರಿ.

ಶ್ರೀ ಎಂ.ಪಿ.ಪ್ರಕಾಶ್: ನಿಮಗೆ ಹಾಗೆ ಗೊತ್ತಿರಬಹುದು. ರಷೀದ್ ಕೊಲೆ ಸಂದರ್ಭದಲ್ಲಿ CBIಗೆ ಮಾನ್ಯ ರಾಮಕೃಷ್ಣ ಹೆಗಡೆ enquiryಯನ್ನು suo moto ಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ರಾಜ್ಯ ಸರ್ಕಾರದ ಒಪ್ಪಿಗೆ ಪಡೆಯಬೇಕೆಂದು ನಿರ್ಧಾರ ಮಾಡಿದರು. ಆ ಸಂದರ್ಭದಲ್ಲಿ ಆ ಆಪಾದನೆಗೊಳಗಾಗಿದ್ದ ಮಾನ್ಯ ಜಾಲಪ್ಪನವರು ಸ್ವತ: ಹೇಳಿದರು. CBI enquiryಗೆ ಕೊಡಿ, ನನ್ನದೇನೂ ಆಕ್ಷೇಪಣೆ ಇಲ್ಲವೆಂದು ಹೇಳಿದರು. ಆ ಕಾರಣಕ್ಕೆ CBIಗೆ ಕೊಟ್ಟಿದ್ದು. ಅದರಿಂದ ಏನಾಯಿತೆಂದು ಗೊತ್ತಿದೆ. ಚಿತ್ತರಂಜನ್‌ರವರ ಕೊಲೆ ಪ್ರಕರಣದಲ್ಲಿ CBIಗೆ ಕೊಟ್ಟಿದ್ದೇವೆ. ಏನಾಗಿದೆ ಎಂಬುದು ನಮಗೆ ಗೊತ್ತಿದೆ. ಆದರೂ ಕೂಡ ಬರೀ RAWನಲ್ಲಿರತಕ್ಕಂಥಾದ್ದು prestigious post ಎಂದು ತಾವು ಹೇಳುತ್ತೀರಿ. RAWದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿ, ಸಂಬಂಧಪಟ್ಟಿರತಕ್ಕ ಗುರುತರವಾದ ರಹಸ್ಯ ದಾಖಲೆಗಳನ್ನು ತೆಗೆದುಕೊಂಡು ಕಣ್ಮರೆಯಾಗಿರುವ ವ್ಯಕ್ತಿಯನ್ನು ಇವೊತ್ತಿನವರೆಗೂ ಕಂಡುಹಿಡಿಯುವುದಕ್ಕೆ ನಮ್ಮಿಂದ ಸಾಧ್ಯವಾಗಿಲ್ಲ. ಆತ ಎಲ್ಲಿದ್ದಾನೆಂದೂ ಗುರ್ತು ಹಿಡಿಯುವುದಕ್ಕೂ ಆಗಿಲ್ಲ. ತಾವು ಹೇಳಿದಂತೆ CBI prestigious post ಎನ್ನತಕ್ಕಂಥ ಮಾತು ಇದ್ದರೂ ಕೂಡ.

ಶ್ರೀ ಕೆ.ಆರ್.ರಮೇಶ್‌ಕುಮಾರ್: CBIನಲ್ಲಿ ಸೆಕ್ಷನ್ 5 ಮತ್ತು 6 ಅನ್ನು ಏಕೆ ಇಟ್ಟಿದ್ದಾರೆ? Federal Structureನಲ್ಲಿ ಕೇಂದ್ರ ಸರ್ಕಾರದವರು ಆ ರೀತಿ ಮಾಡಬಹುದೆನ್ನುವ ಕಾರಣಕ್ಕೆ Section 5 ಮತ್ತು 6 ಅನ್ನು ಇಟ್ಟುಕೊಂಡು, according to Section 5, ರಾಜ್ಯ ಸರ್ಕಾರದವರು ಸಮ್ಮತಿ ಕೊಟ್ಟರೆ ಮಾತ್ರ

enquiry ಮಾಡಲು CBIನವರು ಇಲ್ಲಿಗೆ ಬರುತ್ತಾರೆ. unless we give consent, suo moto they cannot come. ಆ provision ಏಕೆ ಇಟ್ಟಿದ್ದಾರೆಂದರೆ, federal structureನಲ್ಲಿ ಇದು revengeful ಆಗಬಾರದೆಂಬ ಕಾರಣಕ್ಕಾಗಿಯೇ ಅದನ್ನು ಇಟ್ಟಿರತಕ್ಕಂಥಾದ್ದು.

ಶ್ರೀ ಎಂ.ಪಿ.ಪ್ರಕಾಶ್: ತಮ್ಮ ನೆನಪಿನ ಶಕ್ತಿ ಅಗಾಧವಾಗಿದ್ದರೂ ತಮಗೆ ಜ್ಞಾಪಕ ಮಾಡಿಕೊಡತಕ್ಕಂಥ ರೀತಿಯಲ್ಲಿ ಹೇಳುತ್ತಿದ್ದೇನೆ. ದೇವರಾಜ್ ಅರಸುರವರ ಕಾಲದವರೆಗೂ ಕೂಡ Section 5 and 6ನಲ್ಲಿ CBIನವರು ಅವರಷ್ಟಕ್ಕೆ ಬಂದು enquiry ಮಾಡತಕ್ಕಂಥಾದ್ದು ಇತ್ತು. ಆದರೆ, ದೇವರಾಜ್ ಅರಸುರವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ವ್ಯತಿರಿಕ್ತವಾದ ಸರ್ಕಾರಗಳು ಕೇಂದ್ರದಲ್ಲಿದ್ದಾಗ ಈ ರೀತಿ ಅವರ ಮೇಲೆ ದ್ವೇಷದ ಭಾವನೆ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂಬ ಕಾರಣಕ್ಕೆ ರಾಜ್ಯ ಸರ್ಕಾರದ ಪರವಾನಗಿ ಇಲ್ಲದೇ CBIನವರು ಇಲ್ಲಿ ನಿಮ್ಮಷ್ಟಕ್ಕೆ ನೀವು enquiry ಮಾಡಬಾರದೆಂದು ಹೇಳಿದರು.

ಶ್ರೀ ಕೆ.ಆರ್.ರಮೇಶ್‌ಕುಮಾರ್: 1972ರಲ್ಲಿ ಮುಖ್ಯಮಂತ್ರಿಯಾದಾಗ ಮಾಡಲಿಲ್ಲ. 1978ರಲ್ಲಿ ಮುಖ್ಯಮಂತ್ರಿಯಾದಾಗ, ಡಿಸೆಂಬರ್ 31ರ ಮಧ್ಯರಾತ್ರಿಗೆ ಕರ್ನಾಟಕ ವಿಧಾನಸಭೆಯನ್ನು dissolve ಮಾಡಿದರು. ನಾನಾ ರೀತಿಯ ಕಷ್ಟ ಕೊಟ್ಟರು. ಅವೊತ್ತು ದೇವರಾಜ್ ಅರಸುರವರು ಆ ಸ್ಥಾನದಲ್ಲಿ ನಿಂತುಕೊಂಡು ಹೇಳಿದರು. ಪ್ರಜಾಪ್ರಭುತ್ವದಲ್ಲಿ ನಿಮಗೆ ನಂಬಿಕೆಯಿಲ್ಲ, ಮಾರನೇ ದಿವಸ ಅಸೆಂಬ್ಲಿ ಅಧಿವೇಶನ ಆಗಬೇಕಾಗಿತ್ತು, ಹಿಂದಿನ ಮಧ್ಯರಾತ್ರಿಯಲ್ಲಿ ನೀವು ಸರ್ಕಾರವನ್ನು ವಜಾ ಮಾಡಿದಿರಿ, ನೀವು ರಾಜಕೀಯವಾಗಿ ದ್ವೇಷ ಸಾಧಿಸುತ್ತೀರಿ. With reference to Devaraj Urs ಇವೊತ್ತು CBI enquiry ಮಾಡಲಿ, ನಾನು ready ಆಗಿದ್ದೇನೆ. ಆದರೆ, ನನ್ನ ಸಹೋದ್ಯೋಗಿಗಳ ಮೇಲೆ ದ್ವೇಷ ಸಾಧಿಸುತ್ತೀರೆಂಬ ಅನುಮಾನವಿದೆ. ಆದುದರಿಂದ, ನಾನು ಈ amendment ಅನ್ನು move ಮಾಡುತ್ತಿದ್ದೇನೆಂದು ಅವರು ಅಂದು ಹೇಳಿದರು. It is there in the records. Late K.Puttaswamy was in this House. Unfortunately, ಅವರು 3 ತಿಂಗಳು ಇದ್ದರು. ಅನಂತರ, ಹೃದಯಾಘಾತದಿಂದ ತೀರಿಕೊಂಡರು. ಆ ವಿಚಾರದಲ್ಲಿ ಸದನದಲ್ಲಿ ಮೂರು ದಿವಸಗಳ ಕಾಲ ಚರ್ಚೆಯಾಯಿತು. It was even thought that Late R.N.Byrareddy who was Advocate General should be summoned

to the House to give his views. You can go through the records. Mr.Devaraj Urs substantiated his action fully with justification.

ಶ್ರೀ ಎಂ.ಪಿ.ಪ್ರಕಾಶ್: ಆ ಕಾಲದಲ್ಲಿ 1978ರಲ್ಲಿ ಬಹಳ ತರುಣರಾದ ತಾವು ಈ ಸದನವನ್ನು ಪ್ರವೇಶ ಮಾಡಿದಿರಿ. ಅದೂ ಕೂಡ ನನಗೆ ಗೊತ್ತಿದೆ. 1978ರಲ್ಲಿ ನಾನು ಆಗ ಸೋತಿದ್ದೆ. ತಾವು MLA ಆಗಿ ಇಲ್ಲಿಗೆ ಬಂದಿದ್ದಿರಿ. ಆಗ ನಡೆದ ಘಟನೆಯನ್ನು ತಾವು ಹೇಳುತ್ತಿದ್ದೀರಿ, ಅದನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ, ಅಲ್ಲಗಳೆಯುವುದಿಲ್ಲ. ಅದೇ ರೀತಿಯಾಗಿ ಇಬ್ಬರು ಪೋಲೀಸರು ರಾಜೀವ್‌ಗಾಂಧಿಯವರ ಮನೆಯ gate ಮುಂದೆ ನಿಂತಿದ್ದಾರೆಂಬ ಕಾರಣಕ್ಕೆ ಬೇಷರತ್ತಾಗಿ ಕೊಟ್ಟಿದ್ದ ಬೆಂಬಲವನ್ನು ವಾಪಸ್ಸು ತೆಗೆದುಕೊಂಡಿರುವ ಉದಾಹರಣೆಗಳೂ ಇದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: It is a political action.

ಶ್ರೀ ಎಂ.ಪಿ.ಪ್ರಕಾಶ್: This is also a political action.

ಶ್ರೀ ದಿನೇಶ್ ಗುಂಡೂರಾವ್: ಅವರು CBIಗೆ ಕೊಡುತ್ತಾರೋ, ಇಲ್ಲವೋ, ಹೇಳಿಬಿಡಲಿ. ಈ ಚರ್ಚೆ ಎಲ್ಲೆಲ್ಲಿಗೋ ಹೋಗುತ್ತಿದೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: .. ..ಅವರ ಬಗ್ಗೆ ಅಪಾರವಾದ ಗೌರವವಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಅದಕ್ಕೂ ಇದಕ್ಕೂ ಏನು ಸಂಬಂಧ ಹೇಳಿ.

ಶ್ರೀ ಎನ್.ಚಲುವರಾಯಸ್ವಾಮಿ: ಇವರು ಬೇಕಾದರೆ ಯಾವುದನ್ನು ಬೇಕಾದರೂ reference ಮಾಡಿ ಉತ್ತರ ಕೊಡಬಹುದು, ಪ್ರಶ್ನೆ ಕೇಳಬಹುದು. ಆದರೆ, ಉತ್ತರ ಕೊಡುವವರು ಮಾತ್ರ ಯಾವುದೇ reference ಮಾಡುವಂತಿಲ್ಲ! ಬಹಳ ಬುದ್ಧಿವಂತರು ಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಸ್ವಲ್ಪ ಕೇಳಿ. ಇವೊತ್ತಿನ ಘಟನೆ ಬಗ್ಗೆ ನಾವು ನಿಮ್ಮನ್ನು ಕೇಳುತ್ತಿದ್ದೇವೆ. ನಾನು ಎಂದೂ ಕೂಡ Home Minister, Chief Minister, X Category, Z Category ಏಕೆ withdraw ಮಾಡಿದರು ಎಂಬುದನ್ನು ಹೇಳಲಿಲ್ಲ. ನಾವು ಹೇಳಿದ್ದು ಏನೆಂದರೆ, ಆ

Committeeಯಲ್ಲಿರತಕ್ಕಂಥವರು ಅಥವಾ a man who heads the Committee ಅವರು ವಿವೇಚನೆ ಮಾಡಿ ಇದನ್ನು ಮಾಡಬೇಕಾಗಿತ್ತು. ಏಕೆ ಮಾಡಿದರೆಂದು ಕೇಳಿದ್ದೇವೆ. ನೀವು with reference to ಆ date ಈ date ತೆಗೆದುಕೊಂಡು, ಹಿಂದಿನ ಸರ್ಕಾರ ಮಾಡಿದೆ ಎಂದು, ನಾಗಪ್ಪನವರಿಂದ ಚರಣಸಿಂಗ್‌ವರೆಗೂ ಹೊರಟರೆ ಅದು ಸರಿ ಅಲ್ಲ. ಇದರ ಅರ್ಥ ಏನೆಂದರೆ.. ..

ಅಧ್ಯಕ್ಷರು: ಅದು ಈ ದೇಶದ ದುರಂತ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈವೊತ್ತು ನಮಗೆ ಏನು ಬೇಕೆಂದರೆ, ಇದಕ್ಕೆ action ತೆಗೆದುಕೊಳ್ಳುತ್ತೀರೋ, ಇಲ್ಲವೋ ಎನ್ನುವ ಪ್ರಶ್ನೆ ಬಂದಾಗ, ನಾವು ಏಕೆ ತೆಗೆದುಕೊಳ್ಳುವುದಿಲ್ಲ ಎನ್ನುವುದಕ್ಕೆ ನೀವು ಉದಾಹರಣೆಗಳನ್ನು ಹೇಳಿಕೊಂಡು, ಇದಕ್ಕಾಗಿ ನಾವು ತೆಗೆದುಕೊಳ್ಳುವುದಿಲ್ಲ ಎಂದು ಈ ಸದನದಲ್ಲಿ ಸಮರ್ಥನೆ ಮಾಡಿಕೊಳ್ಳಬೇಕಾಗಿತ್ತು ಎಂದರೆ, ನಾವು ಉತ್ತರ ಕೇಳತಕ್ಕಂಥ ಅವಶ್ಯಕತೆಯೇ ಇಲ್ಲ. ನೀವು ಹೇಳಿಕೊಂಡು ಹೋಗಿ. ಏಕೆಂದರೆ, ಈಗ ನಾವೇನಾದರೂ ಅದನ್ನು ನಿಮಗೆ ಕೊಟ್ಟು ಹೇಳಿದ್ದರೆ, ನೀವೇ ಇದನ್ನು ಮಾಡಿಸಿದ್ದೀರಿ ಎಂದು ಹೇಳಿದ್ದರೆ, ನಾನು ಒಪ್ಪಿಕೊಳ್ಳುತ್ತೇನೆ. ಒಂದು ಘಟನೆ ನಡೆದಿದೆ, Police Constable ನಾಗಪ್ಪ ಮನೆಗೆ ಏಕೆ ಹೋಗಲಿಲ್ಲ, ನಿಮ್ಮ Sub Inspector, Circle Inspector ಇದ್ದಾಗಲೇ ಹಾಡುಹಗಲೇ ಚುಚ್ಚುತ್ತಿದ್ದಾನೆ, arrest ಏಕೆ ಮಾಡಲಿಲ್ಲವೆಂದು ನಾವು ಕೇಳಿದರೆ, ನಾಗಪ್ಪ ಮನೆಗೆ ಏಕೆ fire ಮಾಡಲಿಲ್ಲ, ಗುಂಡೇಟು.. ..ಅನಂತರ ದೇವರಾಜ್ ಅರಸು.. .. ಇಬ್ಬರು Police Constable ರಾಜೀವ್‌ಗಾಂಧಿಯವರ ಮನೆ ಮುಂದೆ.. ..ಏಕೆ withdraw ಮಾಡಿದಿರಿ? ಆ ಪ್ರಶ್ನೋತ್ತರಗಳನ್ನು ಕೊಡುವುದಕ್ಕಾಗಿಯೇ ನಾವು ಇಲ್ಲಿ ಕುಳಿತಿದ್ದೇವೆಯೇ? No. I never talked about that.

ಶ್ರೀ ಎಂ.ಪಿ.ಪ್ರಕಾಶ್: The Hon'ble member has raised this matter. ನಾವು ಕೊಡಬೇಕೇ, ಬೇಡವೇ? ಆದರೆ, ನೀವು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕಾಗಿ ನಾವು treasury benchನಲ್ಲಿದ್ದೇವೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಏನು ಅನ್ಯಾಯವಾಗಿದೆ ಅದರ ಬಗ್ಗೆ ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ಆಯಿತು. ಅನಂತರ ಅದಕ್ಕೆ ಉತ್ತರ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೋಸ್ಕರ, ನೀವು ಹಿಂದಿನ ಉದಾಹರಣೆಗಳನ್ನು quote ಮಾಡಿಕೊಂಡು ಬರೀ ಸಮರ್ಥನೆ ಮಾಡಿಕೊಂಡು ಇದನ್ನು ಮರೆಮಾಚುವುದಕ್ಕೆ ಹೋಗುತ್ತಿದ್ದೀರಿ. ಒಬ್ಬ inefficient SP ಹೇಗಿದ್ದಾನೆ, ಯಾಕೆ, ಉತ್ತರ ಕನ್ನಡದಲ್ಲಿ ಇರಲಿಲ್ಲವೇ ಅಥವಾ ನಿಮಗೆ ಗೊತ್ತಿಲ್ಲವೇ? ಕೇಂದ್ರ ಸರ್ಕಾರದ DPARನ Circular ಏನಿದೆ? ಒಂದೇ ಜಾತಿಗೆ ಸೇರಿದ ಇಬ್ಬರು SP ಮತ್ತು DC ಇರಬಾರದು ಜಾತಿ ಬೇರೆ ಇರಬಹುದು, ಗಂಡ–ಹೆಂಡತಿ ಆಗಿರಬಹುದು, ಇರಲಿ ಬಿಡಿ. ಒಬ್ಬರು ಪಂಜಾಬಿ ಇರಬಹುದು, ಇನ್ನೊಬ್ಬರು ಹೆಣ್ಣುಮಗಳು ಬೇರೆ ಜಾತಿಯವರಾಗಿರಬಹುದು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವೇ ಹಾಕಿಕೊಂಡಿದ್ದೇವೆ. ಆಡಳಿತ ಹೇಗೆ ನಡೆಸಬೇಕು, Weaker sectionಗೆ ಹೇಗೆ protection ಸಿಗಬೇಕು? ಅದೇ ರೀತಿ ಬೇರೆ ಬೇರೆ ಜನರು ಅಂತಹ Executive postನಲ್ಲಿರಬೇಕು, DCಯವರೂ ಬೇರೆಯವರಾಗಿರಬೇಕು, SPಯವರೂ ಬೇರೆ ಇರಬೇಕು ಮತ್ತು CEO ಕೂಡ ಬೇರೆಯವರು ಇರಬೇಕೆಂದಾಗ ಒಂದು ಸಾಮಾಜಿಕ ನ್ಯಾಯ ಸಿಗುತ್ತದೆ. ಆ ದೃಷ್ಟಿಯಿಂದ post ಮಾಡಬೇಕು ಎನ್ನತಕ್ಕ guide line ಇದ್ದಾರೂ ಅದನ್ನು ಧಿಕ್ಕರಿಸಿದ್ದಾರೆ. ಅದನ್ನು ಸಮರ್ಥನೆ ಮಾಡಿಕೊಂಡು ಹೇಳುತ್ತಿದ್ದೀರಿ. ನಿಮ್ಮ ಕಾಲದಲ್ಲಿ ಇರಲಿಲ್ಲವೇನೋ ಮುಂತಾಗಿ ಹೇಳುವುದಾದರೆ, ತಾವು ಈ ಸಮರ್ಥನೆ ಮಾಡಿಕೊಂಡರೆ, I think ನಾವು ಎಲ್ಲೋ ಹೋಗುತ್ತಿದ್ದೇವೆ ಎಂದು ಅನ್ನಿಸುತ್ತದೆ. ಅದನ್ನು ನಾವು ಇವರಿಂದ expect ಮಾಡಿರಲಿಲ್ಲ. ಅನೇಕ ಸಲ ಐವತ್ತು ವರ್ಷದಿಂದ ನೀವೇನು ಮಾಡಿದಿರಿ ಎಂದು ಹೇಳುತ್ತಾರೆ. ನನಗೆ ಗೊತ್ತು, ನೀವು ಹಿಂದೆ ಬಿದ್ದಿದ್ದೀರಿ, ನಾವು ಒಪ್ಪಿಕೊಳ್ಳುತ್ತೇವೆ. ಪಾಪ ಅವರು ಹೊಸದಾಗಿ ಬಂದಿದ್ದಾರೆ. ನಾವು ಅವರಿಗೆ ಜಾಸ್ತಿ ಹೇಳುವಂತಿಲ್ಲ. ನಾವು ಜಾಸ್ತಿ ಹೇಳಿದರೆ ನಾನು ಹೊಸದಾಗಿ ಬಂದಿದ್ದೇನೆ, ನೀವು ಬೇಕೆಂದೇ ನನ್ನ ಮೈಮೇಲೆ ಬೀಳುತ್ತೀರಿ ಎಂದು ಹೇಳುತ್ತಾರೆ. ಇದನ್ನು tolerate ಮಾಡಿದೆವು. ಆದರೆ, ಇವರಿಗೆ ಅನುಭವವಿದ್ದು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದಂಥವರು, ಲೋಹಿಯಾ ವಾದವನ್ನು ಜನರ ಮುಂದಿಟ್ಟುಕೊಂಡು ಊರೂರು ತಿರುಗಿದವರು, ಇವರು ಈ ಮಾತನ್ನು ಹೇಳಿದರೆ ಅದನ್ನು ನಾವು ಕೇಳಿಕೊಂಡು ಕೂರಬೇಕೇ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ, ಅಪ್ರಸ್ತುತ ವಿಷಯಗಳೆಲ್ಲಾ ಇದಕ್ಕೆ ಬಂದವು. ನ್ಯಾಯವಾಗಿ ನೋಡಿದರೆ ಇವತ್ತು ಇದೊಂದು ದುರ್ದೈವದ ಸಂಗತಿ. ಪೊಲೀಸರ ನಿಷ್ಕ್ರಿಯತೆಯ ಬಗ್ಗೆ ನಾವು ಕೂಡ ತಲೆತಗ್ಗಿಸುವಂತಾಗಿದೆ. ಅವರ ಮೇಲೆ ಕ್ರಮ ಕೈಗೊಂಡಿದ್ದೇವೆಂದು ಹೇಳಿದ್ದೇವೆ. ಆದರೆ ಅದನ್ನೆಲ್ಲಾ ಹೇಳುವಾಗ ಏಕೆ ಈ ಉತ್ತರವನ್ನು ಕೊಡುವುದಕ್ಕೆ ಬಂತು ಎಂದರೆ, ನೀವು category withdraw ಮಾಡಿದೀರಿ ಎಂದು ನನ್ನ ಮೇಲೆ ನೇರವಾದ ಆಪಾದನೆಯನ್ನು ಮಾಡಿದಿರಿ. ಒಬ್ಬರಲ್ಲ ಎಲ್ಲಾ ಸದಸ್ಯರು ಮಾತನಾಡಿದರು. ಅವರಿಗೆ ಮಾಹಿತಿಯ ಅಭಾವ ಇದ್ದ ಕಾಣಕ್ಕಾಗಿಯೇ, ಅವರು ಕಾಂಗ್ರೆಸ್ ಸದಸ್ಯರಾಗಿದ್ದರು ಎನ್ನುವ ಕಾರಣಕ್ಕಾಗಿಯೇ ನೀವು category ನ್ನು withdraw ಮಾಡಿ ಇವತ್ತು ಈ ಪ್ರಕರಣಕ್ಕೆ ನೇರವಾಗಿ ಜವಾಬ್ದಾರಿ ಎನ್ನತಕ್ಕ ಮಾತನ್ನು ಹೇಳಿದಾಗ ನಾವು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಜನತೆಗೆ ನಾವು ಉತ್ತರವನ್ನು ಕೊಡಬೇಕಲ್ಲ? ಬೇರೆ ಬೇರೆ ವಿಷಯಗಳನ್ನು ಎತ್ತಿದಾಗ ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗುತ್ತದೆ. ದೇವರಾಜ ಅರಸುರವರ ಮೇಲೆ ತೆಗೆದುಕೊಂಡಿರತಕ್ಕ ಆವತ್ತಿನ ಕ್ರಮ ರಾಜಕೀಯ ಸೇಡಿನಿಂದ ಆಗಿರತ್ತಕ್ಕದ್ದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ರಾಜಕೀಯ ಸೇಡಿನಿಂದ ಆಯಿತು ಎನ್ನುವ ಕಾರಣಕ್ಕಾಗಿಯೇ ಅವರು ಆ ಸಂಪ್ರದಾಯವನ್ನು ಮುರಿದು ಸಿ.ಬಿ.ಐ. ನವರಿಗೆ ಈ ರೀತಿಯ permission ತೆಗೆದುಕೊಳ್ಳಿ ಎಂದು ಹೇಳಿದರು. ವಾದಕ್ಕಾಗಿ ಯಾರೋ ಹಿಂದೆ ನಡೆದಿರುವ ಕತೆಯನ್ನು ನಾವು ಹೇಳಬೇಕಾದರೆ ಅದಕ್ಕೆ ಪ್ರವೊಕೇಷನ್ ಯಾವುದು? ಯಾವುದಾದರೂ ಒಂದು ಕ್ರಿಯೆಗೆ ಒಂದು ಪ್ರತಿಕ್ರಿಯೆ ಎನ್ನುವಂಥದ್ದು ಇರುತ್ತದೆ. ಆ ಕ್ರಿಯೆಗೆ ಪ್ರಚೋದನಕಾರಿಯಾದಂಥ ಪ್ರವೊಕೇಷನ್ ಬಂದಾಗ ಅದಕ್ಕೆ ಉತ್ತರ ಕೊಡಬೇಕಾಗಿರುವುದು ನಮ್ಮ ಧರ್ಮವಾಗಿರುವುದರಿಂದ ನಾನು ಹೇಳುತ್ತೇನೆ. ತಾವೂ ಅದನ್ನು ಅಲ್ಲಿಗೇ ಕೈಬಿಟ್ಟರೆ ನಾನು ನನ್ನ ಮಾತನ್ನು ಖಂಡಿತವಾಗಿ ವಾಪಸ್ ತೆಗೆದುಕೊಳ್ಳುತ್ತೇನೆ. ನೀವೆಲ್ಲರೂ ಮಾತನಾಡಿದ್ದಕ್ಕೆ ನಾನು ಏನು ಉತ್ತರ ಕೊಡಬೇಕಾಗಿತ್ತೋ ಅದನ್ನು ಸರ್ಕಾರ ಪರವಾಗಿ ಕೊಟ್ಟಿದ್ದೇನೆ. ಯಾವುದೇ ತಪ್ಪನ್ನು ಈ ಸರ್ಕಾರ ಮುಚ್ಚಿಡಲು ಪ್ರಯತ್ನ ಮಾಡುವುದಿಲ್ಲ. ಯಾರನ್ನೂ ರಕ್ಷಣೆ ಮಾಡಬೇಕಾದಂಥ ಅಗತ್ಯವಿಲ್ಲ. S.P ಯವರನ್ನು ನಾವು ವಾಪಸ್ ತೆಗೆದುಕೊಂಡಿದ್ದೇವೆ. ಎಲ್ಲಾ ಪೇದೆಗಳ

ಮೇಲೆ, ಕ್ರಮಕೈಗೊಂಡು ನಿಷ್ಕ್ರಿಯೆಯಾಗಿರತಕ್ಕ ಎಲ್ಲರನ್ನೂ ಅಮಾನತ್ತಿನಲ್ಲಿಟ್ಟಿದ್ದೇವೆ. ಸಿ.ಓ.ಡಿ. ತನಿಖೆಗೆ ಕೊಟ್ಟಿದ್ದೇವೆ. ಅವರು ಈಗಾಗಲೇ ಹೋಗಿ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. ಇದರೆ ಜೊತೆಗೆ ತನಿಖೆಯನ್ನು ಸಿ.ಐ.ಬಿ. ಗೆ ಕೊಡಬೇಕೆಂದೇನಿದೆ, ಅದರ ಮೂಲಕ ತಾವು ನಮ್ಮ ಪೊಲೀಸ್ ಅಧಿಕಾರಿಗಳ ಸಮರ್ಥನೆ ಬಗ್ಗೆ, ಅವರ ನಿಷ್ಪಕ್ಷಪಾತ ತನಿಖೆಯ ಬಗ್ಗೆ, ಸಾಮರ್ಥ್ಯದ ಬಗ್ಗೆ ಸಂಶಯಪಟ್ಟಂತೆ, ಆಗುತ್ತದೆ. ಇದನ್ನು ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಂದ ನಿರೀಕ್ಷೆ ಮಾಡಿರಲಿಲ್ಲ. ಅವರು ಗೃಹ ಮಂತ್ರಿಗಳಾಗಿ ಕೆಲಸ ಮಾಡಿದಂಥವರು. ಬಹಳ ವರ್ಷಗಳ ಕಾಲ ಮಂತ್ರಿಗಳಾಗಿದ್ದಂಥವರು. ಹಿಂದೆ ನಾಗಪ್ಪನವರ ಪ್ರಕರಣವಾದ ಸಂದರ್ಭವಿರಬಹುದು, ಬೇರೆ ಬೇರೆ ಪ್ರಕರಣವಾದಂಥ ಸಂದರ್ಭವಿರಬಹುದು, ಆಗ ಅವರು ನಮ್ಮ ಪೊಲೀಸರನ್ನು ಬಹಳ ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಿರಿಯರಾಗಿರುವ ಕಾರಣಕ್ಕಾಗಿಯೇ ನಾವು ಅವರ ಅಸಮರ್ಥತೆಯನ್ನು ಇಲ್ಲಿ ಮಾತನಾಡದೇ ಕರ್ನಾಟಕದ ಪೊಲೀಸ್ ಪಡೆಯಲ್ಲಿ ಬಹಳ ಉತ್ತಮವಾದ ಅಧಿಕಾರಿಗಳು ಇರುವುದರಿಂದ, ಮತ್ತು ಸಿ.ಬಿ.ಐ. ನಲ್ಲಿ ಕೆಲಸ ಮಾಡುತ್ತಿರುವವರ ಬಗ್ಗೆ ಸಹ ನಾವು ಅದೇ ತರಹದ ಕುರುಡು ನಂಬಿಕೆಯನ್ನು ಇಟ್ಟುಕೊಳ್ಳಬೇಕಾದಂಥ ಅಗತ್ಯತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಕುರುಡು ನಂಬಿಕೆಯಲ್ಲ. ಮಾನ್ಯ ಅಂಬೇಡ್ಕರ್‌ರವರು ಹೇಳಿರತಕ್ಕದ್ದು ಅವರಿಗೂ ಗೊತ್ತಿದೆ. ಕಾನೂನು ಎಷ್ಟೇ ಒಳ್ಳೆಯದಾಗಿದ್ದರೂ ಕೂಡ, ಸಂವಿಧಾನ ಎಷ್ಟೇ ಒಳ್ಳೆಯದಾಗಿದ್ದರೂ ಕೂಡ, ಸಂವಿಧಾನಕ್ಕೆ ತಕ್ಕಂತೆ ನಡೆದುಕೊಂಡು ಹೋಗುವ ಜನ ಒಳ್ಳೆಯವರಿಲ್ಲದಿದ್ದರೆ ಅದು ಕೆಟ್ಟದ್ದಾಗುತ್ತದೆ. However good a Constitution may be, it will turn out to be bad because those who are called upon to work with it, happen to be bad.ಆ ರೀತಿಯಾಗುತ್ತದೆ. ಕೆಲವು ಸಲ ನಮ್ಮ ಹಿಡಿತದ ಮೇಲೆ, ನಮ್ಮ ನಡವಳಿಕೆಯ ಮೇಲೆ ಅವರೂ ಕೂಡ ನಡೆಯುತ್ತಾರೆ. same ಸಿಬ್ಬಂದಿ ಇರುತ್ತಾರೆ. ಒಬ್ಬರು ಮಂತ್ರಿ ಬಂದರೆ corruption ಕಡಿಮೆಯಾಗುತ್ತದೆ. ಅದೇ ಇನ್ನೊಬ್ಬ ಮಂತ್ರಿ ಬಂದರೆ ಅದೇ ಇಲಾಖೆಯಲ್ಲಿ corruption ಜಾಸ್ತಿಯಾಗುತ್ತದೆ. ಏಕೆ ಈ ರೀತಿಯಾಗುತ್ತದೆ? Circumstances are like that. ಅದನ್ನು ನೀವು ಸಮರ್ಥನೆ ಮಾಡಿಕೊಂಡಿರಿ, ನಮ್ಮ

ಪೊಲೀಸ್‌ನವರು ಚೆನ್ನಾಗಿದ್ದಾರೆಂದು ನಾನು ಹೇಳಿದ್ದೇನೆ. ಯಾವಾಗ ಒಳ್ಳೆಯ ಕೆಲಸ ಮಾಡಿದ್ದಾರೋ ಆಗ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿದ್ದೇನೆ. ಅವರನ್ನು ಸಮರ್ಥನೆ ಮಾಡಿದ್ದೇನೆ. ನಿಮಗೂ ಕೂಡ ಗೊತ್ತಿದೆ. ನಮ್ಮ ಕಾಲದಲ್ಲಿ 750 sub inspection recruit ಆದರು. ಪ್ಯೂರ್ಲಿ ಅವರು ಮೆರಿಟ್ ಆಧಾರದ ಮೇಲೆ ಆಗಿದ್ದಾರೆ. ಯಾರ interference ಇಲ್ಲದೇ ನೇಮಕಾತಿ ಆಗಿದ್ದಾರೆ. ನಾವು ಅನೇಕ ಸಲ ಬೇರೆ ಬೇರೆ ಇಲಾಖೆಯಲ್ಲಿ discretion marks ಕೊಡುವಾಗ relax ಮಾಡಿದ್ದೇವೆ. ಆ ರೀತಿ discretion marks ಕೊಡುವಾಗ ಒಳ್ಳೆಯ ಅಧಿಕಾರಿ ಇದ್ದರೆ ಮೆರಿಟ್ ಹುಡುಗರಿಗೆ ಕೊಡುತ್ತಾನೆ. ಇಲ್ಲದಿದ್ದರೆ ತನಗೆ ಬೇಕಾದವರಿಗೆ ಕೊಟ್ಟು misuse ಮಾಡಿಕೊಳ್ಳುತ್ತಾನೆ. ಆ ದೃಷ್ಟಿಯಿಂದ ನಾವು ನೋಡಬೇಕೇ ಹೊರತು, ನೀವು ಹೀಗೆ ಹೇಳಿದಿರಲ್ಲಾ ಎಂದು ಪದೇ ಪದೇ ಚುಚ್ಚಿ ಮಾತನಾಡಿಕೊಂಡು ಹೋಗುವುದರಲ್ಲಿ ಏನಿದೆಯೋ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಯಾವಾಗಲೂ ಚುಚ್ಚಿಸಿಕೊಂಡವನಿಗೇ ನೋವು ಏನಿದೆ ಎಂದು ಗೊತ್ತಾಗುತ್ತದೆ. ಅವರು ಕೂಡ ಹೇಳಿದಂತೆ ಬಹಳ ಮುಖ್ಯವಾದ ಮಾತನ್ನು ಡಾ:ಅಂಬೇಡ್ಕರ್‌ರವರು ಹೇಳುತ್ತಾರೆ. Constitution is ride for immortality if the work of the man is entitled for it.

ಶ್ರೀ ಎನ್. ಧರ್ಮಸಿಂಗ್: ಚರ್ಚೆ ಬೇರೆ ಕಡೆಗೆ ಹೋಗುತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್: ಉತ್ತರ ಕೊಡಬೇಕಲ್ಲ?

ಶ್ರೀ ಎನ್. ಧರ್ಮಸಿಂಗ್: ಸುತ್ತಿಬಳಸಿ ಹೇಳುವುದನ್ನು ಕೇಳಲು ನಾವು ಕುಳಿತಿಲ್ಲ. ಇವತ್ತಿನ ದಿವಸ ನಾವು ನಿಮ್ಮ ವಿದ್ವತ್‌ನ್ನು ಕೇಳಲು ಬಂದಿಲ್ಲ. ಇವತ್ತು ತಾವು Parliamentary Affairs Minister ಆಗಿದ್ದೀರಿ. ಇದು ಬೇರೆ ಸಂದರ್ಭದಲ್ಲಿ ಹೇಳತಕ್ಕಂಥ ಮಾತು. ಇವತ್ತು ಮುಖ್ಯಮಂತ್ರಿಗಳಿದ್ದಾರೆ, ತಾವು ಇದ್ದೀರಿ, recent ಆಗಿ ವಿಜಯ್‌ಕುಮಾರ್ ಹತ್ಯೆಯೇನಾಗಿದೆ. ಹೊಸಪೇಟೆಯಲ್ಲಿ ಹಾಕಿದರು ಎಂದು ನೀವು ಹೇಳಿದಿರಿ. ಗೋಲಿ ಹಾರಿಸಿಯೇ ಓಡಿಹೋಗಿರಬಹುದು, ಅದು different. ಇಲ್ಲಿ civil dispute ಬಗ್ಗೆ ಬಹಳ ಮಾತಾಡಿದ್ದೀರಿ ಎಂದು ನಾವು ಹೇಳಿದ್ದೇವೆ. ಅವರೆಲ್ಲರೂ ಹೋಗಿ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿದ್ದಾರೆ. ನಾವು spotಗೆ ಹೋಗಿದ್ದೇವೆ. Spotನಲ್ಲಿ ಹೋದಾಗ ಅಲ್ಲಿ ವಿಠ್ಠಲ್ ಎನ್ನತಕ್ಕವನು ಬಂದು ಚುಚ್ಚಿ

ಕರುಳುಕತ್ತರಿಸುವ ಕೆಲಸವನ್ನೇನು ಪೊಲೀಸ್‌ನವರೆದುರು ಮಾಡಿದ್ದಾನೆ ಅದನ್ನು ಪ್ರಸ್ತಾಪ ಮಾಡಿದ್ದೇವೆ. ಈ ರಾಜ್ಯದಲ್ಲಿ ಸರ್ಕಾರ ಎಂಬುದು ಇಲ್ಲ. ಪೊಲೀಸ್ ಇಲಾಖೆ ಕೆಲಸ ಮಾಡುತ್ತಿಲ್ಲ. ಒಬ್ಬ ಮಾಜಿ ಮಂತ್ರಿ, ಶಾಸಕರ ಪುತ್ರನ ಕೊಲೆ ಈ ರೀತಿ ಆಗಿರುವುದರ ಬಗ್ಗೆ ನಾವು ಕೇಳಿದ್ದೇವೆ. ನೀವು ನೇರವಾದ ಉತ್ತರವನ್ನು ಕೊಡಬೇಕು. ಅದನ್ನು ಬಿಟ್ಟು ನೀವು ಸುತ್ತು ಬಳಸಿ ಅಲ್ಲಿ ಈ ಪ್ರಕರಣವಾಯಿತು, ಇಲ್ಲಿ ಈ ಪ್ರಕರಣವಾಯಿತು ಎಂದು ಹೇಳುವುದಲ್ಲ. ಇವತ್ತು ಬೀದರಲ್ಲಿ ಆದಂಥ ಘಟನೆಯೇನಿದೆ–conspiracy angle ಏನೋ ಇದೆ. ಗುರುಪಾದಪ್ಪನವರು ನಮ್ಮ ಕಾಂಗ್ರೆಸ್ ಪಕ್ಷದವರು ಎಂದು ನೇರವಾಗಿ ಹೇಳಿದ್ದೇವೆ. ಇವತ್ತು ಈ ರೀತಿಯಾಗಿ ಎಸ್.ಪಿ. ಯವರು spectator ಆಗಿ ಏನು ನೋಡುತ್ತಿದ್ದಾರೆ ಅದರ ಬಗ್ಗೆ ತಾವು ಉತ್ತರ ಕೊಟ್ಟಿಲ್ಲ. ಸರ್ಕಾರ ಇಲ್ಲಿ fail ಆಗಿದೆ. 1983 ರಲ್ಲಿ ಗುಲ್ಬರ್ಗಾದಲ್ಲಿ ಕ್ರಾಂತಿ ಪತ್ರಿಕೆಯ ಸಂಪಾದಕರಾದ ಸಿದ್ದರಾಮೇಶ್ವರ ಎಂಬುವವರ ಕೊಲೆಯಾಯಿತು. ನಾನು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಆವತ್ತು ಗುಲ್ಬರ್ಗಾದಲ್ಲಿದ್ದೆವು. 9.30 ಗಂಟೆಗೆ ಸಿದ್ದರಾಮೇಶ್ವರರವರ ಕೊಲೆಯಾದಮೇಲೆ we have protested. ಇಲ್ಲಿ ಚಂದ್ರೇಗೌಡರು Speaker ಆಗಿದ್ದರು. House ನಡೆಯಲು ಅವಕಾಶ ಕೊಡಲಿಲ್ಲ. ಆದರೆ ಆವತ್ತು ನಾರಾಯಣ್‌ರವರು ಎಸ್.ಪಿ. ಯಾಗಿದ್ದರು. ಅವರನ್ನು serviceನಿಂದಲೇ ಅಮಾನತ್ತು ಮಾಡಲಾಯಿತು. ಹೆಗ್ಡೆಯವರು ಗುಲ್ಬರ್ಗಾಕ್ಕೆ ಹೋದಾಗ ಅವರ ಮನೆಯವರಿಗೆ ಭೇಟಿಯಾಗಿ ಸಾಂತ್ವನವನ್ನು ಸಹ ಹೇಳಿಬಂದ ಘಟನೆ ತಮಗೂ ಗೊತ್ತಿರಬಹುದು. ಇವತ್ತು ನಾವು ಏನು ಹೇಳುತ್ತೇವೆಂದರೆ, ಸರ್ಕಾರ ಇದೆ ಎನ್ನುವಂಥ ನಿಮ್ಮ presenceನ್ನು ತೋರಿಸಬೇಕಾಗಿದೆ. You have to create a confidence. ವಿಶ್ವಾಸ ಮೂಡಿಸತಕ್ಕ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿಲ್ಲ. ಈ ರೀತಿ ಶಾಸಕರ ಪುತ್ರರನ್ನು ಅಮಾನುಷವಾಗಿ ಕೊಲೆ ಮಾಡತಕ್ಕ ರೀತಿಯಲ್ಲಿ, ಇವತ್ತು ಬೀದರ್ ಜಿಲ್ಲೆಯ ಎಲ್ಲಾ ಕಡೆ ಜನಾಭಿಪ್ರಾಯ ತಮ್ಮ ವಿರುದ್ಧ ಇದೆ. ನೀವು ಸುಮ್ಮನೆ ಹೇಳಿಕೆಯ ಮೂಲಕ ಎಲ್ಲಾ ಹೇಳಬಹುದು. ಅದು ಇದೆ ಇದು ಇದೆ ಎಂದು ಕೇಸನ್ನೆಲ್ಲಾ ಹೇಳತಕ್ಕದ್ದಲ್ಲ. You are the Home Minister of the State. You are a most experienced person. We never expected this type of reply. ಮುಖ್ಯಮಂತ್ರಿಯವರು ಇದ್ದಾರೆ, ನಿಮ್ಮ ಸರ್ಕಾರದ ಮೇಲೆ

ವಿಶ್ವಾಸ ಇಲ್ಲ. ಇವತ್ತು ಪೊಲೀಸ್ ಇಲಾಖೆ fail ಆಗಿದೆ. ತಮ್ಮ ಸರ್ಕಾರದ ಒಂದು ವರ್ಷದ ಅವಧಿ ಪೂರ್ಣಗೊಂಡ ಬಗ್ಗೆ ವಿಜ್ರಂಭಣೆಯಿಂದೇನು ಪತ್ರಿಕೆಯಲ್ಲಿ ಹೇಳುತ್ತಿದ್ದೀರಿ ಆವತ್ತೇ ಈ ಕೊಲೆ ಪ್ರಕರಣವಾಗಿದೆ. ಆದ್ದರಿಂದ ತಮ್ಮ ಮೇಲೆ ವಿಶ್ವಾಸ ಇಲ್ಲ. Utterly you have failed. ಇದಕ್ಕೆ ಸಮರ್ಪಕವಾದ ಉತ್ತರ ತಮ್ಮಿಂದ ಸಿಕ್ಕಿಲ್ಲವೆಂದು ಹೇಳಿ ನಾವು ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡುತ್ತಿದ್ದೇವೆ.

[ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರ ಸಭಾತ್ಯಾಗ]

ಅಧ್ಯಕ್ಷರು: ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸಭೆಯು 1 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರಲು ತೀರ್ಮಾನಿಸಿತು]

[ಸದನವು ಪುನ: ಮಧ್ಯಾಹ್ನ 3.00 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತ್ತು., ಸಭಾಧ್ಯಕ್ಷರು ಪೀಠದಲ್ಲಿದ್ದರು]

ಆ) ಕಾವೇರಿ ಮಂಡಳಿಯ ಅಂತಿಮ ತೀರ್ಪಿನ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಇವತ್ತು ಕಾವೇರಿ ತೀರ್ಪು ಬಂದಿದೆ, ಕರ್ನಾಟಕಕ್ಕೆ ತೀವ್ರ ಅನ್ಯಾಯವಾಗಿದೆ. ಎಷ್ಟು ತೀವ್ರವೆಂದರೆ, ಇತಿಹಾಸದಲ್ಲಿ ನಾವು ಯಾರೂ ನೆನೆಸಿರಲಿಲ್ಲ. ಈ ರೀತಿಯಾದ ತೀರ್ಪು ಬರುತ್ತದೆಂದು ನಾವು ಯಾರು ಚಿಂತನೆ ಮಾಡಿರಲಿಲ್ಲ. 16 ವರ್ಷಗಳ ನಮ್ಮ ನಿರಂತರ ಹೆ ೋರಾಟ, ಎಲ್ಲಾ ರೀತಿಯ ಹೋರಾಟ ಆಗಿದೆ, ಬಂದಂತಹ ಅನೇಕ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದ್ದಾಯಿತು. ನ್ಯಾಯ ಮಂಡಳಿಯ ಮುಂದೆ ನಮ್ಮ ಎಲ್ಲಾ ವಾದವನ್ನು ಸಮರ್ಥವಾಗಿ ಮಂಡಿಸಿದ್ದೇವೆ. ನೂರಾರು ಸರ್ವಪಕ್ಷಗಳ ನಿಯೋಗಗಳು ಹೋಗಿವೆ. ಮಧ್ಯಂತರ ಆದೇಶದ ಪ್ರಕಾರ ತಮಿಳು ನಾಡಿಗೆ 205 TMC ಕೊಡಬೇಕೆಂದು ಇತ್ತು. ಈಗ ಒಂದಕ್ಕೆ ಎರಡರಷ್ಟು, 419 TMC ನೀರು ತಮಿಳು ನಾಡಿಗೆ, ಕರ್ನಾಟಕಕ್ಕೆ 270 TMC ನೀರು, ಕೊಡಬೇಕೆಂದು ತೀರ್ಪು ಬಂದಿದೆ. ಬೆಂಗಳೂರಿಗೆ ಕುಡಿಯುವುದಕ್ಕೆ ನೀರಿಲ್ಲ. ಮತ್ತೆ ನಮ್ಮ ರೈತರಿಗೆ ನೀರಿಲ್ಲ, ಮುಂದಿನ ಬೆಳೆಯನ್ನು ಬೆಳಯುವುದಕ್ಕೆ ನಮ್ಮ ಕೈಯಿಂದ ಆಗುವುದಿಲ್ಲ. ಕಾವೇರಿ ತೀರ್ಪು ಕರ್ನಾಟಕದ ಜನತೆಗೆ ಮರಣಶಾಸನವಾಗಿದೆ. ಈವತ್ತು ಬಂದಿರುವ